ಬುಧವಾರ, ಡಿಸೆಂಬರ್ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 350 | ಪುಟ 14
• www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ಆಳ-ಅಗಲ
ಕೊರೊನಾ ಉಪತಳಿ ಜೆಎನ್.1: ಬೇಕಿಲ್ಲ ದಿಗಿಲು

‘ದೂರಸಂಪರ್ಕ ಮಸೂದೆ ಅಭಿವೃದ್ಧಿಯ ದ್ಯೋತಕ’ 10
ಜ್ಞಾನವಾಪಿ: ಮಸೀದಿ ಸಮಿತಿ ಅರ್ಜಿ ತಿರಸ್ಕೃತ 11

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 71,437 ▲ | 21,453 ▲ | ₹64,070 (ಬೆಂಗಳೂರು) ▲ | ₹75,600 (ಬೆಂಗಳೂರು) ▼ | 83.18 ▼ |



### ‘ಇಂಡಿಯಾ’ ಸಭೆ: ಎಐಸಿಸಿ ಅಧ್ಯಕ್ಷರ ಹೆಸರು ಸೂಚಿಸಿದ ಮಮತಾ ಬ್ಯಾನರ್ಜಿ, ಕೇಜ್ರಿವಾಲ್

# ಖರ್ಗೆ ಪ್ರಧಾನಿ ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ

**ನವದೆಹಲಿ:** 2024ರ ಲೋಕಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಘೋಷಿಸಬೇಕು ಎಂದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮೈತ್ರಿಕೂಟದ ಸಭೆಯಲ್ಲಿ ಆಗ್ರಹಿಸಿದರು. ಆದರೆ ಖರ್ಗೆ ಅವರು, ‘ನಾವು ಮೊದಲು ಗೆಲ್ಲೋಣ, ನಂತರ (ಇಂತಹ ವಿಷಯಗಳನ್ನು) ತೀರ್ಮಾನಿಸೋಣ’ ಎಂದರು.

ಖರ್ಗೆ ಅವರನ್ನು ‘ಇಂಡಿಯಾ’ ಮೈತ್ರಿಕೂಟದ ಸಂಚಾಲಕರನ್ನಾಗಿ ನೇಮಿಸುವ ಅಥವಾ ಅವರನ್ನು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸುವ ಪ್ರಸ್ತಾವವನ್ನು ಮಮತಾ ಅವರು ಸಭೆಯ ಮುಂದೆ ಇರಿಸಿದರು. ಇದಕ್ಕೆ ಕೇಜ್ರಿವಾಲ್ ಬೆಂಬಲ ಸೂಚಿಸಿದರು.

ಮಮತಾ ಮತ್ತು ಕೇಜ್ರಿವಾಲ್ ಅವರ ಈ ನಡೆಯು ಸಭೆಯಲ್ಲಿ ಪಾಲ್ಗೊಂಡಿದ್ದ ಇತರ ನಾಯಕರ ಆಶ್ಚರ್ಯಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಖರ್ಗೆ ಹೆಸರು ಪ್ರಸ್ತಾಪಿಸಿರುವುದು ಕೆಲವು ನಾಯಕರ ಅನುಮಾನಕ್ಕೆ ಕೂಡ ಕಾರಣವಾಗಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾದರೆ ಉತ್ತಮ ಎಂಬ ಮಾತು ಈಚೆಗೆ ಬಂದಿತ್ತು. ನಿತೀಶ್ ಅವರನ್ನು ದುರ್ಬಲಗೊಳಿಸುವ ಉದ್ದೇಶದಿಂದಲೇ ಖರ್ಗೆ ಹೆಸರು ಪ್ರಸ್ತಾಪಿಸಲಾಗಿದೆ ಎಂದು ಕೆಲವರು ಭಾವಿಸಿದ್ದಾರೆ.


‘ಇಂಡಿಯಾ’ ಮೈತ್ರಿಕೂಟದ ಸಭೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರೊಂದಿಗೆ ಮಾತನಾಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

> **ನಮ್ಮ ಬಳಿ ಅಗತ್ಯ ಸಂಖ್ಯೆಯ ಸಂಸದರು ಇಲ್ಲದಿದ್ದರೆ, ಪ್ರಧಾನಿ ಯಾರಾಗಬೇಕು ಎಂಬ ಬಗ್ಗೆ ಮಾತನಾಡುವುದರಲ್ಲಿ ಏನು ಅರ್ಥವಿರುತ್ತದೆ? ಹೀಗಾಗಿ, ನಾವು ನಮ್ಮ ಸಂಖ್ಯಾ ಬಲವನ್ನು ಹೆಚ್ಚಿಸಬೇಕು**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಮೈತ್ರಿಕೂಟದ ಸದಸ್ಯ ಪಕ್ಷಗಳ ನಡುವೆ ಸೀಟು ಹಂಚಿಕೆಯು ಆದಷ್ಟು ಬೇಗ ಆಗಬೇಕು ಎಂಬ ಬೇಡಿಕೆಯು ಸಭೆಯಲ್ಲಿ ವ್ಯಕ್ತವಾಯಿತು. ಸೀಟು ಹಂಚಿಕೆಯು ಈ ತಿಂಗಳ 31ಕ್ಕೆ ಮೊದಲು ಅಂತಿಮವಾಗಬೇಕು ಎಂದು ಟಿಎಂಸಿ ಒತ್ತಾಯಿಸಿತು. ಸೀಟು ಹಂಚಿಕೆ ಜನವರಿ 15ಕ್ಕೆ ಮೊದಲು ಅಂತಿಮಗೊಂಡರೆ ಸಾಕು ಎಂದು ಇನ್ನು ಕೆಲವರು ಹೇಳಿದರು.

**ಮುಖ್ಯಾಂಶಗಳು**
- ನಿತೀಶ್ ಕುಮಾರ್ ದುರ್ಬಲಗೊಳಿಸಲು ಖರ್ಗೆ ಹೆಸರು?
- ಸೀಟು ಹಂಚಿಕೆ ಶೀಘ್ರ ನಡೆಸಲು ಎಲ್ಲರ ಸಹಮತ
- ಸಂಸದರ ಅಮಾನತು ಖಂಡಿಸಿ 22ರಂದು ದೇಶದಾದ್ಯಂತ ಪ್ರತಿಭಟನೆ

ತಮ್ಮನ್ನು ಪ್ರಧಾನಿ ಅಭ್ಯರ್ಥಿಯೆಂದು ಘೋಷಿಸಬೇಕು ಎಂಬ ಪ್ರಸ್ತಾವ ಸಭೆಯಲ್ಲಿ ಬಂದಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದಾಗ ಖರ್ಗೆ ಅವರು, ‘ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂಬುದನ್ನು ನಾನು ಅವರೆಲ್ಲರಿಗೂ ಹೇಳಿದ್ದೇನೆ... ನಾವು ಮೊದಲು ಗೆಲ್ಲೋಣ. ನಾವು ಎಲ್ಲರೂ ಒಟ್ಟಾಗಿ ಗೆಲ್ಲೋಣ. ನಂತರ ಇದರ ಬಗ್ಗೆ ತೀರ್ಮಾನಿಸೋಣ’ ಎಂದು ಉತ್ತರಿಸಿದರು.

ಇಂಡಿಯಾ ಮೈತ್ರಿಕೂಟವನ್ನು ಮುನ್ನಡೆಸುವ ಕೆಲಸವನ್ನು ಕಾಂಗ್ರೆಸ್ ಮಾಡಬೇಕು ಎಂದು ಕೇಜ್ರಿವಾಲ್ ಅವರು ಸಭೆಯಲ್ಲಿ ಹೇಳಿದರು. ಒಕ್ಕೂಟಕ್ಕೆ ಒಬ್ಬ ನಾಯಕ ಬೇಕು ಎಂಬ ಅಭಿಪ್ರಾಯವು ಮಮತಾ ಅವರ ಕಡೆಯಿಂದ ವ್ಯಕ್ತವಾಯಿತು. ಖರ್ಗೆ ಅವರು ವಿಶ್ವಾಸಾರ್ಹ ದಲಿತ ನಾಯಕ. ಅವರನ್ನು ಮೈತ್ರಿಕೂಟದ ನಾಯಕರನ್ನಾಗಿ ಘೋಷಿಸಿದರೆ, ಒಳ್ಳೆಯ ಸಂದೇಶವೊಂದನ್ನು ರವಾನಿಸಿದಂತೆ ಆಗುತ್ತದೆ ಎಂದು ಕೂಡ ಮಮತಾ ವಿವರಿಸಿದರು ಎಂದು ಮೂಲಗಳು ತಿಳಿಸಿವೆ.

ಮಮತಾ ಅವರ ಸಲಹೆಗೆ ಕೇಜ್ರಿವಾಲ್ ಬೆಂಬಲ ಸೂಚಿಸಿದ ನಂತರ, ಖರ್ಗೆ ಅವರು ಈ ಚರ್ಚೆಯನ್ನು ಕೊನೆಗೊಳಿಸಿದರು. ತಾವು ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತ ಮಾತ್ರ ಎಂದು ಖರ್ಗೆ ಅವರು ಸಭೆಗೆ ತಿಳಿಸಿದರು. ಮೈತ್ರಿಕೂಟದ ನಾಯಕ ಯಾರಿರಬೇಕು ಎಂಬುದನ್ನು ಚರ್ಚಿಸಲು ಇದು ಸೂಕ್ತವಾದ ಸಮಯವಲ್ಲ. ಬಿಜೆಪಿಯನ್ನು ಸೋಲಿಸಲು ಅನುಸರಿಸಬೇಕಿರುವ ಕಾರ್ಯತಂತ್ರ ಯಾವುದಿರಬೇಕು ಎಂಬುದನ್ನು ಚರ್ಚಿಸುವ ಅಗತ್ಯ ಇದೆ ಎಂದು ಖರ್ಗೆ ಅವರು ಸಭೆಗೆ ವಿವರಿಸಿದರು ಎಂದು ಮೂಲಗಳು ಹೇಳಿವೆ.

11 ನೇ ಪುಟ ನೋಡಿ

## ಜನವರಿಯಲ್ಲಿ ನಿತ್ಯ 1030 ಕ್ಯೂಸೆಕ್ ನೀರು ಬಿಡಲು ಶಿಫಾರಸು

ಪ್ರಜಾವಾಣಿ ವಾರ್ತೆ

ಕಾವೇರಿ ನದಿ

**ನವದೆಹಲಿ:** ತಮಿಳುನಾಡಿಗೆ ಜನವರಿ ತಿಂಗಳಿನಲ್ಲಿ ಪ್ರತಿದಿನ 1,030 ಕ್ಯೂಸೆಕ್ ನೀರು ಹರಿಸಲು ಕಾವೇರಿ ನೀರು ನಿಯಂತ್ರಣ ಸಮಿತಿಯು ಕರ್ನಾಟಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮಂಗಳವಾರ ಇಲ್ಲಿ ನಡೆದ ಸಮಿತಿಯ 91ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಅಧಿಕಾರಿಗಳು ಭಾಗಿಯಾಗಿದ್ದರು. ಡಿಸೆಂಬರ್‌ನ ಉಳಿದ ದಿನಗಳಲ್ಲಿ ಹಾಗೂ ಜನವರಿ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದ ಪ್ರಕಾರ ನೀರು ಹರಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತು. ಡಿಸೆಂಬರ್ ಉಳಿದ ಅವಧಿಗೆ ರಾಜ್ಯವು ಪ್ರತಿದಿನ 3,128 ಕ್ಯೂಸೆಕ್ ನೀರು ಹರಿಸಬೇಕಿದೆ.

‘ರಾಜ್ಯದ ನಾಲ್ಕು ಜಲಾಶಯಗಳಲ್ಲಿ ಈ ವರ್ಷ ಒಳಹರಿವು ಶೇ 52.84ರಷ್ಟು ಕಡಿಮೆಯಾಗಿದೆ.’ ಎಂದು ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದರು.

7ನೇ ಪುಟ ನೋಡಿ

## ಐಪಿಎಲ್ ದಾಖಲೆಗೆ ಮಿಚೆಲ್ ಒಡೆಯ



**ದುಬೈ:** ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿಯೇ ಅತಿ ದೊಡ್ಡ ಮೌಲ್ಯ ಗಳಿಸಿದ ದಾಖಲೆ ಬರೆದರು. ಮುಂದಿನ ವರ್ಷದ ಟೂರ್ನಿಗಾಗಿ ಮಂಗಳವಾರ ನಡೆದ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಎಡಗೈ ವೇಗಿ ಸ್ಟಾರ್ಕ್ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ಖರೀದಿಸಿತು. ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಅವರಿಗೂ ಶುಕ್ರದೆಸೆ ಒಲಿಯಿತು. ಈ ಪ್ರಕ್ರಿಯೆಯಲ್ಲಿ ಒಟ್ಟು ಆರು ಆಟಗಾರರು ₹ 10 ಕೋಟಿಗೂ ಹೆಚ್ಚಿನ ಮೌಲ್ಯ ಗಳಿಸಿದರು. ಅದರಲ್ಲಿ ಭಾರತದ ಹರ್ಷಲ್ ಪಟೇಲ್ ಕೂಡ ಒಬ್ಬರು.

ಇಂಡಿಯನ್ ಪ್ರೀಮಿಯರ್ ಲೀಗ್

| ಆಟಗಾರ | | ಮೊತ್ತ | ತಂಡ |
|---|---|---|---|
| ಮಿಚೆಲ್ ಸ್ಟಾರ್ಕ್ | (ಆಸ್ಟ್ರೇಲಿಯಾ ಬೌಲರ್) | ₹ 24.75 ಕೋಟಿ | ಕೋಲ್ಕತ್ತ ನೈಟ್‌ರೈಡರ್ಸ್ |
| ಪ್ಯಾಟ್ ಕಮಿನ್ಸ್ | (ಆಸ್ಟ್ರೇಲಿಯಾ ಆಲ್‌ರೌಂಡರ್) | ₹ 20.50 ಕೋಟಿ | ಸನ್‌ರೈಸರ್ಸ್ ಹೈದರಾಬಾದ್ |
| ಹರ್ಷಲ್ ಪಟೇಲ್ | (ಭಾರತದ ಬೌಲರ್) | ₹ 11.75 ಕೋಟಿ | ಪಂಜಾಬ್ ಕಿಂಗ್ಸ್ |
| ಅಲ್ಜಾರಿ ಜೋಸೆಫ್ | (ವೆಸ್ಟ್ ಇಂಡೀಸ್ ಬೌಲರ್) | ₹ 11.50 ಕೋಟಿ | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| ಡೆರಿಲ್ ಮಿಚೆಲ್ | (ನ್ಯೂಜಿಲೆಂಡ್ ಬ್ಯಾಟರ್) | ₹ 14 ಕೋಟಿ | ಚೆನ್ನೈ ಸೂಪರ್ ಕಿಂಗ್ಸ್ |
| ಸ್ಪೆನ್ಸರ್ ಜಾನ್ಸನ್ | (ಆಸ್ಟ್ರೇಲಿಯಾ ಬೌಲರ್) | ₹ 10 ಕೋಟಿ | ಗುಜರಾತ್ ಟೈಟನ್ಸ್ |

12

## ಕೋವಿಡ್ ಗಡಿ ಜಿಲ್ಲೆಗಳಲ್ಲಿ ಎಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇರಳ ಹಾಗೂ ತಮಿಳುನಾಡು ರಾಜ್ಯಕ್ಕೆ ಹೊಂದಿಕೊಂಡಿರುವ ಗಡಿ ಭಾಗದ ಜಿಲ್ಲೆಗಳಲ್ಲಿ ಅಗತ್ಯ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆ ನಡೆಸಿ, ವರದಿ ಸಲ್ಲಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಕೇರಳದಲ್ಲಿ ಕೊರೊನಾ ವೈರಾಣುವಿನ ಜೆಎನ್. 1 ರೂಪಾಂತರಿ ಪತ್ತೆಯಾಗಿರುವುದರಿಂದ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ.

‘ಕೇರಳದಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಆಗುತ್ತಿರುವುದರಿಂದ ರಾಜ್ಯದಲ್ಲಿಯೂ ಮುಂಜಾಗ್ರತಾ ಕ್ರಮಗಳ ಪಾಲನೆ ಅವಶ್ಯಕ. ಗಡಿಭಾಗದ ಜಿಲ್ಲೆಗಳಲ್ಲಿ ಸರ್ವೇಕ್ಷಣೆ ಹೆಚ್ಚಿಸುವ ಮತ್ತು ನಿರ್ಬಂಧ ಹೇರುವ ಅಗತ್ಯವಿಲ್ಲ. ಸರ್ಕಾರಿ, ಖಾಸಗಿ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಎಲ್ಲ ‘ಸಾರಿ’ ಪ್ರಕರಣಗಳು (ತೀವ್ರ ಉಸಿರಾಟದ ಸಮಸ್ಯೆ) ಹಾಗೂ ತಲಾ 20 ಐಎಲ್‌ಐ ಪ್ರಕರಣಗಳಲ್ಲಿ (ಶೀತ ಜ್ವರ ಮಾದರಿ ಅನಾರೋಗ್ಯ ಸಮಸ್ಯೆ) ಒಂದು ಪ್ರಕರಣವನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು’ ಎಂದು ತಿಳಿಸಿದ್ದಾರೆ.

7ನೇ ಪುಟ ನೋಡಿ

### ಕಲಾಪಕ್ಕೆ ಅಡ್ಡಿ: ಅಮಾನತುಗೊಂಡವರ ಸಂಖ್ಯೆ 141ಕ್ಕೆ ಏರಿಕೆ

# ಮತ್ತೆ 49 ಸಂಸದರ ಅಮಾನತು

ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ಸದನದ ಕಲಾಪಕ್ಕೆ ಅಡ್ಡಿಪಡಿಸಿದ ವಿರೋಧ ಪಕ್ಷಗಳ ಸಂಸದರ ಅಮಾನತು ಪ್ರಕ್ರಿಯೆ ಮುಂದುವರಿದಿದ್ದು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಮಂಗಳವಾರ 49 ಸದಸ್ಯರನ್ನು ಅಮಾನತು ಮಾಡಿದರು. ಇದರೊಂದಿಗೆ ಈ ಚಳಿಗಾಲದ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಮಾನತುಗೊಂಡ ಒಟ್ಟು ಸದಸ್ಯರ ಸಂಖ್ಯೆ 141ಕ್ಕೆ ಏರಿಕೆಯಾಗಿದೆ.

ಸಂಸತ್ತಿನ ಭದ್ರತಾ ಲೋಪ ವಿಷಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಗೆ ಪಟ್ಟುಹಿಡಿದು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆ ಕೂಗಿದ್ದಕ್ಕೆ ಸೋಮವಾರ ಒಂದೇ ದಿನ 78 ಸದಸ್ಯರನ್ನು ಅಮಾನತು ಮಾಡಲಾಗಿತ್ತು. ಅದಕ್ಕೂ ಮುನ್ನ, ಡಿಸೆಂಬರ್ 14 ರಂದು 14 ಸದಸ್ಯರು ಅಮಾನತು ಆಗಿದ್ದರು.

ಸಂಸತ್ತಿನ ಇತಿಹಾಸದಲ್ಲಿ 100ಕ್ಕೂ ಅಧಿಕ ಸದಸ್ಯರು ಅಮಾನತುಗೊಂಡಿರುವುದು ಇದೇ ಮೊದಲು. 1989ರ ಮಾರ್ಚ್‌ನಲ್ಲಿ 63 ಸಂಸದರನ್ನು ಒಂದು ವಾರಗಳ ಕಾಲ ಅಮಾನತು ಮಾಡಿದ್ದು ಇದುವರೆಗಿನ ‘ದಾಖಲೆ’ ಆಗಿತ್ತು.

ಅಮಿತ್ ಶಾ ಹೇಳಿಕೆಗೆ ಆಗ್ರಹಿಸಿ ಪಟ್ಟು ಸಡಿಲಿಸದ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಕೂಡಾ ಲೋಕಸಭೆ ಕಲಾಪಕ್ಕೆ ಅಡ್ಡಿಪಡಿಸಿದರು. ಸುಗಮ ಕಲಾಪಕ್ಕೆ ಎಲ್ಲ ಸದಸ್ಯರು ಸಹಕಾರ ನೀಡಬೇಕೆಂದು ಸ್ಪೀಕರ್ ಮನವಿ ಮಾಡಿದರೂ, ವಿಪಕ್ಷಗಳ ಸದಸ್ಯರು ಅದಕ್ಕೆ ಕಿವಿಗೊಡಲಿಲ್ಲ.

11ನೇ ಪುಟ ನೋಡಿ

### ಭದ್ರತಾ ವೈಫಲ್ಯದ ಹಿಂದಿರುವವರಿಗೆ ವಿಪಕ್ಷಗಳ ಬೆಂಬಲ: ಪ್ರಧಾನಿ

**ನವದೆಹಲಿ (ಪಿಟಿಐ):** ‘ಲೋಕಸಭೆಯ ಭದ್ರತಾ ವೈಫಲ್ಯವನ್ನು ವಿರೋಧ ಪಕ್ಷಗಳು ಬೆಂಬಲಿಸುತ್ತಿರುವುದು ದುರದೃಷ್ಟಕರ ಮತ್ತು ಖಂಡನಾರ್ಹ. ಭದ್ರತಾ ವೈಫಲ್ಯಕ್ಕೆ ಕಾರಣವಾದವರಿಗೆ ವಿರೋಧಪಕ್ಷಗಳು ಮೌನವಾಗಿ ಮತ್ತು ಪರೋಕ್ಷವಾಗಿ ಬೆಂಬಲ ನೀಡುತ್ತಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಆರೋಪಿಸಿದರು.

‘2024ರ ಲೋಕಸಭೆ ಚುನಾವಣೆಯಲ್ಲಿ ವಿಪಕ್ಷಗಳು ಮತ್ತಷ್ಟು ಸ್ಥಾನಗಳನ್ನು ಕಳೆದುಕೊಳ್ಳಲಿವೆ ಎಂಬುದು ಅವರ ನಡವಳಿಕೆಯಿಂದಲೇ ತಿಳಿಯುತ್ತದೆ’ ಎಂದರು.

11ನೇ ಪುಟ ನೋಡಿ

## ₹42,270 ಕೋಟಿಗೆ ವಾರಸುದಾರರೇ ಇಲ್ಲ!

**ನವದೆಹಲಿ (ಪಿಟಿಐ):** ದೇಶದಲ್ಲಿ ಸರ್ಕಾರಿ ಹಾಗೂ ಖಾಸಗಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿಯು 2023ರ ಮಾರ್ಚ್ ಅಂತ್ಯದ ವೇಳೆಗೆ ಶೇ 28ರಷ್ಟು ಏರಿಕೆಯಾಗಿ, ₹42,270 ಕೋಟಿಗೆ ತಲುಪಿದೆ ಎಂದು ಕೇಂದ್ರ ಸರ್ಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

ಈ ಪೈಕಿ ಸರ್ಕಾರಿ ವಲಯದ ಬ್ಯಾಂಕ್‌ಗಳಲ್ಲಿ ₹36,185 ಕೋಟಿ ಇದ್ದರೆ, ಖಾಸಗಿ ಬ್ಯಾಂಕ್‌ಗಳಲ್ಲಿ ₹6,087 ಕೋಟಿ ಠೇವಣಿ ಇದೆ. 2022ರ ಹಣಕಾಸು ವರ್ಷದಲ್ಲಿ ಈ ಎರಡೂ ವಲಯದ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿಯು ₹32,934 ಕೋಟಿ ಇತ್ತು.



ವಾರಸುದಾರರು ಇಲ್ಲದ ಠೇವಣಿಗಳ ಪ್ರಮಾಣ ತಗ್ಗಿಸಲು ಹಾಗೂ ಸರಿಯಾದ ಹಕ್ಕುದಾರರಿಗೆ ಠೇವಣಿ ಮರಳಿಸಲು ಆರ್‌ಬಿಐ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಭಾಗವತ್ ಕರಾಡ್ ಅವರು, ಸಂಸತ್‌ನ ಮೇಲ್ಮನೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

10 ನೇ ಪುಟ ನೋಡಿ

# ‘ಜಿ.ಪಂ, ತಾ.ಪಂ ಮೀಸಲು ನಿಗದಿ ತಿಂಗಳಲ್ಲಿ ಪೂರ್ಣ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲು ನಿಗದಿ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದು ‘ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ’ ರಚಿಸಲು ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ಜಿ.ಪಂ ಮತ್ತು ತಾ.ಪಂ ಕ್ಷೇತ್ರಗಳ ಗಡಿಗಳನ್ನು ನಿರ್ಧರಿಸುವ ಹಾಗೂ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆಯನ್ನು ಈಗಾಗಲೇ ಚುರುಕುಗೊಳಿಸಲಾಗಿದೆ. ಕೊಡಗು ಜಿಲ್ಲೆಯೊಂದನ್ನು ಬಿಟ್ಟು ಉಳಿದ 30 ಜಿಲ್ಲೆಗಳ ಕ್ಷೇತ್ರ ಪುನರ್‌ವಿಂಗಡಣೆ ಅಧಿಸೂಚನೆಯನ್ನು ಇದೇ 19ರಂದು (ಮಂಗಳವಾರ) ಸಂಜೆ ಪ್ರಕಟಿಸಲಾಗುತ್ತಿದ್ದು, ಮುಂದಿನ ಏಳು ದಿನಗಳಲ್ಲಿ ಕೊಡಗು ಜಿಲ್ಲೆಯ ಕ್ಷೇತ್ರ ಪುನರ್‌ವಿಂಗಡಣೆ ಅಧಿಸೂಚನೆ ಪ್ರಕಟಿಸಲಾಗುವುದು’ ಎಂದರು.

5ನೇ ಪುಟ ನೋಡಿ

**ಒಳ ಪುಟ**


ಧನಕರ್ ಅಣಕಿಸಿದ ಟಿಎಂಸಿ ಸಂಸದ 11

**ಚಿನಕುರಳಿ**

ಪ್ರಕಾಶ್ ಶೆಟ್ಟಿ




### ₹18,177 ಕೋಟಿ ಬಿಡುಗಡೆಗೆ ಸಿದ್ದರಾಮಯ್ಯ ಕೋರಿಕೆ

# ಬರ ಪರಿಹಾರ: ಪ್ರಧಾನಿಗೆ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಇಲ್ಲಿ ಭೇಟಿಯಾಗಿ ಕರ್ನಾಟಕದ ಬರ ಪರಿಸ್ಥಿತಿಯ ಕುರಿತು ವಿವರಿಸಿ, ಶೀಘ್ರವೇ ₹18,177 ಕೋಟಿ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಎನ್‌ಡಿಆರ್‌ಎಫ್‌ನಿಂದ ₹4,663.12 ಕೋಟಿ ಇನ್‌ಪುಟ್ ಸಬ್ಸಿಡಿ, ₹12,577.86 ಕೋಟಿ ತುರ್ತು ಪರಿಹಾರ, ಕುಡಿಯುವ ನೀರಿಗಾಗಿ ₹566.78 ಕೋಟಿ ಹಾಗೂ ಜಾನುವಾರುಗಳ ಸಂರಕ್ಷಣೆಗಾಗಿ ₹363.68 ಕೋಟಿ ಒದಗಿಸುವಂತೆ ಕೋರಿದರು.

‘ರೈತರಿಗೆ ಇನ್‌ಪುಟ್ ಸಬ್ಸಿಡಿ ನೀಡಲು 2015-16ರ ಕೃಷಿ ಗಣತಿಯನ್ನು ಪರಿಗಣಿಸಲಾಗುತ್ತಿದ್ದು, ಇದು 8 ವರ್ಷ ಹಳೆಯ ಮಾಹಿತಿಯಾಗಿದೆ. ಅಲ್ಲದೆ, ರಾಜ್ಯದಲ್ಲಿ ರೈತರ ದತ್ತಾಂಶವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಪಿಎಂ-ಕಿಸಾನ್ ಯೋಜನೆಗೆ ಇದನ್ನು ಪರಿಗಣಿಸಲಾಗುತ್ತಿದೆ. ಇದರನ್ವಯ ರಾಜ್ಯದಲ್ಲಿ 83 ಲಕ್ಷ ಜನ ಸಣ್ಣ ಮತ್ತು ಅತಿ ಸಣ್ಣ ರೈತರಿದ್ದು, ಪರಿಹಾರ ವಿತರಣೆಗೆ ಈ ದತ್ತಾಂಶ ಪರಿಗಣಿಸಬೇಕು’ ಎಂದೂ ಅವರು ಮನವಿ ಮಾಡಿದರು.

‘ಬರ ಪರಿಹಾರಕ್ಕಾಗಿ ಮೊದಲ ಪ್ರಸ್ತಾವನೆಯನ್ನು ಕೇಂದ್ರ ಕೃಷಿ ಸಚಿವಾಲಯಕ್ಕೆ ಸೆಪ್ಟೆಂಬರ್ 22ರಂದು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡವು ಅಕ್ಟೋಬರ್ ತಿಂಗಳಲ್ಲಿ ಅಧ್ಯಯನ ನಡೆಸಿ ವರದಿ ಸಲ್ಲಿಸಿತ್ತು. ಆ ಬಳಿಕ ಇನ್ನೂ 21 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿತ್ತು’ ಎಂದಿದ್ದಾರೆ.


ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಸಲ್ಲಿಸಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಜತೆಗಿದ್ದಾರೆ

5ನೇ ಪುಟ ನೋಡಿ


HEARZAP™
DECEMBER
TO REMEMBER SALE
HUGE DISCOUNTS
ON HEARING AIDS
HEARING ON-THE-GO
with Rechargeable hearing aids
Wireless Connectivity
Long Battery Life
Enhanced Speech Clarity
Bluetooth Compatibility
0% EMI
REXTON
ಅತ್ಯಾಧುನಿಕ ಶ್ರವಣ ಸಾಧನಗಳು ಲಭ್ಯವಿದೆ
PHILIPS
REXTON
*condition apply
ಚಿಂತೆ ಮುಕ್ತ ಶ್ರವಣ ಸಾಧನ ಪ್ರಯೋಗ
ಖಾತರಿಪಡಿಸಿದ ರಿಯಾಯಿತಿ
ಹೆಚ್ಚಿನ ವಾರಂಟಿ
ತಕ್ಷಣ ನಿಮ್ಮ ಮನೆಯಲ್ಲಿ ಶ್ರವಣ ಪರೀಕ್ಷೆಗಾಗಿ ಬುಕ್ ಮಾಡಿ
Google Play
App Store
ನೇಮಕಾತಿಗಾಗಿ ಕರೆ ಮಾಡಿ
9659 455 455
ಬೆಂಗಳೂರಿನಲ್ಲಿ ನಮ್ಮ ಶಾಖೆಗಳು
ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ • ಕಲ್ಯಾಣ ನಗರ
ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ
ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್

ಬಿಸಿಬೇಳೆ ಬಾತ್, ಪೊಂಗಲ್, ಚೌಚೌಬಾತ್, ಬನ್ಸ್, ಖೀರು, ಮುದ್ದೆ, ಚಪಾತಿ ಲಭ್ಯ

# ಇಂದಿರಾ ಕ್ಯಾಂಟೀನ್: ಹೊಸ ಮೆನು

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಬಿಬಿಎಂಪಿ ಟೆಂಡರ್ ಕರೆದಿದ್ದು, ಆಹಾರದ ಮೆನುವಿನಲ್ಲಿ ರಾಗಿ ಮುದ್ದೆ, ಇಡ್ಲಿ, ಮಂಗಳೂರು ಬನ್ಸ್, ಬಿಸಿಬೇಳೆ ಬಾತ್ ಸೇರಿದಂತೆ ಹಲವು ತಿನಿಸುಗಳನ್ನು ನಿಗದಿಪಡಿಸಿದೆ.

ಉಪಾಹಾರದಲ್ಲಿ ಇಡ್ಲಿ, ಪುಲಾವ್, ಬಿಸಿಬೇಳೆ ಬಾತ್, ಖಾರಾಬಾತ್, ಪೊಂಗಲ್, ಬ್ರೆಡ್ ಜಾಮ್, ಚೌಚೌಬಾತ್ ತಿನಿಸುಗಳು ಒಂದೊಂದು ದಿನ ಲಭ್ಯವಾಗಲಿವೆ. ಮಧ್ಯಾಹ್ನ ಹಾಗೂ ರಾತ್ರಿ ಊಟದಲ್ಲಿ ರಾಗಿಮುದ್ದೆ, ಚಪಾತಿ, ಅನ್ನ ಸಾಂಬಾರು ಇರಲಿವೆ.

ಮಾವಿನಕಾಯಿ ಲಭ್ಯವಿರುವ ಕಾಲದಲ್ಲಿ ಯಾವುದಾದರೂ ಒಂದು ಉಪಾಹಾರದಲ್ಲಿ ಮಾವಿನಕಾಯಿ ಚಿತ್ರಾನ್ನವನ್ನು ಗ್ರಾಹಕರಿಗೆ ನೀಡಲು ನಿರ್ಧರಿಸಲಾಗಿದೆ.

‘ಕಳೆದ 10 ವರ್ಷಗಳಲ್ಲಿ 5 ವರ್ಷ ಆಹಾರ ಪೂರೈಸಿ ಅನುಭವ ಹೊಂದಿರಬೇಕಾದ ಗುತ್ತಿಗೆದಾರರು, ವಿದ್ಯುತ್, ನೀರಿನ ಶುಲ್ಕವನ್ನು ಪಾವತಿಸಬೇಕು. ಗ್ರಾಹಕರಿಗೆ ಕುಡಿಯುವ ನೀರು ಒದಗಿಸಬೇಕು. ಸೋಡಾ, ಕೃತಕ ರಾಸಾಯನಿಕ ಬಣ್ಣ, ರುಚಿಕರ ಪೌಡರ್, ಅಜಿನೊಮೊಟೊ, ವನಸ್ಪತಿ ಅಥವಾ ಇತರೆ ಕಲುಷಿತ ಎಣ್ಣೆಯನ್ನು ಬಳಸುವಂತಿಲ್ಲ. ಸೋನಾ ಮಸೂರಿ ಪ್ರೀಮಿಯಂ ಗುಣಮಟ್ಟದ ಅಕ್ಕಿ, ಸಫೋಲಾ/ ಧಾರಾ ಅಥವಾ ಅದಕ್ಕೆ ಸಮನಾದ ಸೂರ್ಯಕಾಂತಿ ಎಣ್ಣೆ, ಅನ್ನಪೂರ್ಣ, ಪಿಲ್ಸ್‌ಬರ್ರಿ, ಆಶೀರ್ವಾದ್ ಅಥವಾ ಅದಕ್ಕೆ ಸಮನಾದ ಬ್ರ್ಯಾಂಡೆಡ್ ಗೋಧಿ ಹಿಟ್ಟನ್ನು ಬಳಸಬೇಕು’ ಎಂದು ಷರತ್ತು ವಿಧಿಸಲಾಗಿದೆ.

ಜ.16ರಿಂದ ಹೊಸ ಗುತ್ತಿಗೆದಾರರಿಂದ ಹೊಸ ಮೆನು ಒದಗಿಸಲು ಬಿಬಿಎಂಪಿ ಯೋಜಿಸಿದೆ.






ಪೂರ್ವ ಹಾಗೂ ಯಲಹಂಕ ವಲಯದಲ್ಲಿರುವ 51 ಇಂದಿರಾ ಕ್ಯಾಂಟೀನ್, 4 ಮೊಬೈಲ್ ಇಂದಿರಾ ಕ್ಯಾಂಟೀನ್‌ಗಳ ಎರಡು ವರ್ಷದ ಗುತ್ತಿಗೆ ಮೊತ್ತ ₹35.92 ಕೋಟಿ

ಪಶ್ಚಿಮ ಹಾಗೂ ದಾಸರಹಳ್ಳಿ ವಲಯದಲ್ಲಿರುವ 45 ಇಂದಿರಾ ಕ್ಯಾಂಟೀನ್, 5 ಮೊಬೈಲ್ ಇಂದಿರಾ ಕ್ಯಾಂಟೀನ್‌ಗಳ ಎರಡು ವರ್ಷದ ಗುತ್ತಿಗೆ ಮೊತ್ತ ₹36.48 ಕೋಟಿ

### ಮೆನುನಲ್ಲಿ ಏನಿದೆ?



**ಉಪಾಹಾರ (ಬೆಳಿಗ್ಗೆ 7ರಿಂದ 10)– ಪ್ಲೇಟ್‌ಗೆ ₹5**
- ಇಡ್ಲಿ (3/ 150 ಗ್ರಾಂ)– ಸಾಂಬಾರ್ (100 ಎಂ.ಎಲ್)
- ಇಡ್ಲಿ (3/ 150 ಗ್ರಾಂ)– ಚಟ್ನಿ (100 ಎಂ.ಎಲ್)
- ವೆಜ್ ಪುಲಾವ್ (150 ಗ್ರಾಂ)– ರಾಯಿತಾ (100 ಎಂ.ಎಲ್)
- ಬಿಸಿಬೇಳೆ ಬಾತ್ (225 ಗ್ರಾಂ)– ಬೂಂದಿ (15 ಗ್ರಾಂ)
- ಖಾರಾಬಾತ್ (225 ಗ್ರಾಂ)– ಚಟ್ನಿ (100 ಎಂ.ಎಲ್)
- ಪೊಂಗಲ್ (225 ಗ್ರಾಂ)– ಚಟ್ನಿ (100 ಎಂ.ಎಲ್)
- ಖಾರಾಬಾತ್ (150 ಗ್ರಾಂ)–ಚಟ್ನಿ (100 ಎಂ.ಎಲ್)– ಕೇಸರಿಬಾತ್ (75 ಗ್ರಾಂ).
- ಬ್ರೆಡ್– ಜಾಮ್ (2 ಪೀಸ್)
- ಮಂಗಳೂರು ಬನ್ಸ್ (1 ಪೀಸ್/ 40–50 ಗ್ರಾಂ)
- ಬನ್ಸ್ (1 ಪೀಸ್/ 40–50 ಗ್ರಾಂ)

**ಮಧ್ಯಾಹ್ನದ ಊಟ (ಮಧ್ಯಾಹ್ನ 1ರಿಂದ 3)– ಪ್ಲೇಟ್‌ಗೆ ₹10**
- ಅನ್ನ (300 ಗ್ರಾಂ)– ತರಕಾರಿ ಸಾಂಬಾರು (150 ಗ್ರಾಂ), ಖೀರು (75 ಎಂ.ಎಲ್)
- ಅನ್ನ (300 ಗ್ರಾಂ)– ತರಕಾರಿ ಸಾಂಬಾರು (150 ಗ್ರಾಂ), ರಾಯಿತಾ (100 ಎಂ.ಎಲ್)
- ಅನ್ನ (300 ಗ್ರಾಂ)– ತರಕಾರಿ ಸಾಂಬಾರು (150 ಗ್ರಾಂ), ಮೊಸರನ್ನ (100 ಎಂ.ಎಲ್)
- ರಾಗಿ ಮುದ್ದೆ (2/ 100 ಗ್ರಾಂ)– ಸೊಪ್ಪಿನ ಸಾರು, ಖೀರು (75 ಎಂ.ಎಲ್)
- ಚಪಾತಿ (2/ 40 ಗ್ರಾಂ)– ಸಾಗು, ಖೀರು (75 ಎಂ.ಎಲ್)

**ರಾತ್ರಿ ಊಟ (ಸಂಜೆ 7.30ರಿಂದ ರಾತ್ರಿ 9)– ಪ್ಲೇಟ್‌ಗೆ ₹10**
- ಅನ್ನ (300 ಗ್ರಾಂ)– ತರಕಾರಿ ಸಾಂಬಾರು (150 ಗ್ರಾಂ)
- ಅನ್ನ (300 ಗ್ರಾಂ)– ತರಕಾರಿ ಸಾಂಬಾರು (150 ಗ್ರಾಂ), ರಾಯಿತಾ (100 ಎಂ.ಎಲ್)
- ರಾಗಿ ಮುದ್ದೆ (2)– ಸೊಪ್ಪಿನ ಸಾರು
- ಚಪಾತಿ (2)– ವೆಜ್‌ಗ್ರೇವಿ

## ತಮಿಳುನಾಡು: ಸಚಿವ ಪೊನ್ಮುಡಿ ಅಪರಾಧಿ

ಪ್ರಜಾವಾಣಿ ವಾರ್ತೆ

**ಚೆನ್ನೈ:** ಆದಾಯಕ್ಕೆ ಮೀರಿ ಆಸ್ತಿ ಗಳಿಸಿದ ಪ್ರಕರಣದಲ್ಲಿ ತಮಿಳುನಾಡು ಉನ್ನತ ಶಿಕ್ಷಣ ಸಚಿವ ಕೆ.ಪೊನ್ಮುಡಿ ಅಪರಾಧಿ ಎಂದು ಮದ್ರಾಸ್ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.

ಪೊನ್ಮುಡಿ ನಿರ್ದೋಷಿ ಎಂದು ವಿಚಾರಣಾ ನ್ಯಾಯಾಲಯ 2016ರ ಏಪ್ರಿಲ್ 18ರಂದು ನೀಡಿದ್ದ ಆದೇಶವನ್ನು ನ್ಯಾಯಮೂರ್ತಿ ಜಿ.ಜಯಚಂದ್ರನ್ ರದ್ದುಗೊಳಿಸಿದ್ದಾರೆ. ಶಿಕ್ಷೆ ಪ್ರಮಾಣವನ್ನು ಡಿ.21ರಂದು ಪ್ರಕಟಿಸಲಾಗುವುದು. ಅಂದು, ಪೊನ್ಮುಡಿ ಹಾಗೂ ಅವರ ಪತ್ನಿ ನ್ಯಾಯಾಲಯದಲ್ಲಿ ಹಾಜರಿರಬೇಕು ಎಂದು ನ್ಯಾಯಮೂರ್ತಿಗಳು ಸೂಚಿಸಿದ್ದಾರೆ.

ಮೇಲ್ಮನವಿ ಸಲ್ಲಿಸಲು ಅನುಕೂಲವಾಗಲು ತೀರ್ಪನ್ನು ಅಮಾನತಿನಲ್ಲಿಡಬೇಕು ಎಂದು ಪೊನ್ಮುಡಿ ಪರ ವಕೀಲರು ಮನವಿ ಮಾಡಿದ್ದು, ಈ ಕುರಿತು 21ರಂದು ತೀರ್ಮಾನ ಪ್ರಕಟಿಸಲಾಗುವುದು ಎಂದೂ ನ್ಯಾಯಮೂರ್ತಿ ತಿಳಿಸಿದ್ದಾರೆ.

ಪೊನ್ಮುಡಿ, ಪತ್ನಿಯನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

## ಕ್ರಿಸ್‌ಮಸ್ ರಜೆ: ಒಂದು ಸಾವಿರ ಹೆಚ್ಚುವರಿ ಬಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ರಿಸ್‌ಮಸ್ ರಜೆಗೆ ಕೆಎಸ್‌ಆರ್‌ಟಿಸಿಯಿಂದ ಒಂದು ಸಾವಿರ ಹೆಚ್ಚುವರಿ ಬಸ್ ಸೇವೆ ಕಲ್ಪಿಸಲಾಗಿದೆ. ಡಿ.22ರಿಂದ (ಶುಕ್ರವಾರ) ಡಿ.24ರ ವರೆಗೆ (ಭಾನುವಾರ) ನಗರದ ವಿವಿಧ ಬಸ್ ನಿಲ್ದಾಣಗಳಿಂದ ಈ ಹೆಚ್ಚುವರಿ ಬಸ್ ಸೇವೆ ಒದಗಿಸಲಾಗುತ್ತಿದೆ.

ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್‌ಗೆ ಬಸ್ ತೆರಳಲಿವೆ.



ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿಗೆ ಹೆಚ್ಚುವರಿ ಬಸ್ ಹೊರಡಲಿವೆ.

ಶಾಂತಿನಗರದ ಬಸ್ ನಿಲ್ದಾಣದಿಂದ ಮಧುರೈ, ಕುಂಭಕೋಣಂ, ತಿರುಚ್ಚಿ, ಚೆನ್ನೈ, ಕೊಯಮತ್ತೂರ್, ವಿಜಯವಾಡ, ಹೈದರಾಬಾದ್ ಸೇರಿದಂತೆ ತಮಿಳುನಾಡು ಹಾಗೂ ಆಂಧ್ರಪ್ರದೇಶ, ತೆಲಂಗಾಣಕ್ಕೆ ಬಸ್‌ಗಳು ತೆರಳಿವೆ.

ಡಿ.25ರಂದು ಮತ್ತಷ್ಟು ವಿಶೇಷ ಬಸ್‌ಗಳು ಸಂಚರಿಸಲಿವೆ. ಸಂಸ್ಥೆಯ ವೆಬ್‌ಸೈಟ್ www.ksrtc.karnataka.gov.in ಮೂಲಕ ಆಸನಗಳನ್ನು ಕಾಯ್ದಿರಿಸಬಹುದು.

ನಾಲ್ಕು ಅಥವಾ ಹೆಚ್ಚು ಜನರ ಪ್ರಯಾಣದ ಟಿಕೆಟ್ ಬುಕ್ಕಿಂಗ್ ಮೇಲೆ ಶೇ 5ರಷ್ಟು ಹಾಗೂ ಹೋಗಿ ಬರುವ ಟಿಕೆಟ್‌ಗಳನ್ನು ಒಮ್ಮೆಲೇ ಬುಕ್ ಮಾಡಿದರೆ ಬರುವ ಪ್ರಯಾಣದ ಟಿಕೆಟ್ ಮೇಲೆ ಶೇ 10ರಷ್ಟು ರಿಯಾಯಿತಿ ಸಿಗಲಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

## ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳು 24ಕ್ಕೆ

**ಬೆಂಗಳೂರು:** ಸುವರ್ಣ ಕರ್ನಾಟಕ ಸಂಭ್ರಮದ ಅಂಗವಾಗಿ ಸುಕಲಾದರ್ಪಣ ಆರ್ಟ್ ರೆಫ್ಲೆಕ್ಸ್ ಸಂಸ್ಥೆ ವತಿಯಿಂದ ಇದೇ 24ರಂದು ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದೆ.

ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಮಕ್ಕಳಿಗಾಗಿ ಸಂಗೀತ, ನೃತ್ಯ, ಚಿತ್ರಕಲೆ ಹಾಗೂ ವೇಷಭೂಷಣ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಗಳಲ್ಲಿ 8, 13 ಮತ್ತು 14 ವರ್ಷದೊಳಗಿನ ಮಕ್ಕಳು ಮಾತ್ರ ಭಾಗವಹಿಸಬಹುದು. ಆಸಕ್ತರು ಇದೇ 20ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ವಿಜೇತರಿಗೆ ಬಹುಮಾನ ನೀಡಲಾಗುವುದು’ ಎಂದು ಪ್ರಕಟಣೆ ತಿಳಿಸಿದೆ.

**ಹೆಚ್ಚಿನ ಮಾಹಿತಿಗೆ:** 93806 71947ಗೆ ಸಂಪರ್ಕಿಸಿ.

# ‘ನಿರ್ಧಾರಗಳಿಗೂ ತಂತ್ರಜ್ಞಾನ ಬಳಕೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಹುತೇಕ ಕಂಪನಿಗಳು ನಿರ್ಧಾರ ತೆಗೆದುಕೊಳ್ಳಲೂ ತಂತ್ರಜ್ಞಾನವನ್ನು ಅವಲಂಬಿಸುತ್ತವೆ. ಅದಕ್ಕಾಗಿಯೇ ಹೊಸ ತಂತ್ರಜ್ಞಾನ ಹಾಗೂ ವ್ಯವಹಾರದ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಅಹಮದಾಬಾದ್‌ನ ಐಐಎಂ ನಿರ್ದೇಶಕ ಭರತ್ ಭಾಸ್ಕರ್ ಹೇಳಿದರು.

ಐಐಎಂಬಿ ಆವರಣದಲ್ಲಿ ಆಯೋಜಿಸಿದ್ದ ಭಾರತ ಕಾರ್ಯತಂತ್ರ ಸಮ್ಮೇಳನದ (ಐಎಸ್‌ಸಿ) ಸಮಾರೋಪದಲ್ಲಿ ಅವರು ಮಾತನಾಡಿದರು.

‘ಮ್ಯಾನೇಜ್‌ಮೆಂಟ್ ಅಕಾಡೆಮಿ’ಗಳಲ್ಲಿನ ಪ್ರಮುಖ ಬದಲಾವಣೆಗಳಿಗೂ ಮಾಹಿತಿ ತಂತ್ರಜ್ಞಾನ ಕಾರಣವಾಗಿದೆ. ಶೈಕ್ಷಣಿಕ ಸಂಸ್ಥೆಗಳೂ ತಂತ್ರಜ್ಞಾನದ ಬಳಕೆ ಹೆಚ್ಚಿಸಬೇಕು. ಈ ಬದಲಾವಣೆಗೆ ಹೊಂದಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಬೆಂಗಳೂರಿನ ಐಐಎಂ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಭಾರತ ಕಾರ್ಯತಂತ್ರ ಸಮ್ಮೇಳನದ ಸಮಾರೋಪದಲ್ಲಿ ರವೀಂದ್ರ ಚಿತ್ತೂರು, ಭರತ್ ಭಾಸ್ಕರ್, ರಿಷಿಕೇಶ ಟಿ. ಕೃಷ್ಣನ್, ಮದನ್ ಪಿಲ್ಲುಟ್ಲಾ ಉಪಸ್ಥಿತರಿದ್ದರು

‘ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್’ ಕುಲಪತಿ ಮದನ್ ಪಿಲ್ಲುಟ್ಲಾ, ಪ್ರತಿಷ್ಠಿತ ಸಂಸ್ಥೆಗಳು ತಂತ್ರಜ್ಞಾನಕ್ಕೆ ಅಗತ್ಯವಾದ ಸಂಪನ್ಮೂಲ, ಬೌದ್ಧಿಕ ಸಾಮರ್ಥ್ಯ ಹೊಂದಿದ್ದರೂ, ಕೆಲವೊಮ್ಮೆ ತಂತ್ರಜ್ಞಾನ ಬದಲಾವಣೆಗಳ ವೇಗಕ್ಕೆ ಹೊಂದಿಕೊಳ್ಳಲು ಸಾಧ್ಯವಾಗದೆ ಹಿನ್ನಡೆ ಅನುಭವಿಸುತ್ತವೆ ಎಂದರು.

ಐಐಎಂಬಿಯ ನಿರ್ದೇಶಕ ರಿಷಿಕೇಶ ಟಿ ಕೃಷ್ಣನ್, ಡಿಜಿಟಲ್ ವರ್ಗಾಂತರ, ಪಾವತಿ, ಸಾಮಾಜಿಕ ಸಂಶೋಧನೆಯಂತಹ ವಿದ್ಯಮಾನಗಳನ್ನು ಆಸಕ್ತಿದಾಯಕವಾಗಿ ರೂಪಿಸುವುದು ಹಾಗೂ ಅಂತಿಮ ಹಂತಕ್ಕೆ ತೆಗೆದುಕೊಂಡು ಹೋಗುವುದು ಮುಖ್ಯ. ಇರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಸಾಧನೆ ಮಾಡಬೇಕು. ಸಂಶೋಧನೆಗಳು ಹೊಸ ಒಳನೋಟಗಳನ್ನು ಒಳಗೊಂಡಿರಬೇಕು ಎಂದು ಹೇಳಿದರು.

ಜಿಯೊ ಸಂಸ್ಥೆಯ ಡೀನ್ ರವೀಂದ್ರ ಚಿತ್ತೂರು ಉಪಸ್ಥಿತರಿದ್ದರು.

# ಸಫಾಯಿ ಕರ್ಮಚಾರಿಗಳಿಗೆ ಸೌಲಭ್ಯ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ವಿವಿಧ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಸಫಾಯಿ ಕರ್ಮಚಾರಿ ಆಂದೋಲನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಸುಪ್ರೀಂ ಕೋರ್ಟ್ ಆದೇಶದಂತೆ 2013ರಲ್ಲಿ ನಗರದಲ್ಲಿ 203 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. ರಾಜ್ಯದಲ್ಲಿ ಒಟ್ಟು 726 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. ಶೇ 60ರಷ್ಟು ಮಂದಿಗಷ್ಟೇ ಸೌಲಭ್ಯ ಸಿಕ್ಕಿದೆ. ಉಳಿದ ಫಲಾನುಭವಿಗಳಿಗೆ 10 ವರ್ಷಗಳಿಂದ ಯಾವುದೇ ರೀತಿಯ ಅನುದಾನವನ್ನು ಸರ್ಕಾರ ನೀಡಿಲ್ಲ ಎಂದು ದೂರಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಸಫಾಯಿ ಕರ್ಮಚಾರಿ ಆಂದೋಲನ್ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಮನೆ, ನಿವೇಶನ, ಪರ್ಯಾಯ ಉದ್ಯೋಗ, ಆರೋಗ್ಯ ಕಾರ್ಡ್ ವಿತರಣೆ ಮಾಡಿಲ್ಲ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಶುಲ್ಕವನ್ನೂ ಸಹ ಪಾವತಿ ಮಾಡಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಸೌಲಭ್ಯ ಅಥವಾ ಅನುದಾನವನ್ನು ಈ ಸಮುದಾಯದವರಿಗೆ ನೀಡಿರುವುದಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಗರ ಅಧ್ಯಕ್ಷ ಜಿ.ಎನ್. ನಾಗೇಂದ್ರ ಅವರು ಹೇಳಿದರು.

## ಕೋವಿಡ್: ಚಿಕಿತ್ಸೆಗೆ ‘ಮೇಕ್ ಶಿಫ್ಟ್’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಜೆಎನ್.1 ಪತ್ತೆಯಾದಲ್ಲಿ ಚಿಕಿತ್ಸೆ ಒದಗಿಸಲು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯ (ಆರ್‌ಜಿಐಸಿಡಿ) ಹಿಂಭಾಗದಲ್ಲಿರುವ ತಾತ್ಕಾಲಿಕ ಆಸ್ಪತ್ರೆ (ಮೇಕ್ ಶಿಫ್ಟ್) ಗುರುತಿಸಲಾಗಿದೆ.

ನಗರದಲ್ಲಿ 2020ರ ಮಾರ್ಚ್‌ನಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದಾಗ ಸೋಂಕಿತರ ಚಿಕಿತ್ಸೆಗೆ ಆರ್‌ಜಿಐಸಿಡಿ ಆಸ್ಪತ್ರೆ ಗುರುತಿಸಲಾಗಿತ್ತು. ಕೊರೊನಾ ಸೋಂಕಿತರ ಸಂಖ್ಯೆ ಏರಿಕೆ ಕಂಡಾಗ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿ, ಚಿಕಿತ್ಸೆ ನೀಡಲಾಗಿತ್ತು.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ ಇರುವವರಿಗೆ ಸಂಸ್ಥೆಯ ಹಿಂಭಾಗ ತಾತ್ಕಾಲಿಕ ಆಸ್ಪತ್ರೆ (ಮೇಕ್ ಶಿಫ್ಟ್) ನಿರ್ಮಿಸಲಾಗಿತ್ತು. 200 ಹಾಸಿಗೆಗಳ ಈ ಆಸ್ಪತ್ರೆಯನ್ನು ಕೋವಿಡ್ ನಿಯಂತ್ರಣಕ್ಕೆ ಬಂದಾಗಿನಿಂದ ಕೋವಿಡೇತರ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ₹ 200 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.



ಮೇಕ್ ಶಿಫ್ಟ್ ಆಸ್ಪತ್ರೆ

ಮೇಕ್ ಶಿಫ್ಟ್ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆಗೆ 171 ಹಾಸಿಗೆಗಳು ಲಭ್ಯವಾಗಲಿವೆ. 25 ತೀವ್ರ ನಿಗಾ ಘಟಕ ಹಾಸಿಗೆಯನ್ನು ಆಸ್ಪತ್ರೆ ಒಳಗೊಂಡಿದೆ.

# ಕಾಂತರಾಜ ವರದಿ ಜಾರಿಗೆ ಮಡಿವಾಳ ಸಂಘ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಎಚ್. ಕಾಂತರಾಜ ನೇತೃತ್ವದಲ್ಲಿ ನಡೆದ ಹಿಂದುಳಿದ ವರ್ಗಗಳ ಸಮೀಕ್ಷಾ ವರದಿಯನ್ನು ಕೂಡಲೇ ಸ್ವೀಕರಿಸಿ, ಅದನ್ನು ಜಾರಿಗೊಳಿಸಬೇಕು’ ಎಂದು ಕರ್ನಾಟಕ ರಾಜ್ಯ ಮಡಿವಾಳ ಸಂಘ ಆಗ್ರಹಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ. ನಂಜಪ್ಪ, ‘ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ಕೌಟುಂಬಿಕ ಸೇರಿದಂತೆ 55 ಅಂಶಗಳ ಮಾಹಿತಿಗಳನ್ನು ಕಾಂತರಾಜ ಆಯೋಗ ನಡೆಸಿರುವ ಸಮೀಕ್ಷೆಯಲ್ಲಿ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿರುವ ಎಲ್ಲ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರ ಸೌಲಭ್ಯಗಳನ್ನು ಹಂಚಿಕೆ ಮಾಡಬೇಕು. ಅಂದಾಗ ಮಾತ್ರ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯಕ್ಕೆ ಒಂದು ಅರ್ಥ ಸಿಗಲಿದೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ವರದಿ ಸ್ವೀಕರಿಸಿ ಅದನ್ನು ಬಹಿರಂಗಗೊಳಿಸಬೇಕು. ನಂತರ ಅದನ್ನು ಸಾರ್ವಜನಿಕರ ಚರ್ಚೆಗೊಳಪಡಿಸಿ, ಸಾದಕ–ಬಾಧಕಗಳನ್ನು ಪರಾಮರ್ಶಿಸಿ ನಂತರ ಅದನ್ನು ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಕಾಂತರಾಜ ಆಯೋಗದ ವರದಿಯ ಬಗ್ಗೆ ಕೆಲ ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಆ ವರದಿಯಲ್ಲಿ ಏನಿದೆ ಎಂಬುದು ಯಾರಿಗೂ ಗೊತ್ತಿಲ್ಲ. ವರದಿ ಬಹಿರಂಗಗೊಂಡ ಮೇಲೆ, ಅದನ್ನು ಓದಿದ ನಂತರ ಆಕ್ಷೇಪಗಳನ್ನು ವ್ಯಕ್ತಪಡಿಸಲಿ’ ಎಂದು ಹೇಳಿದರು.

‘ಮುಂದಿನ 15 ದಿನಗಳಲ್ಲಿ ವರದಿ ಸ್ವೀಕರಿಸುವ ಬಗ್ಗೆ ಸರ್ಕಾರ ನಿರ್ಧಾರ ಪ್ರಕಟಿಸಬೇಕು. ಇಲ್ಲದಿದ್ದರೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಕಾರ್ಯದರ್ಶಿ ಬಿ.ಆರ್.ಪ್ರಕಾಶ್, ಹಿಂದುಳಿದ ಆಯೋಗದ ಮಾಜಿ ಸದಸ್ಯ ಜಿ.ಡಿ. ಗೋಪಾಲ ಭಾಗವಹಿಸಿದ್ದರು.

ಬಿ.ವಿ. ಆಚಾರ್ಯ ಅವರಿಗೆ ‘ವಕೀಲರ ವಿಭೂಷಣ’ ಪ್ರಶಸ್ತಿ ಪ್ರದಾನ

# ವೃತ್ತಿಬದ್ಧತೆಗೆ ಆಚಾರ್ಯ ಮಾದರಿ: ಸಿ.ಜೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಐದು ಬಾರಿ ಕರ್ನಾಟಕ ಹೈಕೋರ್ಟ್‌ನ ಅಡ್ವೊಕೇಟ್ ಜನರಲ್ ಆಗಿ ಕಾರ್ಯ ನಿರ್ವಹಿಸಿರುವ ಹಿರಿಯ ವಕೀಲ ಬಿ.ವಿ.ಆಚಾರ್ಯ ಅವರು ತಮ್ಮ ವೃತ್ತಿ ನಿಷ್ಠೆಯ ಪರಿಣಾಮ; ಇವತ್ತು ಕಾವೇರಿ ವಿವಾದ ಸೇರಿದಂತೆ ಅನೇಕ ಪ್ರಮುಖ ಪ್ರಕರಣಗಳಲ್ಲಿ ಕರ್ನಾಟಕ ಪರ ಮೈಲುಗಲ್ಲುಗಳ ಸ್ಥಾಪನೆಗೆ ಕಾರಣೀಭೂತರಾಗಿದ್ದಾರೆ’ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಬಣ್ಣಿಸಿದರು.

ಇದೇ ಪ್ರಥಮ ಬಾರಿಗೆ ‘ವಕೀಲರ ವಾಹಿನಿ’ ನಿಯತಕಾಲಿಕೆ ವತಿಯಿಂದ ನೀಡಲಾಗುವ ‘ವಕೀಲ ವಿಭೂಷಣ’ ಪ್ರಶಸ್ತಿಗೆ ಭಾಜನರಾದ ಬಿ.ವಿ.ಆಚಾರ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ‘ಆಚಾರ್ಯ ತಮ್ಮ ವೃತ್ತಿಬದ್ಧತೆಯ ಮೂಲಕ ಕಿರಿಯ ವಕೀಲರಿಗೆ ಸದಾ ಮಾರ್ಗದರ್ಶಿಯಾಗಿದ್ದಾರೆ’ ಎಂದರು.

‘ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಆಚಾರ್ಯ ವಿಶೇಷ ಪ್ರಾಸಿಕ್ಯೂಟರ್ ಆಗಿ ಕಾರ್ಯ ನಿರ್ವಹಿಸುವ ಮೂಲಕ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಪ್ರಾಮಾಣಿಕ ವಕೀಲರ ಪಾತ್ರ ಹೇಗಿರುತ್ತದೆ ಎಂಬುದನ್ನು ಸಾಬೀತುಪಡಿಸಿದ್ದು ರಾಜ್ಯದ ಹೆಮ್ಮೆ’ ಎಂದರು.

ಸಮಾರಂಭದಲ್ಲಿ ಹಾಜರಿದ್ದ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ‘ಈ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಆಚಾರ್ಯ ಅವರು ಶ್ರಮಿಸಿರುವ ಪರಿ ವಕೀಲ ವೃಂದಕ್ಕೆ ಮಾದರಿಯಾಗಿದೆ. ಆಚಾರ್ಯ ಅವರು ತಮ್ಮ ವೃತ್ತಿಬದ್ಧತೆ ಮತ್ತು ವೃತ್ತಿ ಸಂಹಿತೆಯ ಪಾಲನೆ ಅವರನ್ನು ಈ ಎತ್ತರಕ್ಕೆ ಕರೆದುಕೊಂಡು ಬಂದಿದೆ’ ಎಂದರು.




ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರಿಗೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ, ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಹಿರಿಯ ವಕೀಲ ಉದಯ ಹೊಳ್ಳ, ವಕೀಲರ ವಾಹಿನಿಯ ಸಂಪಾದಕ ಹಾಗೂ ಪ್ರಕಾಶಕ ವಕೀಲ ಡಿ.ಎಂ.ಹೆಗ್ಡೆ, ಉಪ ಸಂಪಾದಕ ಚಂದ್ರಕಾಂತ ಪಾಟೀಲ ಕಾನೂರು, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಮುಖ್ಯ ಸಂಪಾದಕ ಎಸ್.ಎನ್.ಪ್ರಶಾಂತ್ ಚಂದ್ರ, ಹಿರಿಯ ವಕೀಲ ಅಶೋಕ ಹಾರನಹಳ್ಳಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಚ್.ಪ್ರಭಾಕರ ಶಾಸ್ತ್ರಿ, ಸಿ.ಎಂ.ಪೂಣಚ್ಚ, ಕೆ.ಅರವಿಂದ್, ರಾಜೇಶ ರೈ ಕಲ್ಲಂಗಳ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳಾದ ಆನಂದ ಬೈರಾರೆಡ್ಡಿ, ನಿವೃತ್ತ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ನಿವೃತ್ತ ಪೊಲೀಸ್ ಅಧಿಕಾರಿ ಗೋಪಾಲ ಬಿ.ಹೊಸೂರು, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್.ಕಾಂತರಾಜ, ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಡಿ.ಎಲ್.ಜಗದೀಶ್, ಮಾಜಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಂ.ಅರುಣ್ ಶ್ಯಾಮ್ ಸೇರಿದಂತೆ ಹಿರಿ, ಕಿರಿಯ ವಕೀಲರು ಪಾಲ್ಗೊಂಡಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೈಕೋರ್ಟ್ ಆದೇಶ

# ಒಸಿ ನೀಡಿದ ನಂತರವೇ ತೆರಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ನಂತರ ಕಟ್ಟಡಕ್ಕೆ ಸ್ವಾಧೀನಾನುಭವ ಪತ್ರ (ಒಸಿ) ನೀಡಿದ ನಂತರವಷ್ಟೇ ಆ ಕಟ್ಟಡಕ್ಕೆ ತೆರಿಗೆ ವಿಧಿಸಬಹುದು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೆಸರ್ಸ್ ಬಿ.ಎಂ. ಹ್ಯಾಬಿಟೇಟ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2018ರ ಫೆಬ್ರುವರಿ 15ರಂದು ನೀಡಿದ್ದ ನೋಟಿಸ್ ಅನ್ನು ರದ್ದುಗೊಳಿಸಿದೆ. ಅಂತೆಯೇ 2011ರ ಏಪ್ರಿಲ್ 25ರಿಂದ ಅನ್ವಯವಾಗುವಂತೆ ಅರ್ಜಿದಾರರಿಂದ ತೆರಿಗೆಯನ್ನು ಸ್ವೀಕರಿಸಿ ಎಂದು ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಕಟ್ಟಡ ನಿರ್ಮಾಣ ಕಾರ್ಯವನ್ನು 2010ರಲ್ಲಿ ಪೂರ್ಣಗೊಳಿಸಲಾಗಿದೆ. ಆದರೆ ಮಲ್ಟಿಪ್ಲೆಕ್ಸ್ ನಡೆಸಲು ಜಿಲ್ಲಾಧಿಕಾರಿ ನಿರಾಕ್ಷೇಪಣಾ ಪತ್ರ ವಿತರಿಸುವುದು ಮತ್ತು ಅಗ್ನಿ ಶಾಮಕ ದಳದ ಅನುಮೋದನೆ ಸಿಗುವುದು ತಡವಾಗಿದೆ. 2010ರ ಜುಲೈ 5ರಂದು ಸ್ವಾಧೀನಾನುಭವ ಪತ್ರ ನೀಡುವಂತೆ ಮನವಿ ಮಾಡಲಾಗಿತ್ತು. ಆದರೆ ಇದನ್ನು ಪಾಲಿಕೆ ಪರಿಗಣಿಸಿರಲಿಲ್ಲ. ಹೀಗಾಗಿ 2010ರ ಡಿಸೆಂಬರ್ 2ರಂದು ಮತ್ತೊಂದು ಅರ್ಜಿ ಸಲ್ಲಿಸಲಾಗಿತ್ತು' ಎಂದು ವಿವರಿಸಿದರು.



'ಪಾಲಿಕೆ ಅಧಿಕಾರಿಗಳು ಕಟ್ಟಡದ ಪರಿಶೀಲನೆ ನಡೆಸಿ, 2011ರ ಏಪ್ರಿಲ್ 25ಕ್ಕೆ ಒಸಿ ವಿತರಿಸಿದ್ದಾರೆ. ನಿಯಮದಂತೆ ಆಸ್ತಿ ತೆರಿಗೆಯನ್ನು ಕಟ್ಟಡಕ್ಕೆ ಒಸಿ ನೀಡಿದ ನಂತರವೇ ವಿತರಿಸಬೇಕು. ಆದರೆ, ಪಾಲಿಕೆ ಹಿಂದಿನ ದಿನಾಂಕದಿಂದಲೇ ವಿತರಣೆ ಮಾಡುವಂತೆ ಡಿಮ್ಯಾಂಡ್ ನೋಟಿಸ್ ನೀಡಿದೆ. ಆದ್ದರಿಂದ ಅದನ್ನು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಆಕ್ಷೇಪಿಸಿದ ಪಾಲಿಕೆ ಪರ ವಕೀಲರು, 'ಅರ್ಜಿದಾರರು ಕಟ್ಟಡ ನಿರ್ಮಾಣ ಪೂರ್ಣಗೊಂಡಿರುವ ದಿನಾಂಕ ವನ್ನು ತಪ್ಪಾಗಿ ನಮೂದಿಸಿದ್ದಾರೆ. ಕಟ್ಟಡ ನಿರ್ಮಾಣಕ್ಕೆ ನೀಡಲಾಗಿದ್ದ ನಕ್ಷೆಯ ಅನುಮೋದನೆ 2008ರ ಜನವರಿ 17ರವರೆಗೆ ಮಾತ್ರ ಚಾಲ್ತಿಯಲ್ಲಿತ್ತು. ಹಾಗಾಗಿ, ಕಟ್ಟಡ ನಿರ್ಮಾಣ ಕಾರ್ಯ 2008ರಲ್ಲೇ ಪೂರ್ಣಗೊಂಡಿದೆ' ಎಂದು ಪ್ರತಿಪಾದಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ 'ಕಟ್ಟಡಕ್ಕೆ ನಿರಾಕ್ಷೇಪಣ ಪತ್ರ ವಿತರಿಸಿರುವುದೇ 2010ರಲ್ಲಿ. ಹೀಗಾಗಿ, ಅರ್ಜಿದಾರರು ಮಾಲ್ ಅನ್ನು ಬಳಕೆ ಮಾಡಿಲ್ಲ. ಅರ್ಜಿದಾರರು ಒಸಿಗಾಗಿ ಮನವಿ ಸಲ್ಲಿಸಿದ್ದರೂ ಪಾಲಿಕೆ ಅದನ್ನು ಸಕಾಲದಲ್ಲಿ ಪರಿಗಣಿಸದೆ ವಿಳಂಬ ತೋರಿದೆ. ಕಟ್ಟಡ ಪೂರ್ಣಗೊಂಡ ಬಳಿಕ ಒಸಿ ವಿತರಣೆ ಮಾಡಿದ ನಂತರವೇ ತೆರಿಗೆ ವಿಧಿಸಬಹುದೇ ಹೊರತು ಮುಂಚಿತವಾಗಿ ಅಲ್ಲ. ಹೀಗಾಗಿ, ಬಿಬಿಎಂಪಿ ನೀಡಿದ್ದ ನೋಟಿಸ್ ರದ್ದುಗೊಳಿಸಲಾಗುತ್ತಿದೆ' ಎಂದು ತಿಳಿಸಿದೆ.

## 'ಪೇ ಚಲುವರಾಯಸ್ವಾಮಿ' ಅಭಿಯಾನ ವಿಚಾರಣೆಗೆ ಹೈಕೋರ್ಟ್ ತಡೆ

**ಬೆಂಗಳೂರು:** ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ವಿರುದ್ಧ 'ಪೇ ಚಲುವರಾಯಸ್ವಾಮಿ' ಪೋಸ್ಟರ್ ಅಭಿಯಾನ ನಡೆಸಲಾಗಿದೆ ಎಂಬ ಆರೋಪದಡಿ ಮಂಡ್ಯದ ಐವರು ಬಿಜೆಪಿ ಕಾರ್ಯಕರ್ತರ ವಿರುದ್ಧದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಈ ಸಂಬಂಧ ಬಿಜೆಪಿ ಕಾರ್ಯಕರ್ತರಾದ ಸಿ.ಟಿ.ಮಂಜುನಾಥ್, ಎಸ್. ಶಿವಕುಮಾರ್ ಆರಾಧ್ಯ, ಪ್ರಸನ್ನ ಕುಮಾರ್, ಶಿವಕುಮಾರ್ ಮತ್ತು ವಿನೂ ಭಾಯ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅರ್ಜಿದಾರರ ಪರ ವಕೀಲ ಮಧು ಎನ್.ರಾವ್ ವಾದ ಮಂಡಿಸಿದರು.

**ಪ್ರಕರಣವೇನು?:** ಅರ್ಜಿದಾರರು ಸಚಿವ ಎನ್.ಚಲುರಾಯಸ್ವಾಮಿ ಮತ್ತು ಸರ್ಕಾರದ ವಿರುದ್ಧ 'ಪೇ ಸಿಎಸ್/ ಪೇ ಚೆಲುವರಾಯಸ್ವಾಮಿ' ಅಭಿಯಾನದ ಹೆಸರಿನಲ್ಲಿ 2023ರ ಆಗಸ್ಟ್ 10ರಂದು ಮಂಡ್ಯದ ಸಂಜಯ್ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿ ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿದ್ದರು. ಈ ಸಂಬಂಧ ಪೊಲೀಸರು ಐವರ ವಿರುದ್ಧ ಅಂದೇ, ಕರ್ನಾಟಕ ಮುಕ್ತ ಪ್ರದೇಶಗಳ ವಿರೂಪ ತಡೆ ಕಾಯ್ದೆಯ ವಿವಿಧ ಕಲಂಗಳಡಿ ಎಫ್‌ಐಆರ್ ದಾಖಲು ಮಾಡಿದ್ದರು. ಅಂತೆಯೇ, 2023ರ ಆಗಸ್ಟ್ 30ರಂದು ಮಂಡ್ಯದ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

## ಕೋಟ್ಪಾ ಕಾಯ್ದೆ ಅನುಷ್ಠಾನಕ್ಕೆ ಸಲಹೆ

**ಬೆಂಗಳೂರು:** ನಗರದಲ್ಲಿ ಮಕ್ಕಳು, ಮಹಿಳೆಯರು ಮತ್ತು ಸಾರ್ವಜನಿಕರ ಆರೋಗ್ಯ ಕಾಪಾಡಲು ಕೋಟ್ಪಾ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ರಾಜ್ಯ ಕಾನೂನು ಸೇವಾ ಮಂಡಳಿ ಉಪ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ತಿಳಿಸಿದರು.

ಬಿಬಿಎಂಪಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಆಯೋಜಿಸಿದ್ದ 'ಕೋಟ್ಪಾ 2003 ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಾರಿದಳ'- ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಹಿರಿಯ ಪೊಲೀಸ್ ಅಧಿಕಾರಿ ಬದ್ರಿನಾಥ್ ಮಾತನಾಡಿ, ರಸ್ತೆ ಬದಿಯ ಸಣ್ಣ ಅಂಗಡಿಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದರ ಮೇಲೆ ನಿಗಾವಹಿಸಿ ತಡೆಯಬೇಕು. ಕಾಯ್ದೆ ಉಲ್ಲಂಘಿಸುವವರ ಮೇಲೆ ಕ್ರಮ ಜರುಗಿಸಬೇಕು ಎಂದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ. ಕುಮಾರ್ ಮಾತನಾಡಿ, ಪಾಲಿಕೆ ಆರೋಗ್ಯಾಧಿಕಾರಿಗಳು ಪೊಲೀಸ್ ಸಹಯೋಗದೊಂದಿಗೆ ತಪಾಸಣೆ ನಡೆಸಿ ಕಾಯ್ದೆ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದೆಂದು ತಿಳಿಸಿದರು. ಬಿಬಿಎಂಪಿ ದಕ್ಷಿಣ ವಲಯ ಆರೋಗ್ಯಾಧಿಕಾರಿ ಡಾ. ಕಲ್ಪನಾ ಉಪಸ್ಥಿತ ರಿದ್ದರು.

# ಅತಿಥಿ ಉಪನ್ಯಾಸಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಿ, ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು' ಎಂದು ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ರಾಜ್ಯದಲ್ಲಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ತರಗತಿಗಳನ್ನು ಬಹಿಷ್ಕರಿಸಿ ಎಂದು ವಾರಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯದ ಬಹುತೇಕ ಸರ್ಕಾರಿ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರನ್ನು ಅವಲಂಬಿಸಿವೆ. ಅತಿಥಿ ಉಪನ್ಯಾಸಕರ ತರಗತಿಗಳನ್ನು ಬಹಿಷ್ಕರಿಸಿರುವ ಕಾರಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ನಷ್ಟವಾಗುತ್ತಿದೆ. ಸೆಮಿಸ್ಟರ್ ಪರೀಕ್ಷೆಗಳು ಹತ್ತಿರ ಬರುತ್ತಿವೆ. ಪಾಠಗಳು ನಡೆಯದ ಕಾರಣ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂಬ ಚಿಂತೆ ವಿದ್ಯಾರ್ಥಿಗಳಲ್ಲಿ ಶುರುವಾಗಿದೆ' ಎಂದು ಪ್ರತಿಭಟನಕಾರರು ಹೇಳಿದರು.

'ಸರ್ಕಾರ ಪ್ರತಿಭಟನಾನಿರತ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕು. ಕಾಲೇಜುಗಳಲ್ಲಿ ಪಾಠಗಳು ನಡೆಯುವಂತಹ ಪೂರಕ ವಾತಾವರಣ ನಿರ್ಮಿಸಬೇಕು' ಎಂದು ಒತ್ತಾಯಿಸಿದರು.




ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಎಐಡಿಎಸ್‌ಒ ಸದಸ್ಯರು

## ಡಾ.ಬಿ.ಎಚ್. ನಟೇಶ್ ಆಯ್ಕೆ



**ಬೆಂಗಳೂರು:** ಕಾರ್ಡಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾದ (ಸಿಎಸ್‌ಐ) ಕಾರ್ಯಕಾರಿ ಸದಸ್ಯರಾಗಿ ಹೃದ್ರೋಗ ತಜ್ಞ ಡಾ.ಬಿ.ಎಚ್. ನಟೇಶ್ ಆಯ್ಕೆಯಾಗಿದ್ದಾರೆ.

ಸಿಎಸ್‌ಐನ ಖಜಾಂಚಿಯಾಗಿದ್ದ ಅವರು, ಇತ್ತೀಚೆಗೆ ನಡೆದ ರಾಷ್ಟ್ರೀಯ ಚುನಾವಣೆಯಲ್ಲಿ ದಕ್ಷಿಣ ವಲಯದಿಂದ ಚುನಾಯಿತರಾಗಿದ್ದಾರೆ. ಇವರು ಜಯದೇವ ಹೃದಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹೃದ್ರೋಗ ತಜ್ಞ ರಾಗಿದ್ದಾರೆ. ಸಿಎಸ್‌ಐ ಬೆಂಗಳೂರಿನಿಂದ ಸತತ 2ನೇ ಬಾರಿ ಚುನಾಯಿತರಾಗಿದ್ದಾರೆ ಎಂದು ಸಿಎಸ್‌ಐ ಬೆಂಗಳೂರು ಘಟಕ ಪ್ರಕಟಣೆಯಲ್ಲಿ ತಿಳಿಸಿದೆ.

## ಮುಖ್ಯಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

**ಹುಣಸೂರು:** ವಿದ್ಯಾರ್ಥಿನಿಯರೊಂದಿಗೆ ಅಸಭ್ಯ ವರ್ತನೆ ತೋರಿದ ಆರೋಪದಡಿ, ತಾಲ್ಲೂಕಿನ ಹೊಸವಾರಂಚಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯಶಿಕ್ಷಕ ಎಸ್. ಕೃಷ್ಣಮೂರ್ತಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್. ಕೆ.ಪಾಂಡು ಆದೇಶಿಸಿದ್ದಾರೆ.



## ಭದ್ರತಾ ವೈಫಲ್ಯ: ಮೋದಿ ಮೌನಕ್ಕೆ ಕಾಂಗ್ರೆಸ್ ನಾಯಕರ ಟೀಕೆ

**ಬೆಂಗಳೂರು:** 'ಸಂಸತ್ ಸದಸ್ಯರಿಗೆ ಭದ್ರತೆ ನೀಡಲಾಗದ ಕೇಂದ್ರ ಸರ್ಕಾರ, ಸಂಸದರನ್ನು ಸಂಸತ್ತಿನಿಂದ ಓಡಿಸುವ ಕೆಲಸ ಮಾಡುತ್ತಿದೆ. ಮೋದಿ ಇದ್ದರೆ ಮಾತ್ರ ಭದ್ರತೆ ಎಂದು ಹೇಳುತ್ತಿದ್ದರು. ಆದರೆ, ಸಂಸತ್ತಿನ ಭದ್ರತಾ ವೈಫಲ್ಯದ ಬಗ್ಗೆ ಅವರೇ 'ಮೌನವಹಿಸಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರುದ್ಯೋಗದಿಂದ ಬೇಸತ್ತು ಬಿಜೆಪಿ ಬೆಂಬಗಲಿಗರೇ ಸಂಸತ್ ಮೇಲೆ ದಾಳಿ ಮಾಡಿದ್ದಾರೆ. ಸಣ್ಣ ಘಟನೆಯಾದರೂ ಮಾಧ್ಯಮಗಳ ಮುಂದೆ ಬರುತ್ತಿದ್ದ ಶೋಭಾ ಕರಂದ್ಲಾಜೆ, ಪ್ರತಾಪ ಸಿಂಹ, ಸಿ.ಟಿ. ರವಿ ಈಗ ಎಲ್ಲಿದ್ದಾರೆ' ಎಂದು ಪ್ರಶ್ನಿಸಿದರು.

'ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಗ್ಗೊಲೆ ಮಾಡಲಾಗುತ್ತಿದೆ. ಸ್ವಾಯತ್ತ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಏಕ ಚಕ್ರಾಧಿಪತ್ಯ ನಡೆಸುತ್ತಿದೆ. ಸಂಸತ್ತನ್ನು ನಿಷ್ಕ್ರಿಯ ಮಾಡಿ ಜನಪ್ರತಿನಿಧಿಗಳ ಪ್ರಶ್ನೆ ಹಕ್ಕನ್ನೂ ಕಸಿಯುವ ಕೆಲಸ ಆಗುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಹೇಳಿದರು.

'ಸಂಸತ್ತಿನಲ್ಲಿ ನಡೆದ ದಾಳಿಯ ಹೊಣೆ ಯನ್ನು ಪ್ರಧಾನಿ, ಗೃಹಸಚಿವರು ಮತ್ತು ಸ್ಪೀಕರ್ ಹೊ ರಬೇಕಾಗುತ್ತದೆ. ಇದಕ್ಕೆ ಮೂಲವಾಗಿರುವ ಮೈಸೂರಿನ ಸಂಸದ ಪ್ರತಾಪ ಸಿಂಹ ಯಾವುದೇ ಹೇಳಿಕೆ ನೀಡದೆ ತಲೆಮರೆಸಿ ಕೊಂಡಿದ್ದಾರೆ' ಎಂದು ಮತ್ತೊಬ್ಬ ಮುಖಂಡ ವಿ.ಎಸ್. ಉಗ್ರಪ್ಪ ಟೀಕಿಸಿದರು.

## ನಗರದಲ್ಲಿ ಇಂದು

**'ಹಸ್ತಪ್ರತಿಗಳ ಚಾರಿತ್ರಿಕ ಹಾಗೂ ಸಾಹಿತ್ಯಕ ನೋಟ':** ಉಪನ್ಯಾಸ: ಎನ್.ಆರ್. ಲಲಿತಾಂಬ, ಉಪಸ್ಥಿತಿ: ವಿಜಯಲಕ್ಷ್ಮಿ, ಎಚ್.ವಿ. ಆಂಜನರೆಡ್ಡಿ, ತಾರಾಮಣಿ ಆರ್., ಅಧ್ಯಕ್ಷತೆ: ಪ್ರತಿಭಾ ಪಾರ್ಶ್ವನಾಥ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು , ಕೆ.ಆರ್.ಪುರ, ಬೆಳಿಗ್ಗೆ 11.30

**ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ:** ಮನು ಬಳಿಗಾರ್, ಅಧ್ಯಕ್ಷತೆ: ಎಸ್. ಲಕ್ಷ್ಮಣ, ಸನ್ಮಾನಿತರು: ರಾಮನಾಥ್ ಎನ್., ಜಯಶ್ರೀ ರಾಜು, ಎಂ. ಸಿದ್ಧಪ್ಪ ನೇಗಲಾಲ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕನ್ನಡ ಕ್ರಿಯಾ ಸಮಿತಿ ಬೆಂಗಳೂರು ಕೇಂದ್ರೀಯ ವಿಭಾಗ, ಸ್ಥಳ: ಘಟಕ-2ರ ಯೋಗಾ ಸಭಾಂಗಣ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಮಧ್ಯಾಹ್ನ 2

**'ಗಾಂಧಿ ಮತ್ತು ಅಂಬೇಡ್ಕರ್ ಪ್ರಸ್ತುತತೆ' ಕುರಿತು ಉಪನ್ಯಾಸ:** ಎಚ್.ಟಿ. ಪೋತೆ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಶೇಷಾದ್ರಿಪುರ ಸಂಜೆ ಕಾಲೇಜು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30

**ಸುಸ್ಥಿರ ಜೀವನಕ್ಕಾಗಿ ಐವಿಆರ್ ಸಹಾಯವಾಣಿ:** ಅತಿಥಿ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಶೈಲೇಂದ್ರ ದಿವೇದಿ, ಆಯೋಜನೆ: ಸರ್ಕ್ಯೂಲರ್ ವೇಸ್ಟ್ ಸಲೂಷನ್ಸ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 12

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

## ಮೈಸೂರು ರೇಸ್

### ಬ್ರೇವ್ ಟ್ರೂಪರ್ ಗೆಲ್ಲುವ ನಿರೀಕ್ಷೆ

ಡಾ| ಆರ್.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ರೇವ್ ಟ್ರೂಪರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಿ ಏಂಜೆಲ್ ಪವರ್ 12, ಆರ್ಮಮೆಂಟ್ 2, ಕಂಟ್ರೆಸ್ ಮೇಜರ್ 6
2ನೇ ರೇಸ್: ಕೇಸರಿ ಕ್ವೀನ್ 11, ಸಿಯೋಲ್ 1, ರನ್ನಿಂಗ್ ಬೋಲ್ಟ್ 7
3ನೇ ರೇಸ್: ವೆಂಚೆಂಗ್ 5, ಮೈ ಲೈಫ್ ಮೈ ರೂಲ್ಸ್ 9, ಡಿ ಲಾರ್ಡ್ 3
4ನೇ ರೇಸ್: ಮೇಬುರಿ 1, ಸಿಯೋಲ್‌ಫಾರ್ ಬುಲ್ಲೆಟ್ 8, ಡಿ ಡಾನ್ ಕಿಂಗ್ 3
5ನೇ ರೇಸ್: ಬ್ರೇವ್ ಟ್ರೂಪರ್ 5, ಸೆಗೆರಾ 1, ಶೀಬಾ 11
6ನೇ ರೇಸ್: ಡಿ ರೋಮನ್ ರೀನ್ಸ್ 5, ಇಗ್ನೋರೆನ್ಸ್ ಈಸ್ ಬ್ಲಿಸ್ 1, ಡಲ್ಲಾಸ್ 9
7ನೇ ರೇಸ್: ಮಿಸ್ಟಿಕ್ ಬಾಂಡ್ 4, ಗಿಂಟೋಕಿ 8, ಬೆಂಗಾಜಿ 2

**ಉತ್ತಮ ಬೆಟ್: ಮಿಸ್ಟಿಕ್ ಬಾಂಡ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
| --- | --- | --- |
| 3,4,5,6,7 | 2,3,4 | 5,6,7 |

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಬಿಬಿಎಂಪಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ವ್ಯಾಪಾರಿಗಳು

# ಬೀದಿ ಬದಿ ವ್ಯಾಪಾರಕ್ಕೆ ಅವಕಾಶ ಕೊಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನ್ಯಾಯಾಲಯಗಳ ಆದೇಶಗಳನ್ನು ಉಲ್ಲಂಘಿಸಿ ಬೀದಿ ಬದಿ ವ್ಯಾಪಾರಿಗಳನ್ನು ತೆರವು-ಗೊಳಿಸಿರುವ ಬಿಬಿಎಂಪಿ, ಅದೇ ಸ್ಥಳದಲ್ಲಿ ವ್ಯಾಪಾರ ಮಾಡಲು ಮತ್ತೆ ಅವಕಾಶ ಮಾಡಿಕೊಡಬೇಕು. ನಷ್ಟಕ್ಕೆ ಪರಿಹಾರವನ್ನೂ ನೀಡಬೇಕು' ಎಂದು ಬೀದಿ ಬದಿ ವ್ಯಾಪಾರಿಗಳು ಆಗ್ರಹಿಸಿದರು.

ಬೆಂಗಳೂರು ಜಿಲ್ಲಾ ಬೀದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ಮತ್ತು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘಟನೆ ಸದಸ್ಯರು ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಮಂಗಳವಾರ ಪ್ರತಿಭಟಿಸಿದರು.

'ಜಯನಗರ, ಮಹದೇವಪುರ, ಮಲ್ಲೇಶ್ವರ , ಬನಶಂಕರಿ, ಮೂಡಲಪಾಳ್ಯ ಹಾಗೂ ಇತರೆ ಪ್ರ-ದೇಶಗಳಲ್ಲಿ ಬೀದಿ ಬದಿ ವ್ಯಾಪಾ-ರಿಗಳನ್ನು ತೆರವು ಮಾಡಲಾಗಿದ್ದು, ಅಲ್ಲೇ ಮತ್ತೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು. ಪ್ರತಿ ಪ್ರದೇಶ ವ್ಯಾಪಾರ ಸಮಿತಿ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ಬಿಬಿಎಂಪಿ ನೇತೃತ್ವದಲ್ಲಿ ನಡೆಯಬೇಕು. ಅಲ್ಲಿಯವರೆಗೆ ಈ ವ್ಯಾಪಾರಿಗಳನ್ನು ತೆರವುಗೊಳಿಸಬಾರದು. ಗುರುತಿನ ಚೀಟಿ / ವ್ಯಾಪಾರದ ಪ್ರಮಾಣ ಪತ್ರಗಳನ್ನು ನವೀಕರಿಸಬೇಕು. ಸಮೀಕ್ಷೆ ಕುರಿತು ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳೊಂದಿಗೆ ಸಭೆ ನಡೆಸಬೇಕು ಮತ್ತು ಅವರ ಸಲಹೆ ಸೂಚನೆಗಳನ್ನು ಪಡೆಯಬೇಕು' ಎಂದು ಬೇಡಿಕೆ ಸಲ್ಲಿಸಿದರು.

> **ಬಿಬಿಎಂಪಿ ಮುಖ್ಯ ಆಯುಕ್ತರೊಂದಿಗೆ ಸಭೆ ನಡೆಸಿ, ವ್ಯಾಪಾರಿಗಳ ಬೇಡಿಕೆಗಳ ಬಗ್ಗೆ ಚರ್ಚಿಸಲಾಗುವುದು**
> **ರೆಡ್ಡಿ ಶಂಕರಬಾಬು,** ಆರೋಗ್ಯ ವಿಭಾಗದ ವಿಶೇಷ ಆಯುಕ್ತ

'ಬೀದಿ ಬದಿ ವ್ಯಾಪಾರ ಮಾಡುವ ಹಕ್ಕು ಸಂವಿಧಾನದಲ್ಲಿ ನಮಗೆ ನೀಡಲಾಗಿದೆ. ಬೀದಿ ಬದಿ ವ್ಯಾಪಾರಸ್ಥರ ಹಕ್ಕುಗಳನ್ನು ರಕ್ಷಿಸಬೇಕೆಂದು ಹಲವಾರು ನ್ಯಾಯಾಲಯಗಳ ತೀರ್ಪುಗಳು ಹೇಳಿವೆ' ಎಂದು ಬೆಂಗಳೂರು ಜಿಲ್ಲಾ ಬೀದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್. ಬಾಬು ಹೇಳಿದರು.

'ಬೀದಿ ಬದಿ ವ್ಯಾಪಾರಿಗಳನ್ನು ರಕ್ಷಿಸುವ ಕಾನೂನನ್ನು ಬಿಬಿಎಂಪಿ ಬಹಿರಂಗವಾಗಿ ಉಲ್ಲಂಘಿಸಿ ನಮ್ಮನ್ನು ಎತ್ತಂಗಡಿ ಮಾಡುತ್ತಿದೆ' ಎಂದು ಸಂಘದ ಕಾರ್ಯದರ್ಶಿ ಪಿ.ಪಿ. ಅಪ್ಪಣ್ಣ ದೂರಿದರು.

ಬೀದಿ ಬದಿ ವ್ಯಾಪಾರಿಗಳಿಗೆ ನೀಡಿರುವ ಗುರುತಿನ ಚೀಟಿ, ವ್ಯಾಪಾರದ ಪ್ರಮಾಣಪತ್ರ ನವೀಕರಿಸಬೇಕು ಎಂದು ಸಂಘದ ಉಪಾಧ್ಯಕ್ಷೆ ಶಶಿಕಲಾ ಆಗ್ರಹಿಸಿದರು.

'ನಾವು ಬೀದಿ ಬದಿಗಳಲ್ಲಿ ವ್ಯಾಪಾರ ಮಾಡದಿದ್ದರೆ ಮಧ್ಯಮವರ್ಗದವರು ಮಾಲ್, ಮಾರ್ಟ್‌ಗಳಿಗೆ ಹೋಗಿ ವಸ್ತುಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ' ಎಂದು ಸಂಘದ ಜಂಟಿ ಕಾರ್ಯದರ್ಶಿ ಸಯ್ಯದ್ ಝುಮೀರ್ ಹೇಳಿದರು.



ಬೆಂಗಳೂರು ಜಿಲ್ಲಾ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ಮತ್ತು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘಟನೆಯ ಸದಸ್ಯರು ಬಿಬಿಎಂಪಿ ಕಚೇರಿಯ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ಮಾಡಿದರು –ಪ್ರಜಾವಾಣಿ ಚಿತ್ರ


ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ

> 'ಸಂಭ್ರಮಾಚರಣೆ ಮಾಡುವವರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗದಂತೆ ಸುರಕ್ಷತಾ ಕ್ರಮ ಕೈಗೊಳ್ಳಲಾಗುವುದು'

## ಹೊಸ ವರ್ಷಾಚರಣೆಗೆ ಶೀಘ್ರ ಮಾರ್ಗಸೂಚಿ

**ಬೆಂಗಳೂರು:** 'ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಜತೆಗೆ ಸಭೆ ನಡೆಸಿದ ನಂತರ ಮುಂದಿನ ವಾರ ಹೊಸ ವರ್ಷಾಚರಣೆ ಮಾರ್ಗಸೂಚಿ ಪ್ರಕಟಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಈ ಹಿಂದೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿತ್ತು ಎಂಬುದನ್ನು ಅವಲೋಕಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.



ಬಿ.ದಯಾನಂದ್

ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ನೀಡಲಾಗುತ್ತದೆ. ಆದರೆ, ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳ ಜತೆ ಸಭೆ ನಡೆಸಿ, ಅವರು ನೀಡುವ ಸಲಹೆಗಳ ಪ್ರಕಾರವೇ ಮಾರ್ಗಸೂಚಿ ಬಿಡುಗಡೆ ಮಾಡಲಾಗುತ್ತದೆ. ಜತೆಗೆ ಭದ್ರತೆಯನ್ನು ಕೈಗೊಳ್ಳಲಾಗುತ್ತದೆ. ಇಲಾಖೆ ಹಂತದಲ್ಲಿ ಸಭೆ ನಡೆಸಲಾಗುವುದು ಎಂದು ಹೇಳಿದರು.

ಇತ್ತೀಚೆಗೆ ಮಾದಕ ವಸ್ತು ಮಾರಾಟ ಪ್ರಕರಣದಲ್ಲಿ ಬಂಧನಕ್ಕೊಳಗಾದ ವಿದೇಶಿ ಪೆಡ್ಲರ್ ಲಿಯೋ ನಾರ್ಡ್‌ನ ವಿಚಾರಣೆ ಮುಂದುವರಿಸಿದ್ದು, ಸದ್ಯ ಆರೋಪಿ ಪೊಲೀಸರ ವಿಚಾರಣೆಗೆ ಸಹಕಾರ ನೀಡುತ್ತಿಲ್ಲ. ಆತನ ಮೊಬೈಲ್ ಜಪ್ತಿ ಮಾಡಿದ್ದು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

## ಬೆಂಕಿ ಅವಘಡ: ಬಟ್ಟೆ ಅಂಗಡಿಗಳು ಭಸ್ಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಮಾರತ್ತಹಳ್ಳಿ ಹಾಗೂ ಮಲ್ಲೇಶ್ವರದಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಎರಡು ಪ್ರತ್ಯೇಕ ಅಗ್ನಿ ಅವಘಡದಲ್ಲಿ ಬಟ್ಟೆ ಅಂಗಡಿಗಳು ಭಸ್ಮವಾಗಿದ್ದು ನಷ್ಟ ಸಂಭವಿಸಿದೆ.

ಮಾರತ್ತಹಳ್ಳಿ ಬಳಿ ಸಂಭವಿಸಿದ ಅಗ್ನಿ ಆಕಸ್ಮಿಕದಲ್ಲಿ ಬಟ್ಟೆ ಅಂಗಡಿ ಸಂಪೂರ್ಣ ಭಸ್ಮವಾಗಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ರಾತ್ರಿ 11.45ರ ವೇಳೆಯಲ್ಲಿ ಮಾರ-ತ್ತಹಳ್ಳಿಯ ಲೂಯಿಸ್ ಫಿಲಿಪ್ ಬಟ್ಟೆ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಮೂರು ಅಂತಸ್ತಿನ ಕಟ್ಟಡದ ವಿವಿಧ ಮಳಿಗೆಗಳಿಗೂ ಬೆಂಕಿ ವ್ಯಾಪಿಸಿತು. ಕಟ್ಟಡದ ಪಕ್ಕದಲ್ಲಿದ್ದ ತೆಂಗಿನಮರ ಹಾಗೂ ವಿದ್ಯುತ್ ಪರಿವರ್ತಕಕ್ಕೂ ಬೆಂಕಿ ತಗುಲಿತ್ತು. ಅಕ್ಕಪಕ್ಕದ ಅಂಗಡಿಗಳಿಗೂ ಬೆಂಕಿಕಿಡಿ ಹಾರಿ ಆತಂಕ ಸೃಷ್ಟಿಯಾಗಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಟ್ಟಡದಲ್ಲಿ ಸಿಲುಕಿದ್ದ ನಾಲ್ವರನ್ನು ರಕ್ಷಿಸಿದರು. ಬೆಂಕಿ ಕಾಣಿಸಿಕೊಂಡ ಕೂಡಲೇ ಇಬ್ಬರು ಪಕ್ಕದ ಕಟ್ಟಡಕ್ಕೆ ಜಿಗಿದಿದ್ದರು. ಅವರನ್ನೂ ಏಣಿ ಸಹಾಯದಿಂದ ಕೆಳಕ್ಕೆ ಇಳಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಬೆಂಕಿಯ ಜ್ವಾಲೆ ಕಂಡು ವಾಹನ ಸವಾರರು ಬೆಚ್ಚಿಬಿದ್ದರು. ಕಾರ್ಯಾಚರಣೆ ವೇಳೆ ಅಗ್ನಿ ಶಾಮಕದಳದ ಒಬ್ಬ ಸಿಬ್ಬಂದಿಗೆ ಗಾಯವಾಗಿದೆ. ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಎರಡೂವರೆ ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಗಿದೆ.

ಪಕ್ಕದಲ್ಲಿದ್ದ ವಿದ್ಯುತ್ ಪರಿವರ್ತಕ-ದಲ್ಲಿ ಉಂಟಾದ ಶಾರ್ಟ್ ಸರ್ಕಿಟ್‌ನಿಂದ ಈ ದುರಂತ ಸಂಭವಿಸಿರುವ ಶಂಕೆ ವ್ಯಕ್ತವಾಗಿದೆ. ಮಲ್ಲೇಶ್ವರ ಮುಖ್ಯರ-ಸ್ತೆಯಲ್ಲೂ ಬಟ್ಟೆ ಅಂಗಡಿಯಲ್ಲಿ ಬೆಂಕಿ ಅನಾಹುತ ಸಂಭವಿಸಿ, ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಅಧಿಕ ಲಾಭ ನೀಡುವುದಾಗಿ ಹೂಡಿಕೆದಾರರಿಗೆ ನಂಬಿಸಿದ್ದ ಆರೋಪಿಗಳು

## 700 ಮಂದಿಗೆ ₹25 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಧಿಕ ಲಾಭ ನೀಡುವುದಾಗಿ ನಂಬಿಸಿ, 700 ಮಂದಿಯಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕನಕಪುರದ ಹಾರೋಹಳ್ಳಿ ನಿವಾಸಿ ಪ್ರದೀಪ್(34), ನಾಗವಾರ ನಿವಾಸಿ ವಂಸತ್ ಕುಮಾರ್(35) ಬಂಧಿತರು.

ತಲೆಮರೆಸಿಕೊಂಡಿರುವ ಸೌಮ್ಯಾಗೆ ಶೋಧ ಕಾರ್ಯ ನಡೆಯುತ್ತಿದೆ. ಬಂಧಿತರಿಂದ ₹7 ಲಕ್ಷ ನಗದು, ದಾಖಲಾತಿಗಳು ಹಾಗೂ ಕಂಪ್ಯೂಟರ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಹೂಡಿಕೆ ಮಾಡಿದ ಹಣಕ್ಕೆ ಅಧಿಕ ಹಣ ನೀಡುವುದಾಗಿ ಆರೋಪಿಗಳು ಜಾಹೀರಾತು ನೀಡಿದ್ದರು. ಇದನ್ನೇ ನಂಬಿದ್ದ ಸಾರ್ವಜನಿಕರು ₹25 ಕೋಟಿಯಷ್ಟು ಹೂಡಿಕೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳು, 2021ರಿಂದ ಜೆ.ಪಿ.ನಗರದ 9ನೇ ಹಂತದ ದೊಡ್ಡ-ಕಲ್ಲಸಂದ್ರದ ನಾರಾಯಣನಗರದ-ಲ್ಲಿ 'ಪ್ರಮ್ಯಾ ಇಂಟರ್‌ನ್ಯಾಷನಲ್' ಎಂಬ ಹೆಸರಿನಲ್ಲಿ ಅಕ್ರಮವಾಗಿ ಕಚೇರಿ ತೆರೆದಿದ್ದು, ಇದೇ ಹೆಸರಿನಲ್ಲಿ ವೆಬ್‌ಸೈಟ್ ಕೂಡ ನಡೆಸುತ್ತಿದ್ದರು. ಈ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರು ಹಣ ಹೂಡಿಕೆ ಮಾಡಿದರೆ ಶೇ 2.5ರಷ್ಟು ಪ್ರತಿ ತಿಂಗಳು ಲಾಭ ಬರುತ್ತದೆ ಎಂಬ ತಲೆ-ಬರಹದಲ್ಲಿ ಆಯ್ದ ಹೂಡಿಕೆದಾರರಿಗೆ ಮಾತ್ರ ಹೂಡಿಕೆಗೆ ಅವಕಾಶ ಇರುತ್ತದೆ ಹೇಳಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಹೂಡಿಕೆ ಹಣಕ್ಕೆ ಭದ್ರತೆ ನೀಡಲಾಗುವುದು, ಹೂಡಿಕೆ ಮಾಡುವ ಹಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಲಾಂಭಾಂಶ ಕೊಡುತ್ತೇವೆಂದು ಹೇಳಿ ವಂಚಿಸಿದ್ದಾರೆ'



ಪ್ರದೀಪ್



ವಸಂತ್‌ಕುಮಾರ್

ಭದ್ರತಾ ಠೇವಣಿ ಇಟ್ಟ ಹಣಕ್ಕೆ ನಾಲ್ಕು ಪಟ್ಟು ಹೆಚ್ಚು ಹಣ ನೀಡುವುದಾಗಿ, ಶೇ 30ಕ್ಕಿಂತ ಹೆಚ್ಚಿನ ಬಡ್ಡಿ ಕೊಡುವುದಾಗಿ ಆಮಿಷವೊಡ್ಡಿದ್ದರು. ಇದನ್ನೇ ನಂಬಿದ ಹೂಡಿಕೆದಾರರು ₹ 5 ಸಾವಿರದಿಂದ ₹10 ಲಕ್ಷದವರೆಗೆ ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದ ಪ್ರದೀಪ್ ಹಾಗೂ ಸೌಮ್ಯಾ ಹೆಚ್ಚು ಹಣ ಸಂಪಾದನೆಗೆ ಈ ಉಪಾಯ ಮಾಡಿದ್ದರು. ವಸಂತ್‌ಕುಮಾರ್ ದಂಧೆಗೆ ನೆರವು ನೀಡಿದ್ದ. ಪ್ರದೀಪ್ ಹೆಸರಿನ 'ಪ್ರ' ಹಾಗೂ ಸೌಮ್ಯಾ ಹೆಸರಿನಲ್ಲಿ 'ಮ್ಯಾ' ಎಂಬ ಅಕ್ಷರವನ್ನು ತೆಗೆದುಕೊಂಡು 'ಪ್ರಮ್ಯಾ' ಇಂಟ-ರ್‌ನ್ಯಾಷನಲ್ ಕಂಪನಿ ಆರಂಭಿಸಿದ್ದರು. ಹೆಚ್ಚೆಚ್ಚು ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುವುದಾಗಿ ಆಮಿಷ ಒಡ್ಡಿದ್ದರು ಎಂಬುದು ಪೊಲೀಸರ ತನಿಖೆ ವೇಳೆ ತಿಳಿದುಬಂದಿದೆ.

ಕೋಣನಕುಂಟೆ ಹಾಗೂ ಜೆ.ಪಿ. ನಗರದಲ್ಲಿ ಎರಡು ಶಾಖೆಗಳನ್ನು ತೆರೆದು ಜನರಿಂದ ಹಣ ಹೂಡಿಕೆ ಮಾಡಿಸಿ-ಕೊಂಡಿದ್ದರು. ಹಣ ಕಟ್ಟಿಸಿಕೊಂಡು ವಂಚಿಸುತ್ತಿದ್ದ ಬಗ್ಗೆ ಮಾಹಿತಿ ಸಂಗ್ರಹಿಸಿದ ಸಿಸಿಬಿ ಆರ್ಥಿಕ ಅಪರಾಧ ವಿಭಾಗದ ಅಧಿಕಾರಿಗಳು, ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.

## ಸಿಂಗಹಳ್ಳಿ: ವ್ಯಕ್ತಿಯ ಕೊಲೆ

**ಬೆಂಗಳೂರು:** ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಗಹಳ್ಳಿ ಗ್ರಾಮದ ಪಿಳ್ಳಪ್ಪ ಅವರಿಗೆ ಸೇರಿದ ಜಮೀನಿನಲ್ಲಿ ಮೃತದೇಹ ಎಸೆದು ಪರಾರಿ ಆಗಿದ್ದಾರೆ.

ಅಂದಾಜು 25ರಿಂದ 30 ವರ್ಷ ಒಳಗಿನ ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ. ಕೊಲೆಗೆ ಕಾರಣ ತಿಳಿದು ಬಂದಿಲ್ಲ. ಕೊಲೆಯಾದ ವ್ಯಕ್ತಿಯ ವಿಳಾಸ ಪತ್ತೆಯಾಗಿಲ್ಲ. ಮೊಬೈಲ್ ಲೊಕೇಶನ್ ಆಧರಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಭಟ್ಟರ ಮಾರೇನಹಳ್ಳಿಯ ನವೀನ್ ಕುಮಾರ್ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



## ದಟ್ಟಣೆ ನಿವಾರಣೆಗೆ ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಟಿ.ಸಿ. ಪಾಳ್ಯ ಜಂಕ್ಷನ್ ಬಳಿ ಸಂಚಾರ ದಟ್ಟಣೆ ನಿವಾರಿಸಲು ಪ್ರಾಯೋಗಿಕವಾಗಿ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಟಿ.ಸಿ. ಪಾಳ್ಯದ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಸಂಚರಿಸುವವರು ಒ.ಎಂ. ರಸ್ತೆ ಮಾರ್ಗವಾಗಿ ಭಟ್ಟರಹಳ್ಳಿ ಸಿಗ್ನಲ್‌ನಲ್ಲಿ ತಿರುವು ಪಡೆದು ಮುಂದಕ್ಕೆ ಸಂಚರಿಸಬೇಕು. ಹೊಸಕೋಟೆ ಕಡೆಯಿಂದ ಟಿಸಿ ಪಾಳ್ಯ ಕಡೆಗೆ ಸಂಚರಿಸುವವರು ಕೆಆರ್ ಪುರ ಸರ್ಕಾರಿ ಕಾಲೇಜು ಜಂಕ್ಷನ್ ಬಳಿ ತಿರುವು ಪಡೆದುಕೊಳ್ಳಬೇಕು. ಮೇಡಹಳ್ಳಿ ಕಡೆಯಿಂದ ಟಿಸಿ ಪಾಳ್ಯ ಕಡೆಗೆ ಸರ್ವಿಸ್ ರಸ್ತೆಯಲ್ಲಿ ಬರುವ ವಾಹನ ಸವಾರರು ಟಿಸಿ ಪಾಳ್ಯ ಜಂಕ್ಷನ್‌ಗಿಂತ ಮೊದಲು ಸಿಗುವ ಮೀಡಿಯನ್ ಓಪನ್ ಬಳಿ ಬಂದು ಒಎಂ ರಸ್ತೆ ಮೂಲಕ ಮುಂದಕ್ಕೆ ಚಲಿಸಬೇಕು ಎಂದು ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಸಿ ಪಾಳ್ಯದಿಂದ ಮೇಡಹಳ್ಳಿವ-ರೆಗೆ ಮತ್ತು ಮೇಡಹಳ್ಳಿಯಿಂದ ಟಿ.ಸಿ ಪಾಳ್ಯದವರೆಗೆ ಸರ್ವಿಸ್ ರಸ್ತೆಯಲ್ಲಿ ಎಲ್ಲ ಮಾದರಿಯ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

## ಚಿನ್ನ ಮಾರಾಟ ನೆಪ: ₹60 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾನ್ ಬ್ರೋಕರ್ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ಮಚ್ಚಿನಿಂದ ಹಲ್ಲೆ ನಡೆಸಿ, ₹60 ಲಕ್ಷ ಕಸಿದು ಪರಾರಿಯಾಗಿದ್ದ ಐವರು ಆರೋಪಿಗಳನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುರುಬರಹಳ್ಳಿಯ ನಿವಾಸಿ ಮಹಮ್ಮದ್ ರಿಜ್ವಾನ್, ಇಂದಿರಾನಗರದ ಅಶ್ರಫ್, ದಿವಾಕರ್, ಮಹಮ್ಮದ್ ಇರ್ಫಾನ್ ಹಾಗೂ ಸತೀಶ್ ಬಂಧಿತ ಆರೋಪಿಗಳು.

'ಬಂಧಿತ ಆರೋಪಿಗಳಿಂದ ₹53 ಲಕ್ಷ ನಗದು, ಒಂದು ಕಾರು ಹಾಗೂ ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಡಿಮೆ ಬೆಲೆಗೆ ಚಿನ್ನ ಕೊಡುವುದಾಗಿ ನಂಬಿಸಿ ನಗರದ ಆದರ್ಶ್ ಲೇಔಟ್‌ನ ಹಳೇ ರಿಜಿಸ್ಟ್ರಾರ್ ಕಚೇರಿ ರಸ್ತೆಯ ಸಿದ್ದಪ್ಪಾಜಿ ಉದ್ಯಾನದ ಬಳಿಗೆ ಸಂಕೇತ್ ಬಿನ್ ದಿನೇಶ್‌ಕುಮಾರ್ ಎಂಬುವರನ್ನು ಆರೋಪಿಗಳು ಕರೆ-ಸಿಕೊಂಡಿದ್ದರು. ಸಂಕೇತ್ ಅವರು ಕೋಲಾರ ಜಿಲ್ಲೆಯ ಕೆಜಿಎಫ್‌ನ ಜೈನ್ ಟೆಂಪಲ್ ರಸ್ತೆಯಲ್ಲಿ ಪಾನ್ ಬ್ರೋಕರ್ ಕೆಲಸ ಮಾಡುತ್ತಿದ್ದರು. ಕಡಿಮೆ ಬೆಲೆಗೆ ಚಿನ್ನ ಸಿಗುವ ಆಸೆಯಿಂದ ಕೆಜಿಎಫ್‌ನಿಂದ ₹60 ಲಕ್ಷ ಹಣದ ಜೊತೆಗೆ ನಗರಕ್ಕೆ ಬಂದಿದ್ದರು. ಆಗ ಸ್ಥಳಕ್ಕೆ ಬಂದಿದ್ದ ಆರೋಪಿಗಳು ಅನುಮಾನ ಬಾರದಂತೆ ಮಾತುಕತೆ ನಡೆಸಿದ್ದರು. ಅದಾದ ಮೇಲೆ ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

'ಕಾರಿನಲ್ಲಿ ತಂದಿದ್ದ ಮಚ್ಚಿನಿಂದ ಹಲ್ಲೆ ನಡೆಸಿದ್ದ ಆರೋಪಿಗಳು ಹಣವನ್ನು ಕಸಿದು ಪರಾರಿಯಾಗಿ-ದ್ದರು. ಆರೋಪಿಗಳು ಹಣವನ್ನು ಹಂಚಿಕೊಂಡಿದ್ದರು. ಮಹಮ್ಮದ್ ಬಳಿಯಿದ್ದ ₹50 ಲಕ್ಷ ಹಾಗೂ ಉಳಿದ ಆರೋಪಿಗಳ ಬಳಿಯಿದ್ದ ₹3 ಲಕ್ಷವನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

### ಲ್ಯಾಪ್‌ಟಾಪ್ ಕಳ್ಳರ ಬಂಧನ

**ಬೆಂಗಳೂರು:** ಪೇಯಿಂಗ್ ಗೆಸ್ಟ್‌ಗಳಲ್ಲಿ ಲ್ಯಾಪ್‌ಟಾಪ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಯುವರಾಜ್, ಪ್ರಭು, ಸೆಲ್ವರಾಜು ಬಂಧಿತರು.

ಬಂಧಿತರಿಂದ 25 ಲ್ಯಾಪ್‌ಟಾಪ್‌ಗಳು ಹಾಗೂ 7 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. 'ಆರೋಪಿಗಳು ಕೆ.ಆರ್.ಪುರಂನಲ್ಲಿ ಬಾಡಿಗೆಗೆ ರೂಂ ಪಡೆದು ನೆಲೆಸಿದ್ದರು. ವಿದ್ಯಾರ್ಥಿಗಳ ಸೋಗಿನಲ್ಲಿ ಪಿ.ಜಿಗಳಿಗೆ ತೆರಳಿ, ಅಲ್ಲಿ ಲ್ಯಾಪ್‌ಟಾಪ್ ಕಳವು ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

**ಆಂಧ್ರಪ್ರದೇಶಕ್ಕೆ ರವಾನೆ:** ಲ್ಯಾಪ್‌ಟಾಪ್ ಕಳವು ಮಾಡಿದ ಕೆಲವೇ ತಾಸಿನಲ್ಲಿ ಬಸ್‌ನಲ್ಲಿ ಆಂಧ್ರಪ್ರದೇಶಕ್ಕೆ ರವಾನೆ ಮಾಡುತ್ತಿದ್ದರು. ಆಂಧ್ರಪ್ರದೇಶದಲ್ಲಿದ್ದ ಸೆಲ್ವರಾಜ್ ಆ ಲ್ಯಾಪ್‌ಟಾಪ್‌ಗಳನ್ನು ತಲಾ ₹25 ಸಾವಿರದಂತೆ ಮಾರಾಟ ಮಾಡುತ್ತಿದ್ದ. ಈ ತಂಡ ನಗರದಲ್ಲಿ ನಿತ್ಯ ನಾಲ್ಕರಿಂದ ಐದು ಲ್ಯಾಪ್‌ಟಾಪ್ ಕಳ್ಳತನ ಮಾಡುತ್ತಿತ್ತು. ಇದರಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಶಂಕೆ ಇದೆ' ಎಂದು ಪೊಲೀಸರು ಹೇಳಿದರು.

## ಸರಣಿ ಅಪಘಾತ: 9 ಕಾರು ಜಖಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇವನಹಳ್ಳಿಯ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ರಸ್ತೆಯಲ್ಲಿ ಸೋಮವಾರ ಸಂಜೆ ಸರಣಿ ಅಪಘಾತ ಸಂಭವಿಸಿದ್ದು 9 ಕಾರುಗಳು ಜಖಂಗೊಂಡಿವೆ.

ದೊಡ್ಡಜಾಲದ ಬಳಿ ಭಾರಿ ಅಪಘಾತ ಸಂಭವಿಸಿ ವಾಹನಗಳು ಒಂದರ ನಂತರ ಒಂದರಂತೆ ಡಿಕ್ಕಿ ಹೊಡೆದವು. ಘಟನೆಯಲ್ಲಿ ಪ್ರಾಣಾಪಾಯ ಸಂಭವಿಸಿಲ್ಲ. ಕಾರಿನಲ್ಲಿದ್ದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾಗಿದ್ದಾರೆ. ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದರು. ಎಲ್ಲ ಕಾರುಗಳ ಮುಂಭಾಗ ನಜ್ಜುಗು-ಜ್ಜಾಗಿದೆ. ಈ ಅಪಘಾತದ ದೃಶ್ಯವನ್ನು ಪ್ರಯಾಣಿಕರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.



ಪರಸ್ಪರ ಡಿಕ್ಕಿಯಾಗಿರುವ ಕಾರುಗಳು.

'ಈ ರಸ್ತೆಯಲ್ಲಿ ಸೋಮವಾರ ಸಂಜೆ ವಾಹನ ದಟ್ಟಣೆ ವಿಪರೀತವಾಗಿತ್ತು. ಸಾಲುಗಟ್ಟಿ ವಾಹನಗಳು ಚಲಿಸುತ್ತಿದ್ದವು. ಮುಂದೆ ಚಲಿಸುತ್ತಿದ್ದ ಓಮ್ನಿಯೊಂದರ ಚಾಲಕ ದಿಢೀರ್ ಬ್ರೇಕ್ ಹಾಕಿದ್ದರಿಂದ ಹಿಂದೆ ಬರುತ್ತಿದ್ದ ವಾಹನಗಳು ಒಂದಕ್ಕೊಂದು ಡಿಕ್ಕಿಯಾಗಿವೆ. ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ತೆರಳಿ ವಾಹನಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು' ಎಂದು ಚಿಕ್ಕಜಾಲ ಸಂಚಾರ ಪೊಲೀಸರು ಹೇಳಿದರು.

## ನಟ ರವಿಕಿರಣ್‌ಗೆ ವಂಚನೆ

ಅಪರಾಧ ಸುದ್ದಿ

**ಬೆಂಗಳೂರು:** 'ಅನಾಥಾಶ್ರಮಕ್ಕೆ ಹಣದ ಸಹಾಯ ನೀಡಿ' ಎಂದು ಹೇಳುತ್ತಾ ಪರಿಚಯವಾಗಿದ್ದ ಗೂರೂಜಿಯೊಬ್ಬ, ನಟ ರವಿಕಿರಣ್(65) ಅವರಿಂದ ₹4.32 ಲಕ್ಷ ಪಡೆದು ವಂಚಿಸಿದ್ದಾನೆ.

ರವಿಕಿರಣ್ ನೀಡಿದ ದೂರಿನ ಮೇರೆಗೆ ನವೀನ್ ಭಾಗ್ಯಶ್ರೀ ಗುರೂಜಿ ಮತ್ತು ಅವರ ಪತ್ನಿ ಚೈತ್ರಾ ವಿರುದ್ಧ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ರವಿಕಿರಣ್‌ಗೆ ಎರಡು ವರ್ಷದ ಹಿಂದೆ ಸ್ನೇಹಿತರ ಮೂಲಕ ಪರಿಚಯವಾಗಿದ್ದ ಗುರೂಜಿ, ಕಳೆದ ಅಕ್ಟೋಬರ್‌ನಲ್ಲಿ 'ನಾನು ಅನಾಥಾಶ್ರಮ ನಡೆಸುತ್ತಿದ್ದೇನೆ. ಏನಾದರೂ ದಿನಸಿ ಕೊಡಿಸಿ' ಎಂದು ರವಿಕಿರಣ್ ಅವರನ್ನು ಕೇಳಿದ್ದಾರೆ. ಆಗ ರವಿಕಿರಣ್ ಗೂಗಲ್ ಪೇ ಮೂಲಕ ₹2,500 ಕಳುಹಿಸಿದ್ದಾರೆ. ಬಳಿಕ ಗುರೂಜಿ, 'ನವೆಂಬರ್‌ನಲ್ಲಿ ದುಬೈನಲ್ಲಿ ಒಂದು ಕಾರ್ಯಕ್ರಮವಿದೆ. ನೀವು ಅಲ್ಲಿಗೆ ಮುಖ್ಯ ಅತಿಥಿಯಾಗಿ ಹೋದರೆ ದುಡ್ಡು ಕೊಡುತ್ತಾರೆ' ಎಂದು ನಂಬಿಸಿದ್ದಾರೆ. ಅದಕ್ಕೆ ರವಿಕಿರಣ್ ಒಪ್ಪಿದ್ದರು. ದುಬೈಗೆ ತೆರಳಲು ಟಿಕೆಟ್‌ಗೆಂದು ವಿವಿಧ ಹಂತಗಳಲ್ಲಿ ಗುರೂಜಿ ₹ 89 ಸಾವಿರ ಪಡೆದಿದ್ದಾರೆ. ಅಲ್ಲದೆ, ಹೊಸಕೋಟೆಯಲ್ಲಿ ಕಡಿಮೆ ಮೊತ್ತಕ್ಕೆ ನಿವೇಶನ ಕೊಡಿಸುತ್ತೇನೆ ಎಂದು ನಂಬಿಸಿ ಹಣ ಪಡೆದಿದ್ದಾರೆ' ಎಂದು ಮೂಲಗಳು ಹೇಳಿವೆ. ರವಿಕಿರಣ್ ಅವರಿಂದ ಒಟ್ಟು ₹4.32 ಲಕ್ಷ ಪಡೆದಿದ್ದಾರೆ ಎಂದು ದೂರು ನೀಡಿದ್ದಾರೆ.

## ₹25 ಲಕ್ಷದ ಬೈಕ್ ಜಪ್ತಿ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಂದು ವರ್ಷದಿಂದ ಬೆಂಗಳೂರು ಸೇರಿ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಬೈಕ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯದ ಅವಿನಾಶ್, ಹಾಸನದ ರಾಹುಲ್ ಹಾಗೂ ಶಶಿ ಬಂಧಿತರು.

'ಬಂಧಿತರಿಂದ ₹25 ಲಕ್ಷದ ಮೌಲ್ಯದ 20 ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಆರೋಪಿಗಳು ಮನೆ ಎದುರು ಹಾಗೂ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದರು. ನಕಲಿ ಕೀ ಬಳಸಿ ಇಲ್ಲವೇ ಹ್ಯಾಂಡಲ್ ಲಾಕ್ ತೆಗೆದು ಬೈಕ್ ಕಳವು ಮಾಡುತ್ತಿದ್ದರು. ಶೇಷಾದ್ರಿಪುರ ಠಾಣೆ ಸಿಬ್ಬಂದಿ ಗಸ್ತಿನಲ್ಲಿದ್ದಾಗ, ಇಬ್ಬರು ವ್ಯಕ್ತಿಗಳು ನಂಬರ್‌ಪ್ಲೇಟ್‌ ಇಲ್ಲದ ಒಂದು ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಅನುಮಾನಗೊಂಡು ಅವರನ್ನು ತಡೆದು ವಿಚಾರಣೆಗೆ ಒಳಪಡಿಸಿದಾಗ ಬೈಕ್ ಕಳವು ಮಾಡುತ್ತಿರುವುದು ಗೊತ್ತಾಯಿತು' ಎಂದು ಹೇಳಿದರು.

'ಇಬ್ಬರು ಆರೋಪಿಗಳು ಬೆಂಗಳೂರು ಅಲ್ಲದೇ ಚಿಕ್ಕಮಗಳೂರು, ಮಂಡ್ಯ, ದಾವಣಗೆರೆ, ಹಾಸನದ ಬೈಕ್‌ಗಳನ್ನು ಕಳವು ಮಾಡಿದ್ದಾರೆ. ಸದ್ಯಕ್ಕೆ 20 ಪ್ರಕರಣಗಳು ಪತ್ತೆಯಾಗಿವೆ. ತನಿಖೆ ಮುಂದುವರಿ-ಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.



ದುರಸ್ತಿಪಡಿಸಲು ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳ ನಿರ್ಲಕ್ಷ್ಯ

## ನಾಗಸಂದ್ರ ಮೆಟ್ರೊ ಸ್ಟೇಷನ್ ಬಳಿ ಕುಸಿದ ರಸ್ತೆ

**ಪೀಣ್ಯ ದಾಸರಹಳ್ಳಿ:** ನಾಗಸಂದ್ರ ಮೆಟ್ರೊ ಸ್ಟೇಷನ್ ಪ್ರವೇಶ ದ್ವಾರದದ(-ಮಂಜುನಾಥನಗರದ ಕಡೆ ಹೋಗುವ ದಾರಿ) ಪಕ್ಕದಲ್ಲಿನ ರಸ್ತೆ ಕುಸಿದು ಗುಂಡಿ ನಿರ್ಮಾಣವಾಗಿದೆ.


ಐದು ದಿನಗಳ ಹಿಂದೆ ಭಾರಿ ವಾಹನವೊಂದು ಈ ದಾರಿಯಲ್ಲಿ ಚಲಿಸಿದ ಮೇಲೆ ರಸ್ತೆ ಕುಸಿದಿದೆ. ಡಾಂಬರು ಸಹಿತ ಕುಸಿದಿದೆ. ಇವತ್ತಿ-ನವರೆಗೂ ಅದನ್ನು ದುರಸ್ತಿ ಮಾಡಿಲ್ಲ. ಬದಲಿಗೆ, ಗುಂಡಿಯ ಸುತ್ತ, ಕಲ್ಲು ಇಟ್ಟು, ದಾರ ಕಟ್ಟಲಾಗಿದೆ. ಇದರಿಂದ ಮೆಟ್ರೊ ರೈಲು ನಿಲ್ದಾಣಕ್ಕೆ ಬಂದು ಹೋಗುವವರಿಗೆ ತುಂಬಾ ತೊಂದರೆ-ಯಾಗುತ್ತಿದೆ. 'ನೀರಿನ ಸಂಪರ್ಕಕ್ಕಾಗಿ ಪೈಪ್ ಅಳವಡಿಸಲು ಈ ಭಾಗದಲ್ಲಿ ಗುಂಡಿ ತೆಗೆದಿದ್ದು, ಕಾಮಗಾರಿ ಮುಗಿದ ಮೇಲೆ ಸಮರ್ಪಕವಾಗಿ ಮುಚ್ಚಿ ರಸ್ತೆ ಮಾಡದ ಕಾರಣ, ಹೀಗೆ ಗುಂಡಿ ಬಿದ್ದಿದೆ. ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ಗುಂಡಿ ಮುಚ್ಚದೇ ನಿರ್ಲ-ಕ್ಷ್ಯವಹಿಸಿದ್ದಾರೆ' ಎಂದು ಸ್ಥಳೀಯರು ವ್ಯ-ಕ್ತಪಡಿಸುತ್ತಿದ್ದಾರೆ.

'ಜಲ ಮಂಡಳಿಯವರು ಪೈಪ್ ಒಡೆದಾಗ ಬಂದು ರಿಪೇರಿ ಮಾಡಿದರು. ನಂತರ ಹಾಗೆ ಬಿಟ್ಟು ಹೋಗಿದ್ದಾರೆ. ಮತ್ತೆ ಈ ಕಡೆ ತಲೆ ಹಾಕಿಲ್ಲ. ಇಲ್ಲಿ ಆಟೊ ನಿಲ್ಲಿಸಕ್ಕೂ ಜಾಗವಿಲ್ಲ. ಮೂರು ಅಡಿ ಆಳಗುಂಡಿ ಇದೆ. ದ್ವಿಚಕ್ರ ವಾಹನ ಸವಾರರು ಭಯದಿಂದ ವಾಹನ ಚಲಿಸುತ್ತಾರೆ. ಆದಷ್ಟು ಬೇಗ ದುರಸ್ತಿ ಮಾಡಬೇಕು' ಎಂದು ಆಟೊ ಚಾಲಕ ಈರಣ್ಣ ಆಗ್ರಹಿಸಿದ್ದಾರೆ.

**ಸರಿಪಡಿಸುತ್ತೇವೆ:** ಮೆಟ್ರೊ ನಿಲ್ದಾಣದ ಮುಂಭಾಗದಲ್ಲಿ ನೀರಿನ ಪೈಪ್ ಒಡೆದಿತ್ತು. ಅದನ್ನು ಸರಿಪಡಿಸಿದ್ದೇವೆ. ಪೈಪ್ ಅನ್ನು ಇನ್ನೊಂದು ಕಡೆಗೆ ನೇರ ಸಂಪರ್ಕ ಕಲ್ಪಿಸಬೇಕು. ಅದಕ್ಕಾಗಿ, ಹಾಗೆ ಬಿಟ್ಟಿದ್ದೇವೆ. ಶೀಘ್ರವೇ ಗುಂಡಿಯನ್ನು ಮುಚ್ಚಿ ಸರಿಪಡಿಸುತ್ತೇವೆ' ಎಂದು ಜಲಮಂಡಳಿ ಎಂಜಿನಿಯರ್ ನಾಗರಾಜ್ ಪ್ರತಿಕ್ರಿಯಿಸಿದ್ದಾರೆ.



ನಾಗಸಂದ್ರ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಆಟೊ ನಿಲ್ದಾಣದ ಹತ್ತಿರ ರಸ್ತೆ ಕುಸಿದಿರುವುದು.



# ಕತ್ತಾಳೆ ಜುಂಗಿನ ಪ್ಯಾಡ್



ಕತ್ತಾಳೆಯ ನಾರಿನಿಂದ ಉತ್ತಮವಾದ ಹಾಗೂ ಸುಸ್ಥಿರವಾದ ಸ್ಯಾನಿಟರಿ ಪ್ಯಾಡುಗಳನ್ನು ತಯಾರಿಸಬಹುದು

ಕೊಳ್ಳೇಗಾಲ ಶರ್ಮ

ಸ್ಯಾನಿಟರಿ ಪ್ಯಾಡುಗಳು ಅವಶ್ಯಕ ವಸ್ತುಗಳು. ಭಾರತದಲ್ಲಿರುವ ವಯಸ್ಕ ಮಹಿಳೆಯರಲ್ಲಿ ಶೇಕಡ ಅರವತ್ತರಷ್ಟು ಮಂದಿ ಪ್ರತಿ ತಿಂಗಳೂ ಮುಟ್ಟಾದಾಗ ಅಥವಾ ಹೆರಿಗೆಯಾದಾಗ ಸ್ಯಾನಿಟರಿ ಪ್ಯಾಡುಗಳನ್ನು ಬಳಸುತ್ತಾರೆ. ಹತ್ತಿ ಬಟ್ಟೆಗಳಿಗಿಂತ ಹೆಚ್ಚು ತೇವವನ್ನು ಹೀರಿಕೊಳ್ಳುವುದಷ್ಟೆ ಅಲ್ಲದೆ ಒಣಗಿರುವುದರಿಂದಾಗಿ ಇವು ಜನಪ್ರಿಯ. ಇದೀಗ ಪ್ಯಾಡುಗಳಲ್ಲಿ ಸಾಮಾನ್ಯವಾಗಿ ಬಳಸುವ ಹತ್ತಿಯ ಬದಲಿಗೆ ಕತ್ತಾಳೆಯ ನಾರಿನಿಂದ ಮಾಡಿದ ಹತ್ತಿಯನ್ನು ಬಳಸಬಹುದಂತೆ.

ಹೀಗೆ ಕತ್ತಾಳೆಯ ನಾರನ್ನು ಹಿಂಜಿ ಹತ್ತಿಯಂತಾಗಿಸುವ ವಿಧಾನವನ್ನು ಅಮೆರಿಕದ ಸ್ಟಾನ್ಫರ್ಡ್ ವಿ.ವಿಯ ಎಂಜಿನಿಯರ್ ಮನು ಪ್ರಕಾಶ್ ರೂಪಿಸಿದ್ದಾರೆಂದು ಕಮ್ಯುನಿಕೇಷನ್ಸ್ ಎಂಜಿನಿಯರ್ ಪತ್ರಿಕೆ ವರದಿ ಮಾಡಿದೆ.

ಮುಟ್ಟು, ಹೆರಿಗೆ ಅಲ್ಲದೆ ಮಕ್ಕಳಿಗೆ ಹಾಗೂ ಮುಪ್ಪಾದವರಿಗೆ ತೊಡಿಸುವ ಪ್ಯಾಡುಗಳೆಲ್ಲದರಲ್ಲಿಯೂ ಹತ್ತಿ ಇದ್ದೇ ಇರುತ್ತದೆ. ಮುಟ್ಟಿನ ಸ್ರಾವ ಹಾಗೂ ಮೂತ್ರವನ್ನು ಹೀರಿಕೊಂಡು ಒಳಸಾಗಿಸುವುದು ಇದರ ಕೆಲಸ. ಒಳಗೆ ತನ್ನ ತೂಕದ ಹತ್ತುಸಾವಿರದಿಂದ ಇಪ್ಪತ್ತುಸಾವಿರ ಪಟ್ಟು ದ್ರವವನ್ನು ಹೀರಿಕೊಳ್ಳುವ, ಹಾಗೂ ಹೀರಿದ ಮೇಲೂ ದಪ್ಪವಾಗದ ಪಾಲಿಮರು ಇರುತ್ತದೆ. ಇವೆಲ್ಲವನ್ನೂ ನೀರು ಹರಿಯಬಿಡದ ಪಾಲಿಥೀನಿನಂತಹ ವಸ್ತು ಆವರಿಸಿರುತ್ತದೆ. ಹೀಗೆ ಮಗು ದಿನ ಪೂರ್ತಿ ಮೂತ್ರ ಮಾಡಿದರೂ ಒದ್ದೆಯೆ ಆಗದಂತೆ ಕಾಪಾಡಬಹುದು.ಮಹಿಳೆಯರಿಗೆ ಮುಟ್ಟಿನ ಸಮಯದಲ್ಲಿ ಇದು ಬಹಳ ಅನುಕೂಲಿ.

ಹಾಗಿದ್ದರೂ ಪ್ರಪಂಚದಲ್ಲಿ ಏನಿಲ್ಲವೆಂದರೂ ಐವತ್ತು ಕೋಟಿಗೂ ಹೆಚ್ಚು ಮಹಿಳೆಯರಿಗೆ ಈ ಅನುಕೂಲವಿಲ್ಲ. ಹಳ್ಳಿಗಳಲ್ಲಿಯೂ ಪ್ಯಾಡು ತಯಾರಿಸುವಂತಾದರೆ ಅವರಿಗೂ ಈ ಅನುಕೂಲ ಒದಗಿಸಬಹುದು ಎನ್ನುವುದು ಪ್ರಕಾಶ್ ಅವರ ತರ್ಕ. ಇದಕ್ಕಾಗಿ ಪ್ರಕಾಶ್ ತಂಡ ಕಳೆಯಾಗಿ ಬೆಳೆಯುವ ಕತ್ತಾಳೆಯ ನಾರನ್ನೇ ಹತ್ತಿಯಂತೆ ಹಿಂಜಿದೆ.

ಬಾಳೆ, ಸೆಣಬಿನಂಥ ನಾರುಗಳನ್ನೂ ಬಳಸಲು ಯತ್ನಿಸಲಾಗಿದೆ. ಆದರೆ ಅವು ಯಾವುವೂ ಹತ್ತಿಯಷ್ಟು ತೇವವನ್ನು ಹೀರಲಾರವು. ಇದಕ್ಕೆ ಕಾರಣ ಆ ನಾರುಗಳಲ್ಲಿ ಇರುವ ಲಿಗ್ನಿನ್ ಎಂಬ ಅಂಟು. ಇದನ್ನು ತೆಗೆದಲ್ಲದೆ ನಾರುಗಳು ಬಿಡಿಸಿಕೊಂಡು ಹತ್ತಿಯಂತೆ ಜುಂಗು ಜುಂಗಾಗುವುದಿಲ್ಲ. ಕಾಗದಗಳನ್ನು ತಯಾರಿಸುವಾಗ ಈ ಲಿಗ್ನಿನನ್ನು ತೆಗೆಯಲು ಪ್ರಬಲವಾದ ದ್ರಾವಣಗಳನ್ನು ಬಳಸುತ್ತಾರೆ. ವಾರ್ಷಿಕ ಕನಿಷ್ಠ ನಾಲ್ಕು ಲಕ್ಷ ಟನ್ ಉತ್ಪಾದಿಸದಿದ್ದರೆ ಈ ತಂತ್ರ ದುಬಾರಿ ಆಗುತ್ತದೆ. ಹೀಗಾಗಿ ಸಣ್ಣ, ಪುಟ್ಟ ಉದ್ಯಮಗಳು ಇತ್ತ ಮುಖ ಹಾಕುವುದಿಲ್ಲ. ಇನ್ನು ಹಳ್ಳಿ, ಹಳ್ಳಿಯಲ್ಲಿಯೂ ಪ್ಯಾಡುಗಳನ್ನು ತಯಾರಿಸಲು, ಕಡಿಮೆ ಬೆಲೆಯಲ್ಲಿ, ಕಡಿಮೆ ಪ್ರಮಾಣದಲ್ಲಿ ತಯಾರಿಕೆಗೆ ಒಗ್ಗುವ ಹಿಂಜಿದ ನಾರು ಬೇಕಿತ್ತು. ಅದನ್ನು ಕತ್ತಾಳೆಯ ಎಲೆಗಳಿಂದ ಮಾಡಬಹುದು ಎನ್ನುತ್ತದೆ ಪ್ರಕಾಶ್ ತಂಡ.

ಪ್ರಕಾಶ್ ತಂಡ ಇದಕ್ಕಾಗಿ ಅಗೇವ್ ಸಿಸಲಾನಾ ಎನ್ನುವ ಕತ್ತಾಳೆಯ ಎಲೆಗಳನ್ನ ಬಳಸಿದೆ. ಈ ಕತ್ತಾಳೆ ಜಗತ್ತಿನ ಬಹುತೇಕ ಪ್ರದೇಶಗಳಲ್ಲಿ, ಬೇಲಿಯಾಗಿಯೋ, ಅಥವಾ ಬೆಂಗಾಡಿನಲ್ಲಿ ಕುರುಚಲಾಗಿಯೋ ಬೆಳೆಯುವ ಗಿಡ. ನಮ್ಮಲ್ಲಿ ಇದರ ಹೂವನ್ನಷ್ಟೆ ಒಮ್ಮೊಮ್ಮೆ ಬಳಸುವುದುಂಟು. ಈ ಗಿಡದ ದಪ್ಪ ಎಲೆಯನ್ನು ಜಜ್ಜಿ, ಬೇಯಿಸಿದರೆ ನಾರನ್ನು ಬೇರ್ಪಡಿಸಬಹುದು. ಹೀಗೆ ಬೇರ್ಪಡಿಸಿದ ನಾರನ್ನು ಪ್ರಕಾಶ್ ತಂಡ ಪರಾಕ್ಸಿ ಫಾರ್ಮಿಕ್ ಆಮ್ಲವನ್ನು ಬಳಸಿ ಲಿಗ್ನಿನನ್ನು ಕರಗಿಸಿದೆ. ಪರಾಕ್ಸಿ ಫಾರ್ಮಿಕ್ ಆಮ್ಲ ಇತರೆ ಆಮ್ಲಗಳಂತೆ ಪ್ರಬಲವಲ್ಲ. ಬಳಸುವುದು ಸುಲಭ. ಜೊತೆಗೆ ಇದು ಲಿಗ್ನಿನನ್ನು ಮಾತ್ರ ಕರಗಿಸಿ, ಎಳೆಗಳನ್ನು ಬಿಡಿಸುತ್ತದೆ. ಹೀಗೆ ಬಿಡಿಯಾದ ಎಳೆಗಳನ್ನು ಸೋಡಿಯಂ ಹೈಡ್ರಾಕ್ಸೈಡಿನ ದ್ರಾವಣದಲ್ಲಿ ಕೆಲವು ಗಂಟೆಗಳ ಕಾಲ ಅದ್ದಿ ತೆಗೆದಿದೆ. ನಂತರ ನೀರಿನಲ್ಲಿ ತೊಳೆದು, ಮಿಕ್ಸಿಯಲ್ಲಿ ರುಬ್ಬಿದೆ. ಹೀಗೆ ನಾರಿನಿಂದ ತೆಗೆದ ಸೂಕ್ಷ್ಮವಾದ ಎಳೆಗಳು ಹತ್ತಿಯುಂಡೆಯಂತೆಯೇ ಜುಂಗು ಜುಂಗಾಗುತ್ತವೆ ಎನ್ನುತ್ತಾರೆ ಪ್ರಕಾಶ್.

ಇವನ್ನು ಪ್ಯಾಡಿನಂತೆ ಮಾಡಿ ದಪ್ಪನೆಯ ದ್ರವವನ್ನು ಹೀರಲು ಕೊಟ್ಟಾಗ, ಅಷ್ಟೇ ದಪ್ಪದ ಹತ್ತಿಯ ಪ್ಯಾಡಿಗಿಂತ ಮೂವತ್ತು ಪಟ್ಟು ಹೆಚ್ಚು ದ್ರವವನ್ನು ಹೀರಿಕೊಂಡಿದೆ. ಹೀರಿಕೊಂಡು ಹತ್ತಿಯಂತೆ ಕುಗ್ಗದೆ ಇದ್ದ ಗಾತ್ರದಲ್ಲಿಯೇ ಉಳಿಯಿತೆಂದೂ ಈ ತಂಡ ವರದಿ ಮಾಡಿದೆ.

ಇದೇ ತಂತ್ರವನ್ನು ಬಳಸಿ ಸೆಣಬು ಹಾಗೂ ಅಗಸೆ ನಾರನ್ನೂ ಇವರು ಹಿಂಜಿದ್ದಾರೆ. ಅವುಗಳ ಕ್ಷಮತೆಯನ್ನೂ ಪರೀಕ್ಷಿಸಿದ್ದಾರೆ. ಸೂಕ್ಷ್ಮದರ್ಶಕದ ಅಡಿಯಲ್ಲಿ ಅವುಗಳ ಎಳೆಗಳ ರಚನೆಯನ್ನು ಹೋಲಿಸಿದ್ದಾರೆ. ಈ ಎಲ್ಲ ಪರೀಕ್ಷೆಗಳಲ್ಲಿಯೂ, ಸೆಣಬು ಹಾಗೂ ಅಗಸೆಯ ನಾರುಗಳು ಹತ್ತಿ ಮತ್ತು ಕತ್ತಾಳೆಯ ನಾರಿನಷ್ಟು ನೀರನ್ನು ಅಥವಾ ದ್ರವವನ್ನು ಹೀರಿಕೊಳ್ಳಲಿಲ್ಲ. ಎಲ್ಲ ಪರೀಕ್ಷೆಗಳಲ್ಲಿಯೂ ಕತ್ತಾಳೆಯ ನಾರು ಮುಂದಿತ್ತು ಎಂದು ಕಮ್ಯೂನಿಕೇಷನ್ಸ್ ಎಂಜಿನಿಯರ್ ವರದಿ ಮಾಡಿದೆ.

ಇನ್ನೂ ಒಂದು ವಿಷಯದಲ್ಲಿ ಕತ್ತಾಳೆ ಉಳಿದವುಗಳಿಗಿಂತ ಮುಂದು. ಇದು ಪ್ರಪಂಚದ ಬಹುತೇಕ ಸ್ಥಳಗಳಲ್ಲಿ ಬೆಳೆಯುವ ಗಿಡ. ರಸ್ತೆ ಬದಿಯಲ್ಲಿ, ಸುಡುಗಾಡಿನಲ್ಲಿಯೂ ಬೆಳೆಯುವ ಕತ್ತಾಳೆಯ ನಾರುಗಳನ್ನು ತಯಾರಿಸಲು ಬೇಕಾಗುವ ನೀರು, ಬೆಳೆಯಲು ಬೇಕಾದ ನೀರಾವರಿ, ಗೊಬ್ಬರದ ಪ್ರಮಾಣವನ್ನೂ ಗಣಿಸಿ, ಹತ್ತಿಯದ್ದರ ಜೊತೆಗೆ ಹೋಲಿಸಿದ್ದಾರೆ. ಸುಲಭ, ಸರಳ ವಿಧಾನದಿಂದ ತೆಗೆಯಬಹುದಾದ ಕತ್ತಾಳೆಯ ಜುಂಗು ಹಳ್ಳಿಯ ಜನ ಅಲ್ಲಿಯೇ ಪ್ಯಾಡುಗಳನ್ನು ತಯಾರಿಸಿಕೊಳ್ಳಲು ತಕ್ಕುದಾಗಿದೆ ಎನ್ನುತ್ತಾರೆ ಪ್ರಕಾಶ್.

ಕೆಲವೇ ಕೆಲವು ಕಿಲೋಗಳಷ್ಟು ಜುಂಗನ್ನು ಕೂಡ ಲಾಭದಾಯಕವಾಗಿ ತಯಾರಿಸಬಹುದು ಎನ್ನುವುದು ಇನ್ನೊಂದು ಅಂಶ. ಹಳ್ಳಿಗಳಲ್ಲಿಯೇ ಇದನ್ನು ಸಣ್ಣ ಪ್ರಮಾಣದಲ್ಲಿ ತಯಾರಿಸಿ ಬಳಸಲು ನೆರವಾಗುತ್ತದೆ. ಪ್ರತಿ ಕಿಲೋ ಹಿಂಜಿನ ನಾರನ್ನು ತಯಾರಿಸಲು ಹತ್ತಿ ಅಥವಾ ಸೆಣಬು ತಯಾರಿಸುವುದಕ್ಕೆ ಬೇಕಾಗುವ ನೀರಿನ ಮೂರರಲ್ಲೊಂದು ಪಾಲು ಕತ್ತಾಳೆಯ ಹತ್ತಿ ತಯಾರಿಸಲು ಸಾಕು. ಭಾರತದಲ್ಲಿ ಈಗಾಗಲೇ ಹಳ್ಳಿಗಳಲ್ಲಿಯೇ ಪ್ಯಾಡು ತಯಾರಿಸುವ ಯಂತ್ರಗಳು ತಯಾರಾಗುತ್ತಿವೆ. ಅದರ ಜೊತೆಗೆ ಕತ್ತಾಳೆಯ ಜುಂಗಿನಂತಹ ಅಗ್ಗದ ವಸ್ತುವೂ ಸೇರಿದರೆ, ಬಹುಶಃ ಇದೀಗ ಈ ಪ್ಯಾಡುಗಳು ಕೈಗೆಟುಕದ ಐವತ್ತು ಕೋಟಿ ಮಹಿಳೆಯರಿಗೂ ಲಾಭ ಆಗಬಹುದು. ❖

# ಒಂದೇ ಫೋನ್‌ನಲ್ಲಿ ಎರಡು ವಾಟ್ಸ್‌ಆ್ಯಪ್ ಖಾತೆ ಬಳಸುವುದು ಹೇಗೆ?

ಅವಿನಾಶ್ ಬಿ.

**ಅವಳಿ ಸಿಮ್ ಕಾರ್ಡ್** ಬೆಂಬಲಿಸುವ ಫೋನ್‌ಗಳ ಈ ಕಾಲದಲ್ಲಿ ಬಹುತೇಕರು ಇಂದು ಎರಡೆರಡು ಮೊಬೈಲ್ ಫೋನ್ ನಂಬರ್‌ಗಳನ್ನು (ಸಿಮ್ ಕಾರ್ಡ್) ಹೊಂದಿರುತ್ತಾರೆ. ಒಂದನ್ನು ಕಚೇರಿ ಅಥವಾ ಉದ್ಯಮಕ್ಕೆ ಸಂಬಂಧಿಸಿದಂತೆಯೂ, ಮತ್ತೊಂದನ್ನು ವೈಯಕ್ತಿಕ ಬಳಕೆಗೂ ಉಪಯೋಗಿಸುವುದು ಸಾಮಾನ್ಯ. ಅದಕ್ಕೆ ತಕ್ಕಂತೆ ಕೆಲವರಿಗೆ ಎರಡೆರಡು ವಾಟ್ಸ್‌ಆ್ಯಪ್ ಖಾತೆಗಳನ್ನು ತೆರೆಯುವುದು ಅನಿವಾರ್ಯ. ಎರಡನ್ನೂ ನಿಭಾಯಿಸಬೇಕಿದ್ದರೆ ಇದುವರೆಗೆ ಸಾಕಷ್ಟು ಕಸರತ್ತು ಮಾಡಬೇಕಾಗುತ್ತಿತ್ತು ಅಥವಾ ಎರಡೆರಡು ಫೋನ್‌ಗಳನ್ನು ಒಯ್ಯಬೇಕಾಗುತ್ತಿತ್ತು.

ಆದರೆ, ಕಳೆದ ಅಕ್ಟೋಬರ್ 19ರಂದು ಮೆಟಾ ಒಡೆತನದ ವಾಟ್ಸ್‌ಆ್ಯಪ್ ಸಂಸ್ಥೆಯೇ ತನ್ನ ಆ್ಯಪ್‌ಗೆ ಹೊಸ ಅಪ್‌ಡೇಟ್ ನೀಡಿದ್ದು, ಎರಡು ವಾಟ್ಸ್‌ಆ್ಯಪ್ ಖಾತೆಗಳನ್ನು ಏಕಕಾಲದಲ್ಲಿ ನಿಭಾಯಿಸಲು ಅನುವು ಮಾಡಿಕೊಟ್ಟಿದೆ. ಅಂದರೆ ಎರಡೂ ಖಾತೆಗಳನ್ನು ಒಂದೇ ಫೋನ್‌ನಲ್ಲಿರುವ ಒಂದೇ ಆ್ಯಪ್‌ನಿಂದ ನಿಭಾಯಿಸಬಹುದು. ಅದು ಹೇಗೆ ಮತ್ತು ಇದರ ಬದಲಾಗಿ ಇರುವ ಬೇರೆ ಆಯ್ಕೆಗಳೇನು ಎಂಬ ಮಾಹಿತಿ ಇಲ್ಲಿದೆ.

**ಒಂದೇ ಆ್ಯಪ್, ಎರಡು ಖಾತೆ ಬಳಸುವುದು ಹೇಗೆ?:** ಈ ವ್ಯವಸ್ಥೆ ಈಗಾಗಲೇ ಇನ್‌ಸ್ಟಾಗ್ರಾಂ ಹಾಗೂ ಎಕ್ಸ್‌ನಲ್ಲಿ (ಹಿಂದಿನ ಟ್ವಿಟರ್‌ನಲ್ಲಿ) ಇದೆ ಎಂಬುದು ಹೆಚ್ಚಿನವರಿಗೆ ತಿಳಿದಿಲ್ಲ. ಖಾತೆ ಬದಲಾಯಿಸಿಕೊಳ್ಳುವ (Switch Accounts) ಒಂದು ಬಟನ್ ಒತ್ತಿದರೆ, ಯಾವ ಖಾತೆಗೆ ಬೇಕೋ, ಅದನ್ನು ಬಳಸಬಹುದು.

**ಹೀಗೆ ಮಾಡಿ:**

- **ವಾಟ್ಸ್‌ಆ್ಯಪ್ ಇತ್ತೀಚಿನ ಆವೃತ್ತಿಗೆ ಅಪ್‌ಡೇಟ್ ಆಗಿರುವಂತೆ ನೋಡಿಕೊಳ್ಳಿ**
- **ಫೋನ್‌ನಲ್ಲಿ ವಾಟ್ಸ್‌ಆ್ಯಪ್ ತೆರೆಯಿರಿ**
- **ಬಲ ಮೇಲ್ಭಾಗದಲ್ಲಿ ಮೂರು ಲಂಬ ಚುಕ್ಕಿಗಳಿರುವಲ್ಲಿ ಒತ್ತಿ ಸೆಟ್ಟಿಂಗ್ಸ್ ತೆರೆಯಿರಿ**
- **ಸ್ವಲ್ಪ ಕೆಳಗೆ ನೋಡಿದಾಗ ಕಾಣಿಸುವ 'ಅಕೌಂಟ್ಸ್' ಒತ್ತಿ**
- **'Add Account' ಕ್ಲಿಕ್ ಮಾಡಿ, ಮುಂದಿನ ಬಟನ್‌ನಲ್ಲಿ ಅನುಮತಿ ನೀಡಿ.**
- **ನಂತರ ನಿಮ್ಮ ಫೋನ್ ನಂಬರ್ ನಮೂದಿಸಿ, 'ನೆಕ್ಸ್ಟ್' ಒತ್ತಿ**
- **ಸ್ಕ್ರೀನ್ ಮೇಲೆ ಮುಂದಿನ ಸೂಚನೆಗಳನ್ನು ಅನುಸರಿಸಿ**

**ಬೇರೊಂದು ಖಾತೆಯ ಸಂದೇಶಗಳನ್ನು ನೋಡುವುದು ಹೇಗೆ?:** ಸಂದೇಶ ಬಂದಾಗ ಯಾವ ಸಂಖ್ಯೆಗೆ ಸಂದೇಶ ಬಂತು ಎಂಬುದನ್ನು ನೋಟಿಫಿಕೇಶನ್‌ನಲ್ಲೇ ಆ್ಯಪ್ ತೋರಿಸುತ್ತದೆ. ಆದರೆ ಎರಡೂ ವಾಟ್ಸ್‌ಆ್ಯಪ್ ಖಾತೆಗಳಿಗೆ ನೀವು ನೋಟಿಫಿಕೇಶನ್ ಧ್ವನಿಯನ್ನು ಬೇರೆ ಬೇರೆ ಹೊಂದಿಸಿಟ್ಟರೆ, ಯಾವುದರಿಂದ ಸಂದೇಶ ಬಂತು ಎಂಬುದನ್ನು ಫೋನ್ ನೋಡದೆಯೇ ತಿಳಿಯುವುದು ಸಾಧ್ಯ. ನೋಟಿಫಿಕೇಶನ್ ಸ್ಪರ್ಶಿಸಿದ ತಕ್ಷಣ ನೀವು ಆಯಾ ಖಾತೆಯ ವಾಟ್ಸ್‌ಆ್ಯಪ್‌ಗೇ ನೇರವಾಗಿ ಹೋಗಬಹುದು. ಇಲ್ಲವೆಂದಾದರೆ, ಈಗಾಗಲೇ ತೆರೆದಿರುವ ವಾಟ್ಸ್‌ಆ್ಯಪ್‌ನಲ್ಲಿ ಹಿಂದೆ ಹೇಳಿದಂತೆ ಸೆಟ್ಟಿಂಗ್ಸ್‌ಗೆ ಹೋದರೆ, ಅಲ್ಲೇ ಕೆಳಗೆ 'Switch Accounts' ಎಂಬ ಆಯ್ಕೆ ಗೋಚರಿಸುತ್ತದೆ. ಅದನ್ನು ಬಳಸಿ ಮುಂದುವರಿಸಬಹುದು. ಈ ರೀತಿ ಮಾಡಿದರೆ, ಕೇವಲ ವಾಟ್ಸ್‌ಆ್ಯಪ್‌ಗಾಗಿ ಎರಡೆರಡು ಮೊಬೈಲ್ ಫೋನ್‌ಗಳನ್ನು ಒಯ್ಯುವ ಅಗತ್ಯವಿರುವುದಿಲ್ಲ.

**ಕ್ಲೋನ್ ಅಥವಾ ಟ್ವಿನ್ ಆ್ಯಪ್:** ವಾಟ್ಸ್‌ಆ್ಯಪ್ ಈ ಅವಳಿ ಖಾತೆಯ ಹೊಸ ವೈಶಿಷ್ಟ್ಯ ಪರಿಚಯಿಸುವ ಮುನ್ನವೇ ಸಾಕಷ್ಟು ಮೊಬೈಲ್ ಫೋನ್ ತಯಾರಿಕಾ ಕಂಪನಿಗಳು ಕ್ಲೋನ್, ಡುಪ್ಲಿಕೇಟ್, ಪ್ಯಾರಲಲ್ ಅಥವಾ ಟ್ವಿನ್ - ಇತ್ಯಾದಿ ಹೆಸರುಗಳಲ್ಲಿ (ಫೋನ್ ಬ್ರ್ಯಾಂಡ್‌ಗಳಲ್ಲಿ ಬೇರೆ ಬೇರೆ ಹೆಸರು) ಪ್ರಮುಖ ಸಾಮಾಜಿಕ ಜಾಲತಾಣಗಳ ಮತ್ತೊಂದು ಆ್ಯಪ್ ಅನ್ನು ಅಳವಡಿಸಲು ಅನುಕೂಲ ಕಲ್ಪಿಸಿದ್ದವು. ಅದಕ್ಕೆ ಪ್ರತ್ಯೇಕವಾಗಿ ಆ್ಯಪ್ ಇನ್‌ಸ್ಟಾಲ್ ಆಗುತ್ತಿತ್ತು. ನಿಮ್ಮ ಫೋನ್‌ನಲ್ಲೂ ಇದೆಯೇ ಎಂದು ಸೆಟ್ಟಿಂಗ್ಸ್‌ನಲ್ಲಿರುವ ಸ್ಪೆಶಲ್ ಫಂಕ್ಷನ್, ಯುಟಿಲಿಟಿ, ಹೆಚ್ಚುವರಿ ಫಂಕ್ಷನ್ - ಮುಂತಾದ ಆಯ್ಕೆಗಳಲ್ಲಿ ಹುಡುಕಿದರೆ ತಿಳಿಯಬಹುದು (ವಿವಿಧ ಫೋನ್ ಕಂಪನಿಗಳಲ್ಲಿ ಒಂದೊಂದು ಹೆಸರಿರಬಹುದು). ಇದಲ್ಲದೆ, ಒಂದು ವಾಟ್ಸ್‌ಆ್ಯಪ್ ಖಾತೆಯನ್ನು ಒಂದು ಮೊಬೈಲ್ ಫೋನ್ ಹಾಗೂ ಇತರ ಮೂರು ಸಾಧನಗಳಲ್ಲಿ Web.WhatsApp.com ಮೂಲಕ (ಕಂಪ್ಯೂಟರ್/ಲ್ಯಾಪ್‌ಟಾಪ್) - ಏಕಕಾಲಕ್ಕೆ ನಾಲ್ಕು ಕಡೆ ಬಳಸುವ ಆಯ್ಕೆ ಈಗಾಗಲೇ ಇದೆ. ವಾಟ್ಸ್‌ಆ್ಯಪ್ ಸೆಟ್ಟಿಂಗ್ಸ್‌ನಲ್ಲಿರುವ Link A Device ಆಯ್ಕೆಯ ಮೂಲಕ ಇದರ ಉಪಯೋಗ ಪಡೆದುಕೊಳ್ಳಬಹುದು. ❖

ಒಂದು ಫೋನ್‌ನಲ್ಲಿರುವ ಒಂದು ವಾಟ್ಸ್‌ಆ್ಯಪ್ ಆ್ಯಪ್ ಮೂಲಕ ಏಕಕಾಲದಲ್ಲಿ ಎರಡು ಖಾತೆಗಳನ್ನು ಹೇಗೆ ನಿಭಾಯಿಸಬಹುದು? ಇರುವ ಬೇರೆ ಮಾರ್ಗಗಳೇನು? ಇಲ್ಲಿದೆ ಮಾಹಿತಿ



# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

## ನಿಯಂತ್ರಣ ಮತ್ತು ಸಹಭಾಗಿತ್ವ

**9) ಸಸ್ಯಗಳು ತೋರುವ ಎರಡು ವಿಭಿನ್ನ ರೀತಿಯ ಚಲನೆಗಳ ಬಗ್ಗೆ ಬರೆಯಿರಿ**

**ಉತ್ತರ:–** ಸಸ್ಯಗಳು ಎರಡು ಬಗೆಯ ಚಲನೆಗಳನ್ನು ತೋರಿಸುತ್ತವೆ ಅವುಗಳೆಂದರೆ (1) ಬೆಳವಣಿಗೆಯನ್ನು ಆಧರಿಸಿದ ಚಲನೆ
(2) ಸ್ವತಂತ್ರ ಚಲನೆ

**10) ಸಸ್ಯ ಹಾರ್ಮೋನ್‌ಗಳು ಎಂದರೇನು?**

**ಉತ್ತರ:–** ಸಸ್ಯಗಳಲ್ಲಿ ಸಹಭಾಗಿತ್ವ ಮತ್ತು ನಿಯಂತ್ರಣಕ್ಕೆ ಕಾರಣವಾಗುವ ವಿಶೇಷ ರಸಾಯನಿಕಗಳನ್ನು ಸಸ್ಯ ಹಾರ್ಮೋನ್‌ಗಳು ಎನ್ನುವರು.

**11) ಮುಟ್ಟಿದರೆ ಮುನಿ ಎಂಬ ಸಸ್ಯದ ಎಲೆಗಳ ಚಲನೆಯು ಯಾವ ರೀತಿ ಇರುತ್ತದೆ? ಬೆಳಕಿನ ಕಡೆಗೆ ಚಲಿಸುವ ಕಾಂಡದ ಚಲನೆಗಿಂತ ಹೇಗೆ ಭಿನ್ನವಾಗಿದೆ?**

**ಉತ್ತರ:–** ಮುಟ್ಟಿದರೆ ಮುನಿ ಸಸ್ಯದ ಎಲೆಗಳ ಚಲನೆಯು ಸ್ಪರ್ಶದಿಂದ ಉಂಟಾಗುವುದು. ಇದರಲ್ಲಿ ಸಸ್ಯ ಕೋಶಗಳು ತಮ್ಮೊಳಗಿನ ನೀರಿನ ಪ್ರಮಾಣವನ್ನು ಬದಲಾಯಿಸಿ ತಮ್ಮ ಆಕಾರವನ್ನು ಬದಲಿಸುತ್ತದೆ.

**12) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳಿಗೆ ಉದಾಹರಣೆ ಕೊಡಿ**


**ಉತ್ತರ:–** ಆಕ್ಸಿನ್ ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳ ಉದಾಹಣೆಯಾಗಿದೆ.

**13) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರನವಾಗುತ್ತದೆ?**

**ಉತ್ತರ:–** ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್

**14) ಮಾನವ ಮಿದುಳಿನ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ**

**ಉತ್ತರ:–**




**15) ಯಾವುದು ಮಿದುಳು ಬಳ್ಳಿಯನ್ನು ಯಾವುದು ರಕ್ಷಿಸುತ್ತದೆ?**

**ಉತ್ತರ:–** ಕಶೇರುಸ್ತಂಭ ಅಥವಾ ಬೆನ್ನು ಮೂಳೆ

**16) ಸಸ್ಯಗಳಲ್ಲಿರುವ ಗುತ್ವಾನುವರ್ತನೆಯ ಬಗ್ಗೆ ಬರೆಯಿರಿ.**


**ಉತ್ತರ:–** ಸಸ್ಯದ ಬೇರುಗಳು ಯಾವಾಗಲೂ ಕೆಳಮುಖವಾಗಿ ಬೆಳೆಯುತ್ತವೆ ಹಾಗೆಯೇ ಚಿಗುರುಗಳು ಸಾಮಾನ್ಯವಾಗಿ ಭೂಮಿಯಿಂದ ದೂರಕ್ಕೆ ಮೇಲ್ಮುಖವಾಗಿ ಬೆಳೆಯುತ್ತವೆ. ಭೂಮಿಯ ಅಥವಾ ಗುರುತ್ವದ ಸೆಳೆತಕ್ಕೆ ಪ್ರತಿಕ್ರಿಯೆಯಾಗಿ ಚಿಗುರುಗಳ ಮೇಲ್ಮುಖ ಬೆಳವಣಿಗೆ ಮತ್ತು ಬೇರುಗಳ ಕೆಳಮುಖ ಬೆಳವಣಿಗೆಯನ್ನು ಗುರುತ್ವಾನುವರ್ತನೆ (geotropism) ಎಂದು ಹೇಳಬಹುದು

**17) ಸಸ್ಯಗಳಲ್ಲಿರುವ ಹಾರ್ಮೋನ್‌ಗಳ ಕುರಿತು ಬರೆಯಿರಿ.**

**ಉತ್ತರ:–** ಸಸ್ಯಗಳು ಬೆಳಕನ್ನು ಗ್ರಹಿಸಿದಾಗ ಅದರ ಕಾಂಡದ ತುದಿಯಲ್ಲಿ ಆಕ್ಸಿನ್ (auxin) ಎಂಬ ಹಾರ್ಮೋನ್ ಸಂಶ್ಲೇಷಿಸಲ್ಪಟ್ಟು ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ. ಯಾವಾಗ ಬೆಳಕು ಸಸ್ಯದ ಒಂದು ಕಡೆಯಿಂದ ಪಸರಿಸಲು ಪ್ರಾರಂಭಿಸುತ್ತದೋ, ಆಕ್ಸಿನ್ ಕಾಂಡದ ನೆರಳಿನ ಭಾಗದ ಕಡೆಗೆ ವಿಸರಣೆಗೊಳ್ಳುತ್ತದೆ. ಆಕ್ಸಿನ್‌ನ ಈ ಸಾಂದ್ರತೆಯು ಬೆಳಕಿನಿಂದ ದೂರವಿರುವ ಕಾಂಡದ ಭಾಗದಲ್ಲಿರುವ ಜೀವಕೋಶಗಳನ್ನು ಉದ್ದವಾಗಿ ಬೆಳೆಯಲು ಪ್ರಚೋದಿಸುತ್ತದೆ. ಹೀಗೆ ಸಸ್ಯವು ಬೆಳಕಿನ ಕಡೆಗೆ ಬಾಗಿದಂತೆ ಕಾಣುತ್ತದೆ. ಆಕ್ಸಿನ್‌ಗಳಂತೆಯೇ ಕಾಂಡದ ಬೆಳವಣಿಗೆಯಲ್ಲಿ ಸಹಕರಿಸುವ ಸಸ್ಯ ಹಾರ್ಮೋನ್‌ಗಳಿಗೆ ಮತ್ತೊಂದು ಉದಾಹರಣೆ ಎಂದರೆ ಜಿಬ್ಬರ್‌ಲಿನ್‌ಗಳು (gibberellins). ಸೈಟೋಕೈನಿನ್‌ಗಳು (cytokinin) ಕೋಶವಿಭಜನೆಯನ್ನು ಉತ್ತೇಜಿಸುತ್ತವೆ ಮತ್ತು ಸಾಮಾನ್ಯವಾಗಿ ಇವು ಹಣ್ಣು ಮತ್ತು ಬೀಜಗಳಂತಹ ತೀವ್ರ ಕೋಶವಿಭಜನೆಗೆ ಒಳಪಡುವ ಪ್ರದೇಶಗಳಲ್ಲಿ ಅತಿ ಹೆಚ್ಚಿನ ಸಾಂದ್ರತೆಯಲ್ಲಿ ಕಂಡುಬರುತ್ತವೆ. ಇವು ಸಸ್ಯಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸಲು ಸಹಾಯ ಮಾಡುವ ಹಾರ್ಮೋನ್‌ಗಳಿಗೆ ಕೆಲವು ಉದಾಹರಣೆಗಳಾಗಿವೆ. ಆದರೆ, ಸಸ್ಯಗಳಿಗೆ ಬೆಳವಣಿಗೆಯನ್ನು ನಿಲ್ಲಿಸಲೂ ಸಹ ಸಂಕೇತಗಳ ಅಗತ್ಯವಿದೆ. ಒಂದು ಉದಾಹರಣೆ ಎಂದರೆ ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್, ಅದು ಬೆಳವಣಿಗೆಯನ್ನು ಪ್ರತಿಬಂಧಿಸುತ್ತದೆ. ಇದರ ಪರಿಣಾಮಗಳು ಎಲೆಗಳ ಬಾಡುವಿಕೆಯನ್ನೂ ಕಾಣಬಹುದು.

**18) ಮಾನವನಲ್ಲಿರುವ ಅಂತಃಸ್ರಾವಕ ಗ್ರಂಥಿಗಳ ಚಿತ್ರ ಬರೆದು ಗುರುತಿಸಿ**

**ಉತ್ತರ:–**




**ಗಮನಿಸಿ:–** ಮೊದಲ ಚಿತ್ರವು ಪುರುಷ ಹಾಗೂ ದ್ವಿತೀಯ ಚಿತ್ರವು ಸ್ತ್ರೀಯದ್ದಾಗಿದೆ

*(ಮುಂದುವರಿಯುವುದು...........)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHEMATICS

## II PUC : MATHEMATICS

### *DETERMINANTS*

***Applications of simultaneous linear equations***

*(........Contd)*

$$\therefore \text{adj } A = \begin{bmatrix} -112 & 96 & 0 \\ 15 & -14 & -1 \\ 1 & -2 & 1 \end{bmatrix}' = \begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}$$

$$\therefore A^{-1} = \frac{1}{|A|}(\text{adj } A) = -\frac{1}{16}\begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}$$

Hence, the solution is given by

$$X = A^{-1}B$$

$$= -\frac{1}{16}\begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}\begin{bmatrix} 5000 \\ 35800 \\ 7000 \end{bmatrix}$$

$$= -\frac{1}{16}\begin{bmatrix} -560000+537000+7000 \\ 480000-501200-14000 \\ 0-35800+7000 \end{bmatrix}$$

$$\text{i, e., } \begin{bmatrix} x \\ y \\ z \end{bmatrix} = \begin{bmatrix} 1000 \\ 2200 \\ 1800 \end{bmatrix}$$

Hence, $x = 1000, y = 2200$ and $z = 1800$

$\therefore$ The three investments are of Rs. 1000, Rs. 2200 and Rs. 1800 respectively.

### *CALCULUS*

Basics in Calculus

1) What is the derivative of a constant?

Ans:- **The Derivative of a constant is zero.**

$$\left[\frac{d}{dy}(\text{constant}) = 0\right]$$

2) What is the Derivative of a product of a constant and a function?

Ans:- **Derivative of a product of a constant and a function is given by -**

$$\left[\frac{d}{dy}(\text{constant} \times \text{function}) = \text{constant} \times \frac{d}{dx}(\text{function})\right]$$

**3) What is the Derivative of the sum of two functions?**

**Ans:-** Derivative of the sum of 2 functions is -

$$\frac{d}{dx}(u+v) = \frac{du}{dx} + \frac{dv}{dx}$$

**4) What is the Derivative of the difference of two functions?**

**Ans:-** Derivative of difference of 2 functions is-

$$\frac{d}{dx}(u-v) = \frac{du}{dx} - \frac{dv}{dx}$$

**5) What is the Derivative of the product of two functions?**

**Ans:**-Derivative of the product of 2 functions is-

$$\left[(1^{st}\text{ function}).\frac{d}{dx}(2^{nd}\text{ function}) + (2^{nd}\text{ function}).\frac{d}{dx}(1^{st}\text{ function})\right]$$

$$\frac{d}{dx}(uv) = u.\frac{du}{dx} + v.\frac{dv}{dx}$$

**6) What is the Derivative of the quotient of two functions?**

**Ans:-** Derivative of the quotient of two functions is given by (Quotient formula) -

$$\frac{d}{dx}\left(\frac{u}{v}\right) = \frac{v.\frac{du}{dx} - u.\frac{dv}{dx}}{v^2}$$

$$\Rightarrow \frac{\left[(\text{Dino min ator})\frac{du}{dx}(\text{Numerator}) - (\text{Numerator})\frac{dv}{dx}(\text{Dino min ator})\right]}{(\text{Dino min ator})^2}$$

7) Differentiate $\sqrt{\log x}$ w.r.t 'x'.

Soln: - Let $y = \sqrt{\log x}$

$$\frac{dy}{dx} = \frac{d}{dx}\frac{1}{2\sqrt{\log x}}.\frac{d}{dx}(\log x)$$

$$= \frac{1}{2\sqrt{\log x}}.\frac{1}{x} = \frac{1}{2x\sqrt{\log x}}$$

**8) Differentiate** $\cos(2x^o)$ **w.r.t x**

**Soln: -** Let $y = \cos(2x^\circ)$

we have $(2x^\circ) = \left(\frac{\pi x}{90}\right)^c$

$$\frac{dy}{dx} = -\sin\left(\frac{\pi x}{90}\right).\frac{d}{dx}\left(\frac{\pi x}{90}\right) = -\frac{\pi}{90}\sin\left(\frac{\pi x}{90}\right)$$

**9) Differentiate** $\sqrt{\cos ec^{-1}x}$ **w.r.t 'x'.**

**Soln: -** Let $y = \sqrt{\cos ec^{-1}x}$

$$\frac{dy}{dx} = \frac{1}{2\sqrt{\operatorname{cosec}^{-1}x}}.\frac{d}{dx}(\operatorname{cosec}^{-1}x)$$

$$= \frac{1}{2\sqrt{\operatorname{cosec}^{-1}x}}.\frac{-1}{x\sqrt{x^2-1}}$$

$$= \frac{-1}{2x\sqrt{x^2-1}\sqrt{\operatorname{cosec}^{-1}x}}$$

**10) Differentiate** $10^x$ **w.r.t 'x'.**

**Soln: -** Let $y = 10^x$

**Taking logarithms on both sides**

$$\log_e y = \log_e(10^x) = x\log_e 10$$

**(Contd.....)**

ಮುದೇನೂರಿನಲ್ಲಿ ನಡೆದ ಪ್ರಕರಣ: ಯುವತಿಯ ಸಂಬಂಧಿಗಳಿಂದ ಕೃತ್ಯ ● ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ

# ವ್ಯಕ್ತಿಯನ್ನು ಅರೆಬೆತ್ತಲೆಗೊಳಿಸಿ ಥಳಿತ

ಪ್ರಜಾವಾಣಿ ವಾರ್ತೆ

**ಹಾವೇರಿ:** ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿಯ ಪ್ರಕರಣ ಮಾಸುವ ಮುನ್ನವೇ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಮುದೇನೂರಿನಲ್ಲಿ ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನ ಮಾವನನ್ನು ಅರೆಬೆತ್ತಲೆಗೊಳಿಸಿ, ಥಳಿಸಿದ್ದಾರೆ ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಮುದೇನೂರಿನಲ್ಲಿ ಪ್ರೇಮಿಗಳಿಬ್ಬರು ಮನೆಬಿಟ್ಟು ಹೋದ ಕಾರಣ, ಯುವತಿಯ ಮನೆಯವರು ಯುವಕನ ಮಾವ, ಮುದೇನೂರು ಗ್ರಾಮ ಪಂಚಾಯಿತಿ ಸದಸ್ಯ ಪ್ರಶಾಂತ ಕಬ್ಬಾರ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಥಳಿಸಿದ್ದಾರೆ ಎಂದು ಹಲಗೇರಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

'ಮುದೇನೂರಿನ ಯುವಕ ಮತ್ತು ಚಳಗೇರಿಯ ಯುವತಿ ಪರಸ್ಪರ ಪ್ರೀತಿಸುತ್ತಿದ್ದರು. ಇದಕ್ಕೆ ಮನೆಯವರ ವಿರೋಧವಿತ್ತು. ಅದಕ್ಕೆ ಐದು ದಿನಗಳ ಹಿಂದೆ ಪ್ರೇಮಿಗಳು ಮನೆಬಿಟ್ಟು ಹೋಗಿದ್ದರು. ಇದರಿಂದ ಸಿಟ್ಟಿಗೆದ್ದ ಯುವತಿ ಕಡೆಯ 12 ಮಂದಿ ಸೋಮವಾರ ರಾತ್ರಿ ಬೈಕ್ ಮತ್ತು ಕಾರಿನಲ್ಲಿ ಬಂದು, ಯುವಕನ ಮನೆಗೆ ನುಗ್ಗಿ ಗಲಾಟೆ ಮಾಡಿದ್ದಾರೆ. ಪ್ರಶಾಂತ ಕಬ್ಬಾರ ಅವರನ್ನು ಥಳಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಸಂದರ್ಭದಲ್ಲಿ ಬಿಡಿಸಲು ಹೋದ ಹೆಣ್ಣುಮಕ್ಕಳನ್ನು ಎಳೆದಾಡಿ, ಹಣ ಮತ್ತು ಚಿನ್ನಾಭರಣ ಕಿತ್ತುಕೊಳ್ಳಲಾಗಿದೆ. ನಂತರ ರಾಣೆಬೆನ್ನೂರಿನ ದನದ ಮಾರುಕಟ್ಟೆಗೆ ಪ್ರಶಾಂತ ಅವರನ್ನು ಕರೆದೊಯ್ದು, ಕೊಲೆ ಮಾಡಲು ಯತ್ನಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಯುವತಿಗೆ ಮತ್ತೊಬ್ಬ ಯುವಕನ ಜೊತೆ 20 ದಿನಗಳ ಹಿಂದೆ ನಿಶ್ಚಿತಾರ್ಥ ಆಗಿತ್ತು. ಆದರೆ, ಇದು ಯುವತಿಗೆ ಇಷ್ಟವಿರಲಿಲ್ಲ ಎಂದು ತಿಳಿದು ಬಂದಿದೆ.

## ನಾಲ್ವರ ಬಂಧನ: ಪ್ರೇಮಿಗಳಿಗೆ ರಕ್ಷಣೆ

'ಹಾವೇರಿಯ ದೇವಸ್ಥಾನದಲ್ಲಿ ಸೋಮವಾರ ಪ್ರೇಮಿಗಳು ಮದುವೆಯಾಗಿದ್ದು, ರಕ್ಷಣೆ ಕೋರಿದ್ದಾರೆ. ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ತಿಳಿಸಿದರು.

'ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮದಲ್ಲಿ ಈಚೆಗೆ ಸಭೆ ನಡೆದು, ಯುವತಿಯನ್ನು ಮನೆಗೆ ಕಳುಹಿಸುವಂತೆ ಯುವತಿಯ ಮನೆಯವರು ಕೋರಿದ್ದರು. ಆದರೆ, ಯುವತಿ ಮನೆಗೆ ಬಾರದ ಕಾರಣ ಮುದೇನೂರು ಗ್ರಾಮದಲ್ಲಿ ಗಲಾಟೆ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಇದು ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಮಾದರಿಯ ಪ್ರಕರಣವಲ್ಲ' ಎಂದರು.

## ಬಿಜೆಪಿಯಿಂದ ರಾಜಕಾರಣ: ಸತೀಶ ಜಾರಕಿಹೊಳಿ

**ಬೆಳಗಾವಿ:** 'ಹೊಸ ವಂಟಮೂರಿ ಪ್ರಕರಣದಲ್ಲಿ ರಾಜ್ಯ ಸರ್ಕಾರ ತನ್ನ ಕೆಲಸ ಮಾಡುತ್ತಿದ್ದರೂ ಬಿಜೆಪಿಯೇ ಈ ವಿಷಯ ರಾಜಕೀಯಗೊಳಿಸುತ್ತಿದೆ. ಮಣಿಪುರ ಮತ್ತು ಉತ್ತರಪ್ರದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿ ಬದಲು ಇಲ್ಲಿ ಬಿಜೆಪಿಯವರು ಸತ್ಯಶೋಧನಾ ತಂಡ ಕಳುಹಿಸಿದ್ದಾರೆ. ಜವಾಬ್ದಾರಿ ಹೊರುವ ಬದಲು ನಮ್ಮತ್ತ ಬೊಟ್ಟು ಮಾಡುತ್ತಿದ್ದಾರೆ' ಎಂದು ಸಚಿವ ಸತೀಶ ಜಾರಕಿಹೊಳಿ ದೂರಿದರು.

'ಈ ಪ್ರಕರಣ ಸಂಬಂಧ ಪೊಲೀಸರು 11 ಆರೋಪಿಗಳನ್ನು ಬಂಧಿಸಿದ್ದು, ಇನ್ನಿಬ್ಬರು ಅಪ್ರಾಪ್ತ ವಯಸ್ಸಿನವರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ. ತನಿಖೆಯಲ್ಲಿ ಯಾವ ಅನುಮಾನ ಬಾರದಿರಲಿ ಎಂದು ಸರ್ಕಾರವು ಈ ಪ್ರಕರಣ ಸಿಐಡಿಗೆ ಹಸ್ತಾಂತರಿಸಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಹೊಸ ವಂಟಮೂರಿಯಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬಂದಿದೆ. ಕ್ಯಾಬಿನೆಟ್ ದರ್ಜೆಯ ಇಬ್ಬರು ಸಚಿವರು ಭೇಟಿ ಕೊಟ್ಟಿದ್ದಾರೆ. ಆದರೆ, ಬೆಳಗಾವಿಯಲ್ಲಿದ್ದರೂ ಬಿಜೆಪಿಯ ನಾಯಕರು ಆ ಗ್ರಾಮಕ್ಕೆ ಹೋಗಿಲ್ಲ' ಎಂದರು.

**ಮಾಹಿತಿ ಸಂಗ್ರಹಣೆ:** ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಡಿಐಜಿ ಸುನೀಲಕುಮಾರ್ ಮೀನಾ ನೇತೃತ್ವದ ತಂಡವು ತಾಲ್ಲೂಕಿನ ಕಾಕತಿ ಪೊಲೀಸ್ ಠಾಣೆಗೆ ಮಂಗಳವಾರ ಭೇಟಿ ನೀಡಿತು.

**ಮುಂದುವರಿದ ತನಿಖೆ:** ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತಂಡ ಆಸ್ಪತ್ರೆಗೆ ವಿಡಿಯೊಗ್ರಾಫರ್ ಕರೆಯಿಸಿ, ಸಂತ್ರಸ್ತೆ ಹೇಳಿಕೆ ವಿಡಿಯೊ ಮಾಡಿಕೊಳ್ಳಲು ಮುಂದಾದರು. ಆದರೆ, ಇದಕ್ಕೆ ಅವಕಾಶ ಸಿಗಲಿಲ್ಲ.

### ಸಂತ್ರಸ್ತೆ ಕುಟುಂಬಕ್ಕೆ 2 ಎಕರೆ ಜಮೀನು

ಹೊಸ ವಂಟಮೂರಿ ಪ್ರಕರಣದ ಸಂತ್ರಸ್ತೆ ಕುಟುಂಬಕ್ಕೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಭೂಒಡೆತನ ಯೋಜನೆಯಡಿ ಮಂಜೂರಾದ 2.03 ಎಕರೆ ಜಮೀನಿನ ಮಂಜೂರಾತಿ ಆದೇಶ ಪ್ರತಿಯನ್ನು ಸಚಿವ ಸತೀಶ ಜಾರಕಿಹೊಳಿ ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಸ್ತಾಂತರಿಸಿದರು. ಜತೆಗೆ, ₹5 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

## ಪೆರೋಲ್‌ನಲ್ಲಿ ಬಂದು ಡಕಾಯಿತಿ ನಡೆಸಿ ಮತ್ತೆ ಜೈಲಿಗೆ ವಾಪಸ್!

ಪ್ರಜಾವಾಣಿ ವಾರ್ತೆ



**ಮಡಿಕೇರಿ:** ಕೇರಳದ ತ್ರಿಶೂರ್ ಜೈಲಿನಲ್ಲಿ ಬಂಧಿಯಾಗಿದ್ದ ದಿನೇಶ್ ಎಂಬ ಆರೋಪಿಯು ಪೆರೋಲ್‌ನಲ್ಲಿ ಬಂದು ಕೊಡಗು ಜಿಲ್ಲೆಯಲ್ಲಿ ಡಕಾಯಿತಿ ನಡೆಸಿ, ಬಳಿಕ ಜೈಲಿಗೆ ವಾಪಸಾಗಿದ್ದಾನೆ.

'ಡಿ. 9ರಂದು ಇಲ್ಲಿನ ಗೋಣಿಕೊಪ್ಪಲು ಸಮೀಪ ಕೇರಳದ ಶಂಜಾದ್ ಎಂಬುವವರನ್ನು ಸಿನಿಮೀಯ ಶೈಲಿಯಲ್ಲಿ ತಡೆದ 10ರಿಂದ 15 ಮಂದಿ ತಂಡವು ₹ 50 ಲಕ್ಷ ಡಕಾಯಿತಿ ನಡೆಸಿದ ಪ್ರಕರಣದಲ್ಲಿ ದಿನೇಶ್ ಭಾಗಿಯಾಗಿದ್ದಾನೆ. ಆತನನ್ನು ತ್ರಿಶೂರ್ ಜೈಲಿನಿಂದ ವಶಕ್ಕೆ ಪಡೆಯುವ ಪ್ರಯತ್ನ ನಡೆದಿದೆ' ಎಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

'ಸದ್ಯ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನೂ 10 ಮಂದಿಯನ್ನು ಬಂಧಿಸಬೇಕಿದೆ. ಸದ್ಯ ₹ 3 ಲಕ್ಷವನ್ನು ವಶಪಡಿಸಿಕೊಳ್ಳಲಾಗಿದೆ' ಎಂದರು. 'ಕೇರಳದ ಶಂಜಾದ್ ಅವರು 750 ಗ್ರಾಂ ಚಿನ್ನಾಭರಣವನ್ನು ಮೈಸೂರಿನಲ್ಲಿ ಮಾರಾಟ ಮಾಡಿ ₹ 50 ಲಕ್ಷ ತರುತ್ತಿದ್ದಾಗ ಡಕಾಯಿತಿ ಮಾಡಲಾಗಿತ್ತು ಎಂದು ದೂರು ನೀಡಿದ್ದರು. ಆದರೆ, ಆಭರಣ ಖರೀದಿಸಿದ ವ್ಯಾಪಾರಿಯನ್ನು ವಿಚಾರಣೆ ಮಾಡಿದಾಗ, 930 ಗ್ರಾಂ ಚಿನ್ನ ಖರೀದಿಸಿ ₹ 61 ಲಕ್ಷ ನೀಡಿದ್ದಾಗಿ ತಿಳಿಸಿದರು. ಆ ವ್ಯವಹಾರಕ್ಕೆ ಯಾವುದೇ ತೆರಿಗೆ ಪಾವತಿಯಾಗಿರಲಿಲ್ಲ. ಹೀಗಾಗಿ, ಮಾರಾಟ ಮಾಡಿದ್ದ ಚಿನ್ನವನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ನೀಡಲಾಗಿದೆ. ತೆರಿಗೆ ವಂಚನೆಯ ಪ್ರಕರಣದ ಮಾಹಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ನೀಡಲಾಗಿದೆ' ಎಂದರು.

## ಹಸು ಕಳ್ಳರ ಬೆನ್ನಟ್ಟಿದ ರೈತರು

**ಚಳ್ಳಕೆರೆ:** ತಡ ರಾತ್ರಿಯಲ್ಲಿ ಹಸು ಕದ್ದೊಯ್ಯುತ್ತಿದ್ದ ವಾಹನವನ್ನು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿದ ರೈತರು, ಹಸುವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.



ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ನಂದಾಪುರದಲ್ಲಿ ಶನಿವಾರ ರಾತ್ರಿ ಈ ಪ್ರಸಂಗ ನಡೆದಿದೆ. ಗ್ರಾಮದ ಜನ ರಾತ್ರಿ ಮಲಗುವುದನ್ನೇ ಕಾಯುತ್ತಿದ್ದ ಕಳ್ಳರ ತಂಡ, ತಡರಾತ್ರಿ ಕಳವಿಗೆ ಮುಂದಾಗಿದೆ. ರೈತ ನಾಗರಾಜ ಅವರು ಮನೆಯ ಮುಂದೆ ಕಟ್ಟಿಹಾಕಿದ್ದ ಹಸುವನ್ನು ತಾವು ತಂದಿದ್ದ ಗೂಡ್ಸ್ ವಾಹನಕ್ಕೆ ಹತ್ತಿಸಿಕೊಂಡಿದೆ. ಅಪರಿಚಿತರನ್ನು ಕಂಡು ಹಸು ಅರಚಿದೆ.

ಹಸುವಿನ ಅರಚಾಟ ಕೇಳಿದ ಮನೆಯವರು, ಹೊರ ಬರುವಷ್ಟರಲ್ಲಿ ವಾಹನ ಅಲ್ಲಿಂದ ಹೊರಟಿದೆ. ಹಸು ಕದ್ದೊಯ್ಯುತ್ತಿರುವ ವಿಷಯ ತಿಳಿಯುತ್ತಿದ್ದಂತೆಯೇ, ನಾಗರಾಜ, ಅವರ ಪುತ್ರ ಮಂಜುನಾಥ್ ಹಾಗೂ ಅಳಿಯ ಲೋಕೇಶ್ ಹಾಗೂ ಗ್ರಾಮದ ಇತರರು ಬೈಕ್ ಹಾಗೂ ಕಾರಿನಲ್ಲಿ ವಾಹನ ಬೆನ್ನಟ್ಟಿದ್ದಾರೆ.

ಶ್ರೀರಂಗಪಟ್ಟಣ-ಬೀದರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಏಳೆಂಟು ಕಿ.ಮೀ. ವರೆಗೆ ಹಸು ಕಳ್ಳರ ವಾಹನವನ್ನು ಬೆನ್ನಟ್ಟಿದ್ದಾರೆ. ಇದನ್ನು ಗಮನಿಸಿದ ಕಳ್ಳರು, ವಾಹನವನ್ನು ತಾಲ್ಲೂಕಿನ ಗೋಪನಹಳ್ಳಿ ಕಡೆಗೆ ತಿರುಗಿಸಿದ್ದಾರೆ. ಹಸುವಿನ ಮಾಲೀಕರ ಕುಟುಂಬದ ಸದಸ್ಯರು ಕಳ್ಳರ ವಾಹನ ಬೆನ್ನಟ್ಟಿ ಹೋಗುತ್ತಿರುವುದನ್ನು ಸ್ಥಳೀಯ ಡಾಬಾದಲ್ಲಿದ್ದ ಕೆಲವರು ನೋಡಿದ್ದಾರೆ. ಬಳಿಕ ಅವರೂ ಕಳ್ಳರನ್ನು ಹಿಡಿಯಲು ಮುಂದಾಗಿ ಗೋಪನಹಳ್ಳಿ ಬಳಿ ವಾಹನ ಅಡ್ಡಗಟ್ಟಿದ್ದಾರೆ. ಸಿಕ್ಕಿಬೀಳುವ ಭಯದಲ್ಲಿ ಕಳ್ಳರು ಬಿಎಸ್‌ಎನ್‌ಎಲ್ ಕಚೇರಿ ಬಳಿ ವಾಹನ ಬಿಟ್ಟು ಪರಾರಿಯಾಗಿದ್ದಾರೆ.

## ಮತ್ತಿನಲ್ಲಿ ಪತ್ನಿ ಕಣ್ಣು ಕಚ್ಚಿದ ಪತಿ

**ಬೆಳ್ತಂಗಡಿ (ದಕ್ಷಿಣ ಕನ್ನಡ):** ತಾಲ್ಲೂಕಿನ ಶಿಶಿಲದಲ್ಲಿ ಅಮಲು ಪದಾರ್ಥ ಸೇವಿಸಿದ್ದ ಮತ್ತಿನಲ್ಲಿದ್ದ ವ್ಯಕ್ತಿಯು ಸೋಮವಾರ ರಾತ್ರಿ ಪತ್ನಿಯ ಕಣ್ಣಿಗೆ ಮತ್ತು ಮುಖಕ್ಕೆ ಕಚ್ಚಿ ಮಾಂಸ ಹೊರತೆಗೆದಿದ್ದಲ್ಲದೇ, ಹೆಲ್ಮೆಟ್‌ನಿಂದಲೂ ಹಲ್ಲೆ ನಡೆಸಿದ್ದು, ಆಕೆಯ ಎಡಗಣ್ಣು ಸಂಪೂರ್ಣ ಹಾನಿಗೊಂಡಿದೆ.

ತಡೆಯಲು ಬಂದ ಮಗಳ ಮೇಲೂ ಆರೋಪಿ ಹಲ್ಲೆ ನಡೆಸಿದ್ದಾನೆ. ಈ ಬಗ್ಗೆ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಾಲ್ಲೂಕಿನ ಶಿಶಿಲ ಗ್ರಾಮದ ಕೋಟೆಬಾಗಿಲು ನಿವಾಸಿ ಸುರೇಶ್ ಗೌಡ (55) ಹಲ್ಲೆ ನಡೆಸಿದ ಆರೋಪಿ. ಆತನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಹಲ್ಲೆಗೊಳಗಾದ ಮೋಹಿನಿ (55 ವರ್ಷ) ಹಾಗೂ ಮಗಳು ಪೂಜಾ (19) ಉಜಿರೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. 'ಕೃತ್ಯವೆಸಗಿದ ಬಳಿಕ ಆರೋಪಿಯು ತೋಟದಲ್ಲಿ ಅಡಗಿ ಕುಳಿತಿದ್ದ. ಧರ್ಮಸ್ಥಳ ಠಾಣೆಯ ಎಸ್‌ಐಗಳಾದ ಅನಿಲ್ ಕುಮಾರ್ ಮತ್ತು ಸಮರ್ಥ ಗಾಣಿಗೇರ ನೇತೃತ್ವದ ತಂಡ ಆರೋಪಿಯನ್ನು ಬಂಧಿಸಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಎಇಇ, ಜೆಇ ಲೋಕಾಯುಕ್ತ ಬಲೆಗೆ



ಮಂಜುನಾಥ



ಪ್ರಕಾಶ\

**ಹಾವೇರಿ:** ಕಾಮಗಾರಿಗಳ ಬಿಲ್‌ಗಳ ಮಂಜೂರಾತಿಗೆ ₹1 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಶಿಗ್ಗಾವಿ ಏತ ನೀರಾವರಿ ಉಪವಿಭಾಗ (1 ಮತ್ತು 2) ಧಾರವಾಡ ಕಚೇರಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಂಜುನಾಥ. ಬಿ ಮತ್ತು ಕಿರಿಯ ಎಂಜಿನಿಯರ್ ಪ್ರಕಾಶ ಹೊಸಮನಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಇಬ್ಬರೂ ಒಟ್ಟು ₹ 1.83 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

'ಉತ್ತರ ಕನ್ನಡ ಜಿಲ್ಲೆ ಎಳ್ಳಿಮಕ್ಕಿ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಬಾಲಕೃಷ್ಣ ಪುಂಡಲೀಕ ಅವರು ಹಾವೇರಿ ಜಿಲ್ಲೆಯ ಹೊಟ್ಟೂರು– ಬಿಸನಳ್ಳಿ, ಶಡಗರವಳ್ಳಿ– ಸಿದ್ಧರಾಮೇಶ್ವರ ಗುಡ್ಡ ಮತ್ತು ತೋರೂರು– ಹನಕನಹಳ್ಳಿ ರಸ್ತೆ ಕಾಮಗಾರಿ ನಿರ್ವಹಿಸಿದ್ದರು. ಇದರ ಬಿಲ್‌ಗಳನ್ನು ಮೇಲಧಿಕಾರಿಗಳಿಗೆ ಕಳುಹಿಸಲು ಆರಂಭದಲ್ಲಿ ಫೋನ್ ಪೇ ಮೂಲಕ ₹83 ಸಾವಿರ ಪಡೆದಿದ್ದರು. ನಂತರ ಎರಡನೇ ಮತ್ತು ಫೈನಲ್ ಬಿಲ್ ಮಂಜೂರಾತಿಗೆ ₹1 ಲಕ್ಷ ಬೇಡಿಕೆ ಇಟ್ಟಿದ್ದರು' ಎಂದು ಲೋಕಾಯುಕ್ತ ಡಿವೈಎಸ್ಪಿ ಚಂದ್ರಶೇಖರ ತಿಳಿಸಿದ್ದಾರೆ.

## 'ಬಸವ ಪರಂಪರೆ ಒಪ್ಪಿಕೊಳ್ಳುವವರು ವೈದಿಕ ಪರಂಪರೆಯಿಂದ ದೂರವಿರಿ'

ಪ್ರಜಾವಾಣಿ ವಾರ್ತೆ



ಶಿವಾಚಾರ್ಯ ಸ್ವಾಮೀಜಿ

**ದಾವಣಗೆರೆ:** 'ಬಸವ ಪರಂಪರೆಯನ್ನು ಒಪ್ಪಿಕೊಳ್ಳುವವರು ವೈದಿಕ ಪರಂಪರೆಯಿಂದ ದೂರವಿರಬೇಕು. ಎರಡೂ ಬೇಕೆನ್ನುವುದನ್ನು ಶರಣ ತತ್ವ ಒಪ್ಪುವುದಿಲ್ಲ' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ದಾವಣಗೆರೆ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ ಹಾಗೂ ಶರಣ ಚಿಂತನ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು.

'ಕೆಲ ವಚನಗಳಲ್ಲಿ ಅಡಕವಾಗಿರುವ ಸತ್ಯವನ್ನು ಬಿಡಿಸಿ ಹೇಳಿದರೆ ಬಹಳಷ್ಟು ಮಂದಿಯ ಕಣ್ಣು ಕೆಂಪಾಗುತ್ತದೆ. ಕಲ್ಲು ದೇವರು ದೇವರೇ ಅಲ್ಲ ಎಂಬುದು ಬಸವಣ್ಣನವರ ವಚನದ ಸಾರ. ಆದರೆ, ಬಹುಪಾಲು ಮಂದಿ ಕಲ್ಲು, ಮಣ್ಣು, ಮರದ ದೇವರನ್ನು ಪೂಜಿಸುತ್ತಾರೆ. ಶರಣ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವವರು ಇಷ್ಟಲಿಂಗ ಪೂಜೆ ಮಾಡುವ ಭಾವನೆ ಬೆಳೆಸಿಕೊಳ್ಳಬೇಕು' ಎಂದರು.

'ಲಿಂಗಾಯತ ಒಂದು ಜಾತಿ ಅಲ್ಲ, ಅದೊಂದು ತತ್ವ, ಸಿದ್ಧಾಂತ. ಯಾರು ಆ ತತ್ವಕ್ಕೆ ಅನುಗುಣವಾಗಿ ಅಂಗದ ಮೇಲೆ ಲಿಂಗ ಧರಿಸಿ ಪೂಜೆ ಮಾಡುತ್ತಾರೋ ಅವರು ಮಾತ್ರ ಲಿಂಗಾಯತರು. ಹುಟ್ಟಿನಿಂದ ಲಿಂಗಾಯತತನ ಬರುವುದಿಲ್ಲ. ಅದು ಸಾಧನೆ ಹಾಗೂ ಅರಿವಿನ ಮೂಲಕ ಬರುತ್ತದೆ. ಹಾಗಾಗಿ ಆ ಅರಿವನ್ನು ಮೈಗೂಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ನಾನು ಗುಡಿ ಗೋಪುರಗಳಿಗೆ ಹೋಗುವುದು ಶಿಲ್ಪದ ಸೌಂದರ್ಯ ನೋಡುವುದಕ್ಕೆ. ದೇವರಿದ್ದಾನೆ ಎಂಬ ನಂಬಿಕೆಯಿಂದಲ್ಲ. ದೇವಸ್ಥಾನಗಳ ಶಂಕುಸ್ಥಾಪನೆ, ಭೂಮಿ ಪೂಜೆ, ಕಳಶಾರೋಹಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ. ಇದನ್ನು ಟೀಕಿಸುವವರು ಬಹಳಷ್ಟು ಮಂದಿ ಇದ್ದಾರೆ. ನಮಗೆ ಟೀಕೆ ಮುಖ್ಯವಲ್ಲ. ಬದ್ಧತೆ ಮುಖ್ಯ' ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.



## ಮುಗಿಲ ಮಂಜು!

ಈಗಿನ ಚಳಿಯ ವಾತಾವರಣಕ್ಕೆ ಬಹುತೇಕರು ನಡುಗುತ್ತಿದ್ದಾರೆ. ಆದರೆ, ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದ ಮೇಲೆ ಈ ತಂಪಾದ ವಾತಾವರಣದಲ್ಲಿ ಅನುಭವ ಹೇಗಿರುತ್ತದೆ ಎಂಬುದನ್ನು ಕಂಡು ಆನಂದಿಸುವುದಕ್ಕಾಗಿಯೇ ನೂರಾರು ಜನ ಸೇರುತ್ತಿದ್ದಾರೆ. ಇಬ್ಬನಿಯಲ್ಲಿಯೇ ಕುಳಿತು ಪರಿಸರ ಸೌಂದರ್ಯವನ್ನು ಆಸ್ವಾದಿಸುತ್ತಿದ್ದ ಪ್ರವಾಸಿಗರು ಕ್ಯಾಮೆರಾ ಕಣ್ಣಿಗೆ ಕಂಡದ್ದು ಹೀಗೆ –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

## ಪೋಕ್ಸೊ ಪ್ರಕರಣ: ಮುಖ್ಯ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ



ನಾಗಣ್ಣ

**ಎಚ್.ಡಿ. ಕೋಟೆ:** ವಿದ್ಯಾರ್ಥಿಗಳನ್ನು ಶಾಲಾ ಪ್ರವಾಸಕ್ಕೆ ಕರೆದೊಯ್ದ ಸಂದರ್ಭದಲ್ಲಿ ಹೆಣ್ಣು ಮಕ್ಕಳೊಂದಿಗೆ ಅನುಚಿತ ವರ್ತನೆ ತೋರಿದ ಆರೋಪದಡಿ, ತಾಲ್ಲೂಕಿನ ಬೀಚನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಆದೇಶಿಸಿದ್ದಾರೆ.

ಅನುಚಿತ ವರ್ತನೆ ಹಿನ್ನೆಲೆಯಲ್ಲಿ ನಾಗಣ್ಣ ವಿರುದ್ಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಅವರ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ.

# ಮಕ್ಕಳನ್ನು ಕರೆದೊಯ್ಯುತ್ತಿರುವ ಪೋಷಕರು

ಯಲುವಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಘಟನೆ ನಂತರ ಆತಂಕ: ವಿದ್ಯಾರ್ಥಿಗಳಿಂದ ರಜೆ ಅರ್ಜಿ

● ಕೆ.ಓಂಕಾರ ಮೂರ್ತಿ

**ಕೋಲಾರ:** ಮಾಲೂರು ತಾಲ್ಲೂಕಿನ ಯಲುವಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಲದ ಗುಂಡಿ ಸ್ವಚ್ಛಗೊಳಿಸಲು ವಿದ್ಯಾರ್ಥಿಗಳನ್ನು ಇಳಿಸಿದ ಘಟನೆಯ ನಂತರ ಆತಂಕಗೊಂಡಿರುವ ಕೆಲವು ಪೋಷಕರು ಮೂರು ದಿನಗಳಿಂದ ಮಕ್ಕಳನ್ನು ಮನೆಗೆ ಕರೆದೊಯ್ಯುತ್ತಿದ್ದಾರೆ.

ಘಟನೆ ಹೊರಬಂದ ಭಾನುವಾರದಿಂದ ಇಲ್ಲಿಯವರೆಗೆ ಸುಮಾರು 84 ವಿದ್ಯಾರ್ಥಿಗಳು ರಜೆ ಹಾಕಿ ಪೋಷಕರೊಂದಿಗೆ ಊರಿಗೆ ತೆರಳಿದ್ದಾರೆ. ಉಳಿದ ಮಕ್ಕಳು ಎಂದಿನಂತೆ ಪಾಠ, ಆಟದಲ್ಲಿ ನಿರತರಾಗಿದ್ದಾರೆ.

'ಪ್ರಜಾವಾಣಿ' ಪ್ರತಿನಿಧಿ ಮಂಗಳವಾರ ಶಾಲೆಗೆ ಭೇಟಿ ನೀಡಿದಾಗ ಪೋಷಕರು ಮಕ್ಕಳನ್ನು ತಮ್ಮೊಂದಿಗೆ ಮನೆಗೆ ಕರೆದೊಯುತ್ತಿದ್ದ ದೃಶ್ಯ ಕಂಡುಬಂತು. ಇನ್ನು ಕೆಲ ಪೋಷಕರು ಮಕ್ಕಳನ್ನು ಮಾತನಾಡಿಕೊಂಡು ಹೋಗಲು ಬಂದಿದ್ದರು.



ವಸತಿ ಶಾಲೆಯ ಮುಖ್ಯದ್ವಾರದ ಬಳಿ ಮಂಗಳವಾರ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತಿರುವ ಪೋಷಕರು

ಹೊಸದಾಗಿ ಪ್ರಭಾರ ಪ್ರಾಂಶುಪಾಲ ರಘು ಅವರಿಗೆ ಇನ್ನೂ ಕೆಲವು ಮಕ್ಕಳು ರಜೆ ಅರ್ಜಿ ನೀಡಿ ಊರಿಗೆ ಹೊರಡಲು ಅನುವಾಗುತ್ತಿದ್ದಾರೆ. ವಸತಿ ನಿಲಯದಲ್ಲಿ 6ರಿಂದ 10ನೇ ತರಗತಿ ವರೆಗೆ 243 ಮಕ್ಕಳು ಇದ್ದಾರೆ. ಅವರಲ್ಲಿ 152 ಬಾಲಕರು, 91 ಬಾಲಕಿಯರು ಸೇರಿದ್ದಾರೆ.

ಈ ನಡುವೆ ವಸತಿ ಶಾಲೆಗೆ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಡಿವೈಎಸ್ಪಿ, ಇನ್‌ಸ್ಪೆಕ್ಟರ್ ಆಗಾಗ್ಗೆ ಭೇಟಿ ನೀಡಿ ಮಕ್ಕಳಿಗೆ ವಿಶ್ವಾಸ ತುಂಬುವ ಕೆಲಸ ಮಾಡುತ್ತಿದ್ದಾರೆ. ವಸತಿ ಶಾಲೆಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್‌ಪಿ ಎಚ್.ಡಿ.ಆನಂದ್ ಸೋಮವಾರ ಭೇಟಿ ನೀಡಿ ಅಧಿಕಾರಿಗಳು ಹಾಗೂ ಮಕ್ಕಳಿಂದ ಮಾಹಿತಿ ಪಡೆದರು.

> **ಘಟನೆಗೆ ಮುನ್ನ ಮೆನು ಪ್ರಕಾರ ಊಟ ಕೊಡುತ್ತಿರಲಿಲ್ಲ. ಸಾಂಬಾರ್‌ನಲ್ಲಿ ತರಕಾರಿಯೇ ಇರುತ್ತಿರಲಿಲ್ಲ, ಕೆಲವೊಮ್ಮೆ ಮೊಟ್ಟೆ ಕೊಳೆತಿರುತಿತ್ತು ಎಂಬುದಾಗಿ ಮಕ್ಕಳು ಹೇಳಿಕೊಂಡರು**
> **ಚೌಡಪ್ಪ**
> ಅಧ್ಯಕ್ಷ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ

ಘಟನೆಯ ನಂತರ ವಸತಿ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು, ಅಡುಗೆಯವರು, ಅಟೆಂಡರ್, ಭದ್ರತಾ ಸಿಬ್ಬಂದಿ ಸೇರಿದಂತೆ ಎಲ್ಲರನ್ನೂ ಬದಲಾಯಿಸಲಾಗಿದೆ. ಸದ್ಯ ಪ್ರಭಾರ ಪ್ರಾಂಶುಪಾಲ ರಘು ಸೇರಿದಂತೆ ಎಂಟು ಬೋಧಕ ಸಿಬ್ಬಂದಿ ಹಾಗೂ ಏಳು ಬೋಧಕೇತರ ಸಿಬ್ಬಂದಿಯನ್ನು ಹೊಸದಾಗಿ ನಿಯೋಜಿಸಲಾಗಿದೆ.

**ಪೋಷಕರ ನೋವು:** 'ಘಟನೆ ಕೇಳಿ ಆತಂಕವಾಗಿದೆ. ಮಕ್ಕಳು ಮಾನಸಿಕವಾಗಿ ನೊಂದಿರುತ್ತಾರೆ. ಮನಸ್ಸು ಉಲ್ಲಸಿತಗೊಳ್ಳಲಿ ಎಂಬ ಕಾರಣದಿಂದ ಕರೆದೊಯುತ್ತಿದ್ದೇವೆ' ಎಂದು ಆರನೇ ತರಗತಿಯ ವಿದ್ಯಾರ್ಥಿನಿಯೊಬ್ಬರ ತಾಯಿ 'ಪ್ರಜಾವಾಣಿ'ಗೆ ತಿಳಿಸಿದರು.

'ದೇಗುಲ ನಿರ್ಮಾಣಕ್ಕೆ ₹500 ಕೇಳಿದಾಗ ತಡ ಮಾಡಿದ್ದಕ್ಕೆ ಶಿಕ್ಷಕರು ನನ್ನ ಮಗಳನ್ನು ಬೈಯ್ದಿದಿದ್ದಾರೆ. ಎಲ್ಲರ ಮುಂದೆ ನಿಂದಿಸಿದ್ದಾರೆ. ಹಣ ಕೊಡುವ ಯೋಗ್ಯತೆ ಇಲ್ಲವೇ ಎಂದು ಕೇಳಿದ್ದಾರೆ. ಅದೇ ಕಾರಣಕ್ಕೆ ಹೊಡೆದಿದ್ದು, ಕೈಯಲ್ಲಿ ಗುಳ್ಳೆ ಬಂದಿದೆ' ಎಂದು ಪೋಷಕರೊಬ್ಬರು ದೂರಿದರು.

'ಮಕ್ಕಳ ಭವಿಷ್ಯ ಒಳ್ಳೆಯದಾಗಲಿ ಎಂದು ಶಾಲೆಗೆ ಸೇರಿಸುತ್ತೇವೆ. ಇಂಥ ಘಟನೆ ನಡೆದಾಗ ಬೇಸರವಾಗುತ್ತದೆ' ಎಂದು ಮತ್ತೊಬ್ಬ ವಿದ್ಯಾರ್ಥಿನಿಯ ತಂದೆ ಹೇಳಿದರು.

'ಎರಡು ದಿನಗಳಷ್ಟೇ ರಜೆ ಹಾಕಿದ್ದೇನೆ. ಊರಿಗೆ ಹೋಗಿ ವಾಪಸ್ ಬರುತ್ತೇನೆ. ಘಟನೆಯಿಂದ ನಾನೇನು ಹೆದರಿಲ್ಲ' ಎಂದು ಜಿಲ್ಲೆಯ ಟೇಕಲ್ ಗ್ರಾಮದ ವಿದ್ಯಾರ್ಥಿನಿ ಹೇಳಿದಳು.

## 'ಜಿ.ಪಂ ಮೀಸಲು ನಿಗದಿ 3ಂಗಳಲ್ಲಿ ಪೂರ್ಣ'

ಒಂದನೇ ಪುಟದಿಂದ...

'ಕ್ಷೇತ್ರ ಪುನರ್ ವಿಂಗಡಣೆ ಅಧಿಸೂಚನೆ ಪ್ರಕಟಿಸಿದ ನಂತರದ ಏಳು ದಿನಗಳಲ್ಲಿ ಮೀಸಲಾತಿ ಕರಡು ಅಧಿಸೂಚನೆ ಹೊರಡಿಸಲಾಗುವುದು. ಮೀಸಲಾತಿ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು 10 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರದ ಎರಡು ವಾರಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಮೀಸಲು ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿವೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಚುನಾವಣಾ ಆಯೋಗ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಸರ್ಕಾರದ ಹೇಳಿಕೆಯ ಬಗ್ಗೆ ಸಂಶಯವಿದೆ' ಎಂದು ಆಕ್ಷೇಪಿಸಿದರು.

ಈ ಮಾತಿಗೆ ಮಧ್ಯ ಪ್ರವೇಶಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, 'ಅಡ್ವೊಕೇಟ್ ಜನರಲ್ ಒಬ್ಬ ಸಾಂವಿಧಾನಿಕ ಹುದ್ದೆಯ ಜವಾಬ್ದಾರಿ ಪ್ರತಿನಿಧಿ. ಅವರನ್ನು ನಂಬಬಾರದೇ? ಅವರ ಮೇಲೆ ಭರವಸೆ ಇಡಬೇಕಾಗುತ್ತದೆ. ಕ್ಷೇತ್ರ ಪುನರ್ ವಿಂಗಡಣೆ ಪೂರ್ಣಗೊಳಿಸುವ ಬಗೆಗಿನ ಹೇಳಿಕೆಯನ್ನು ಲಿಖಿತವಾಗಿ ಸಲ್ಲಿಸಬೇಕು. ಅಡ್ವೊಕೇಟ್ ಅವರ ಈ ಹೇಳಿಕೆಯನ್ನೇ ನ್ಯಾಯಪೀಠ ಮುಚ್ಚಳಿಕೆ ಎಂದು ಪರಿಗಣಿಸಲಿದೆ' ಎಂದು ತಿಳಿಸಿದರು. ಇದಕ್ಕೆ ಶಶಿಕಿರಣ ಶೆಟ್ಟಿ ಒಪ್ಪಿಗೆ ನೀಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಈ ಸಂಬಂಧ ಎಜಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಅವರು ನೀಡಿರುವ ಭರವಸೆ ಕಾರ್ಯಗತಗೊಳ್ಳದೇ ಹೋದರೆ ರಾಜ್ಯ ಚುನಾವಣಾ ಆಯೋಗವು ಅಗತ್ಯ ಕ್ರಮಕ್ಕಾಗಿ ಪುನಃ ನ್ಯಾಯಾಲಯದ ಮೆಟ್ಟಿಲೇರಬಹುದು' ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿತು.

## ಬರ ಪರಿಹಾರ: ಪ್ರಧಾನಿಗೆ ಮನವಿ

ಒಂದನೇ ಪುಟದಿಂದ...

'ಎನ್‌ಡಿಆರ್‌ಎಫ್ ಅಡಿ ₹17,901 ಕೋಟಿ ಪರಿಹಾರ ನೀಡುವಂತೆ ಅಕ್ಟೋಬರ್‌ನಲ್ಲಿ ಕೃಷಿ ಸಚಿವಾಲಯಕ್ಕೆ ಮನವಿ ಮಾಡಲಾಗಿತ್ತು. ನವೆಂಬರ್ 4 ರಂದು ಹೆಚ್ಚುವರಿಯಾಗಿ 7 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿತ್ತು. ಹೀಗಾಗಿ, ₹18,177 ಕೋಟಿ ಪರಿಹಾರ ನೀಡಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಿದ್ದರಾಮಯ್ಯ, 'ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಮಟ್ಟದ ಸಮಿತಿಯ ಸಭೆಯನ್ನು ತುರ್ತಾಗಿ ನಡೆಸುವಂತೆ ಮನವಿ ಮಾಡಿದ್ದೇವೆ. ನಮ್ಮ ಅಹವಾಲನ್ನು ಸಮಾಧಾನದಿಂದ ಕೇಳಿದ ಪ್ರಧಾನಿಯವರು ಈ ವಿಷಯವನ್ನು ಶಾ ಅವರಿಗೆ ಕೂಡಲೇ ತಿಳಿಸುವುದಾಗಿ ಭರವಸೆ ನೀಡಿದ್ದಾರೆ' ಎಂದರು.

'ಬರ ಪರಿಸ್ಥಿತಿಯಲ್ಲಿ ನರೇಗಾ ಯೋಜನೆಯಡಿ ಕೂಲಿ ದಿನಗಳನ್ನು 150 ದಿನಗಳಿಗೆ ಹೆಚ್ಚಿಸುವಂತೆ ಮನವಿ ಮಾಡಲಾಗಿದೆ' ಎಂದರು.

### 'ಭದ್ರಾ ಮೇಲ್ದಂಡೆ: ಹಣ ನೀಡದ ಕೇಂದ್ರ'

'ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ₹5,300 ಕೋಟಿ ಘೋಷಿಸಿದ್ದರು. ಈ ಘೋಷಣೆ ಆಧಾರದಲ್ಲಿ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ₹5,300 ಕೋಟಿ ನೀಡುವುದಾಗಿ ಪ್ರಕಟಿಸಿದ್ದರು. ಇವತ್ತಿನವರೆಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ಈ ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸುವಂತೆ ಒತ್ತಾಯಿಸಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

'ಮಹದಾಯಿ ಯೋಜನೆಗೆ ಗೆಜೆಟ್ ಅಧಿಸೂಚನೆ ಆಗಿದ್ದು, ಟೆಂಡರ್ ಕರೆಯಲಾಗಿದೆ. ಆದರೆ, ಈ ತನಕ ಪರಿಸರ ಅನುಮೋದನೆ ಸಿಕ್ಕಿಲ್ಲ. ಕೂಡಲೇ ಪರಿಸರ ಅನುಮೋದನೆ ಕೊಡಿಸುವಂತೆ ಮನವಿ ಮಾಡಿದ್ದೇವೆ' ಎಂದರು.

ಮೇಕೆದಾಟು ಯೋಜನೆಗೆ ಅನುಮೋದನೆ ನೀಡುವಂತೆ ಕೋರಿದ್ದೇವೆ. ಮಹದಾಯಿ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಗಳಿಗಾಗಿ ಸರ್ವ ಪಕ್ಷ ನಿಯೋಗದ ಜತೆ ಕೇಂದ್ರಕ್ಕೆ ಬರಲು ಸಿದ್ಧರಿದ್ದೇವೆ ಎಂದರು.

**'ಜಾತಿ ಗಣತಿಗೆ ಬದ್ಧ':** 'ದೇಶದಾದ್ಯಂತ ಜಾತಿ ಗಣತಿ ನಡೆಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನವಾಗಿದೆ. ಅದನ್ನು ಅನುಸರಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ' ಎಂದು ಸಿದ್ದರಾಮಯ್ಯ ಅವರು ಹೇಳಿದರು.

'ಈ ವಿಚಾರದಲ್ಲಿ ಯಾವುದೇ ಅಸ್ಪಷ್ಟತೆ ಇಲ್ಲ. ವರದಿಯನ್ನು ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನೀಡಬೇಕಿದೆ. ಊಹಾಪೋಹದ ಆಧಾರದಲ್ಲಿ ಕೆಲವು ಸಮುದಾಯದವರು ವಿರೋಧ ಮಾಡುತ್ತಿದ್ದಾರೆ' ಎಂದರು.

## ಶ್ರೀಲಂಕಾ ಮಾದರಿ ಆನೆ ಕಾರಿಡಾರ್‌ಗೆ ಚಿಂತನೆ

**ಹಾಸನ:** 'ಕಾಡಾನೆ ಹಾವಳಿ ನಿಯಂತ್ರಣಕ್ಕೆ ಶ್ರೀಲಂಕಾ ಮಾದರಿ ಆನೆ ಕಾರಿಡಾರ್ ನಿರ್ಮಾಣದ ಚರ್ಚೆ ಮುನ್ನೆಲೆಗೆ ಬಂದಿದ್ದು, ಸಾಧಕ– ಬಾಧಕಗಳನ್ನು ಪರಾಮರ್ಶಿಸಿ ಅನುಷ್ಠಾನಕ್ಕೆ ತರುವ ಬಗ್ಗೆ ಚಿಂತನೆ ನಡೆಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜಿಲ್ಲೆಯ ಮಲೆನಾಡು ಭಾಗವಾದ ಸಕಲೇಶಪುರ, ಆಲೂರು, ಬೇಲೂರು, ನೆರೆಯ ಚಿಕ್ಕಮಗಳೂರು, ಮೂಡಿಗೆರೆಯಲ್ಲಿಯೂ ಕಾಡಾನೆ ಸಮಸ್ಯೆ ಇರುವುದರಿಂದ ಹಾವಳಿ ನಿಯಂತ್ರಣಕ್ಕೆ ಚರ್ಚೆಗಳು ನಡೆಯುತ್ತಿವೆ' ಎಂದರು.

'ಶ್ರೀಲಂಕಾ ಮಾದರಿ ಆನೆ ಧಾಮ ನಿರ್ಮಿಸಿದರೆ, ಕಾಡಾನೆ ಹಾವಳಿ ತಡೆಯಬಹುದೆಂಬ ಮಾತು ಕೇಳಿ ಬಂದಿದೆ. ಅರ್ಜುನನ ಸಾವಿನ ನಂತರ ಅಧಿವೇಶನದಲ್ಲಿ ಈ ಬಗ್ಗೆ ಪ್ರಮುಖವಾಗಿ ಪ್ರಸ್ತಾಪವಾಗಿದೆ' ಎಂದರು.

# ವನ್ಯಜೀವಿ ಉತ್ಪನ್ನಗಳ ವಾಪಸಿಗೆ 3 ತಿಂಗಳ ಕಾಲಾವಕಾಶ ಪ್ರಸ್ತಾವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹುಲಿ ಉಗುರು, ಆನೆಗಳ ಪಾದ, ದಂತ ಸೇರಿದಂತೆ ಸಾರ್ವಜನಿಕರು ಅನಧಿಕೃತವಾಗಿ ಇರಿಸಿಕೊಂಡಿರುವ ವನ್ಯಜೀವಿ ಉತ್ಪನ್ನಗಳನ್ನು ಸರ್ಕಾರಕ್ಕೆ ಮರಳಿಸಲು ಮೂರು ತಿಂಗಳ ಕಾಲಾವಕಾಶ ನೀಡುವ ಪ್ರಸ್ತಾವವಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ವನ್ಯಜೀವಿ ಅಂಗಾಂಗವನ್ನು ಒಳಗೊಂಡ ವಸ್ತುಗಳು ಹಾಗೂ ಫಲಕಗಳನ್ನು ಮರಳಿಸಲು ಕೊನೆಯ ಅವಕಾಶ ನೀಡುವುದು ಮತ್ತು ಶರಾವತಿ ವಿದ್ಯುತ್ ಯೋಜನೆ ಸಂತ್ರಸ್ತರಿಗೆ ಜಮೀನು ಹಂಚಿಕೆ ಕುರಿತು ಮಂಗಳವಾರ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಸಾರ್ವಜನಿಕರ ಬಳಿ ಇರುವ ವನ್ಯಜೀವಿ ಅಂಗಾಂಗಗಳ ಉತ್ಪನ್ನಗಳನ್ನು ವಶಕ್ಕೆ ಪಡೆದುಕೊಂಡು ನಾಶಪಡಿಸುವ ಯೋಜನೆ ಇದೆ. ಅಂತಹ ಉತ್ಪನ್ನಗಳನ್ನು ಮರಳಿಸಲು ಕೊನೆಯ ಬಾರಿಗೆ ಮೂರು ತಿಂಗಳ ಕಾಲಾವಕಾಶ ನೀಡುವ ಪ್ರಸ್ತಾವವನ್ನು ಸಂಪುಟ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗುವುದು. ನಂತರ ಅರಣ್ಯ ಇಲಾಖೆಯಿಂದ ಆದೇಶ ಹೊರಡಿಸಲಾಗುವುದು' ಎಂದರು.

ಅರಣ್ಯ ಇಲಾಖೆಯು ವಿವಿಧ ಸಂದರ್ಭಗಳಲ್ಲಿ ವಶಪಡಿಸಿಕೊಂಡ ಆನೆ ದಂತ ಮತ್ತಿತರ ವನ್ಯಜೀವಿ ಉತ್ಪನ್ನಗಳನ್ನು ಮೈಸೂರಿನ ಸಂಗ್ರಹಾಗಾರದಲ್ಲಿ (ಡಿಪೊ) ದಾಸ್ತಾನು ಮಾಡಲಾಗಿದೆ. ಅವುಗಳನ್ನೂ ನಾಶಪಡಿಸಲು ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲೇ ಈ ಪ್ರಕ್ರಿಯೆ ನಡೆಸಲಾಗುವುದು ಎಂದು ತಿಳಿಸಿದರು.

**ಸಂತ್ರಸ್ತರ ಪರ ಸರ್ಕಾರ:** ಶರಾವತಿ ವಿದ್ಯುತ್ ಯೋಜನೆಯಿಂದ ನೆಲೆ ಕಳೆದುಕೊಂಡು ಸಂತ್ರಸ್ತರಾದವರಿಗೆ ಜಮೀನು ಹಂಚಿಕೆ ಮಾಡುವುದರ ಪರವಾದ ನಿಲುವನ್ನು ರಾಜ್ಯ ಸರ್ಕಾರ ಹೊಂದಿದೆ. ಜನರಿಗೆ ಜಮೀನು ಹಂಚಿಕೆ ಮಾಡಿರುವುದನ್ನು ಸಮರ್ಥಿಸಿಕೊಂಡು ಹೈಕೋರ್ಟ್‌ಗೆ ಪ್ರಮಾಣಪತ್ರವನ್ನೂ ಸಲ್ಲಿಸಲಾಗಿದೆ ಎಂದರು.

'ಈ ಕುರಿತ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಹೈಕೋರ್ಟ್‌ನಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದ ಮೇಲ್ಮನವಿಯೂ ಬಾಕಿ ಇದೆ. ಆದಷ್ಟು ಬೇಗ ಈ ಪ್ರಕರಣ ಇತ್ಯರ್ಥಪಡಿಸಲು ಕಾನೂನು ಹೋರಾಟ ಮುಂದುವರಿಸಲಾಗುವುದು' ಎಂದು ಹೇಳಿದರು.

## 'ವೈಜ್ಞಾನಿಕ ಗಣತಿಗೆ ನಮ್ಮ ಬೇಡಿಕೆ'

'ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಜಾತಿವಾರು ಜನಗಣತಿಯನ್ನು ವೀರಶೈವ- ಲಿಂಗಾಯತರು ವಿರೋಧಿಸಿಲ್ಲ. ವೈಜ್ಞಾನಿಕವಾದ ಗಣತಿ ನಡೆಯಬೇಕು ಎಂಬುದಷ್ಟೇ ನಮ್ಮ ಬೇಡಿಕೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು. 'ಹಿಂದೆ ಗಣತಿಯು ಸಮರ್ಪಕವಾಗಿ ನಡೆದಿಲ್ಲ. ಪ್ರತಿ ಮನೆಯನ್ನೂ ಒಳಗೊಂಡಂತೆ ಹೊಸದಾಗಿ ಗಣತಿ ನಡೆಸಬೇಕು. ವೀರಶೈವ- ಲಿಂಗಾಯತರ ಎಲ್ಲ ಉಪ ಪಂಗಡಗಳನ್ನೂ ಒಂದಾಗಿ ಪರಿಗಣಿಸಬೇಕು ಎಂದು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದೇವೆ' ಎಂದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರೊಂದಿಗೆ (ನಿಂತಿರುವವರು ಎಡದಿಂದ) ಸ್ಪರ್ಧೆಯ ವಿಜೇತರಾದ ದಾವಣಗೆರೆಯ ತರಳಬಾಳು ಜಗದ್ಗುರು ಪ್ರೌಢಶಾಲೆಯ ಮಾನಸಿ, ಸಿಂಚನಾ, ಧಾರವಾಡದ ಸರ್ಕಾರಿ ಆದರ್ಶ ವಿದ್ಯಾಲಯದ ಸಮರ್ಥ್, ಪ್ರೀತಮ್; ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ಭುವನ್, ನಂದಿನಿ, ಉಡುಪಿ ಜಿಲ್ಲೆಯ ಬ್ರಹ್ಮಾವರದ ಲಿಟ್ಲ್ ರಾಕ್ ಇಂಡಿಯನ್ ಶಾಲೆಯ ಲಿಖಿತ್, ಅನುರಾಗ್ ಹಾಗೂ ಬೆಂಗಳೂರಿನ ಜ್ಞಾನಾಕ್ಷಿ ವಿದ್ಯಾನಿಕೇತನ ಶಾಲೆಯ ಆರ್ಯನ್ ಸುಬ್ರಹ್ಮಣ್ಯ ಮತ್ತು ಅಕ್ಷಯ್ ರಾವ್

# ಪ್ರಜಾವಾಣಿ ಕ್ವಿಜ್: ವಿಜೇತರಿಗೆ ರಾಜ್ಯಪಾಲರಿಂದ ಅಭಿನಂದನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಇಲ್ಲಿನ ರಾಜಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಪ್ರಜಾವಾಣಿ' ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯ ವಿಜೇತರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿನಂದಿಸಿದರು.

ಈ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳು ಶಾಲಾ ಪಠ್ಯದ ಜತೆಗೆ ಕಲೆ, ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇಂತಹ ಚಟುವಟಿಕೆಗಳಿಂದ ದೈಹಿಕ ಮತ್ತು ಮಾನಸಿಕ ಸದೃಢತೆ ಬೆಳೆಯಲಿದೆ. ರಸಪ್ರಶ್ನೆ ಸ್ಪರ್ಧೆಗಳು ರಾಷ್ಟ್ರೀಯ ಏಕತೆ, ಕೋಮು ಸೌಹಾರ್ದತೆ, ಸಹೋದರತ್ವ, ಶೌರ್ಯ ಹಾಗೂ ಧೈರ್ಯಕ್ಕೆ ಸಹಕಾರಿಯಾಗಲಿದೆ' ಎಂದು ಕಿವಿಮಾತು ಹೇಳಿದರು.

'ರಸಪ್ರಶ್ನೆ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಜಾಗೃತಗೊಳಿಸುತ್ತವೆ. ದೇಶಭಕ್ತಿ, ನೈತಿಕ ಪ್ರಜ್ಞೆ ಬೆಳೆಸುವ ಜತೆಗೆ, ಸ್ವಾವಲಂಬಿಯಾಗಲು ಸಹಕಾರಿಯಾಗಿವೆ' ಎಂದು ತಿಳಿಸಿದರು.

'ಪ್ರಶಸ್ತಿ ಪಡೆದ ಎಲ್ಲ ವಿದ್ಯಾರ್ಥಿಗಳು ಇದೇ ರೀತಿ ಸಾಧನೆಯನ್ನು ಮುಂದುವರಿಸಬೇಕು. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಿ, ವಿಶ್ವ ಮಟ್ಟದಲ್ಲಿ ದೇಶದ ಕೀರ್ತಿಯನ್ನು ಹೆಚ್ಚಿಸಬೇಕು' ಎಂದು ಕರೆ ನೀಡಿದರು.

'ಜೀವನ ಕೌಶಲ, ವ್ಯಕ್ತಿತ್ವ ವಿಕಸನದ ಬಗ್ಗೆ ಮೌಲ್ಯಾಧಾರಿತ ಕಾರ್ಯಕ್ರಮಗಳು ಹಾಗೂ ನಾಯಕತ್ವ ತರಬೇತಿ ಕೋರ್ಸ್‌ಗಳನ್ನು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ನಡೆಸುತ್ತಿರುವುದು ಶ್ಲಾಘನೀಯ. ಈ ಮಹತ್ವದ ಕಾರ್ಯಕ್ರಮವು ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಸಾಮಾಜಿಕ ಪ್ರಗತಿಗೆ ವೇದಿಕೆ ಒದಗಿಸಿದೆ. ಇದಕ್ಕಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಬಳಗವನ್ನು ಅಭಿನಂದಿಸುತ್ತೇನೆ' ಎಂದು ಹೇಳಿದರು.

'ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯಲ್ಲಿ 800ಕ್ಕೂ ಹೆಚ್ಚು ಶಾಲೆಗಳ 1,500 ವಿದ್ಯಾರ್ಥಿಗಳು ಭಾಗವಹಿಸಿರುವುದು ಸಂತಸದ ಸಂಗತಿ. ವಿಜ್ಞಾನ, ಸಮಾಜ ವಿಜ್ಞಾನ, ಭೂಗೋಳ, ಇತಿಹಾಸ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳ ಬುದ್ಧಿವಂತಿಕೆ ಪರೀಕ್ಷಿಸಿದ ಉತ್ತಮ ಕಾರ್ಯಕ್ರಮ ಇದಾಗಿದೆ' ಎಂದು ಶ್ಲಾಘಿಸಿದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಹಾಗೂ 'ಪ್ರಜಾವಾಣಿ' ಡೆಪ್ಯುಟಿ ಎಡಿಟರ್ ಎಂ.ನಾಗರಾಜ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕುಕ್ಕೆ ಅನ್ನದಾನ: ತೆಲಂಗಾಣ ಸಚಿವರಿಂದ ₹ 1 ಕೋಟಿ

**ಸುಬ್ರಹ್ಮಣ್ಯ (ದಕ್ಷಿಣ ಕನ್ನಡ):** ತೆಲಂಗಾಣದ ಕಂದಾಯ ಸಚಿವ ಪೊಂಗುಲೇಟಿ ಶ್ರೀನಿವಾಸ್ ರೆಡ್ಡಿ ಅವರು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನಕ್ಕೆ ಮಂಗಳವಾರ ಭೇಟಿ ನೀಡಿ ಅನ್ನದಾನಕ್ಕಾಗಿ ₹ 1 ಕೋಟಿ ನೀಡಿ ಹರಕೆ ಸೇವೆ ಪೂರೈಸಿದರು.

'ಮಗಳ ಮದುವೆಗಾಗಿ ಮಾಡಿದ ಪ್ರಾರ್ಥನೆ ಫಲಿಸಿದ್ದರಿಂದ ಕುಟುಂಬದೊಂದಿಗೆ ಬಂದು ಅವರು ಸೇವೆ ಪೂರೈಸಿದರು' ಎಂದು ದೇವಸ್ಥಾನದವರು ತಿಳಿಸಿದರು. ಪ್ರಸಾದ್ ರೆಡ್ಡಿ, ಪ್ರೊ. ಗಣಪತಿ ಭಟ್, ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ್ ರಾಂ ಸುಳ್ಳಿ, ಕಾರ್ಯನಿರ್ವಹಣಾಧಿಕಾರಿ ನಿಂಗಯ್ಯ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಪಿಜಿಎಸ್‌ಎನ್ ಪ್ರಸಾದ್, ಪ್ರಸನ್ನ ದರ್ಬೆ, ಶ್ರೀವತ್ಸಾ, ಲೋಕೇಶ್ ಮುಂಡೊಕಜೆ, ಶೋಭಾ ಗಿರಿಧರ್, ವನಜಾ ಭಟ್ ಇದ್ದರು.

# ಆರ್ಕ್ಟಿಕ್: ರಾಮನ್ ಸಂಸ್ಥೆ ಅಧ್ಯಯನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಆರ್ಕ್ಟಿಕ್' ಪ್ರದೇಶದಲ್ಲಿ ಆರಂಭವಾಗಿರುವ ಚಳಿಗಾಲದ ಸಂಶೋಧನಾ ಅಭಿಯಾನದಲ್ಲಿ ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯ (ಆರ್‌ಆರ್‌ಐ) ವಿಜ್ಞಾನಿಗಳ ಮೊದಲ ತಂಡ ಭಾಗವಹಿಸಿದೆ. ವಿಶ್ವದ ಉಗಮದ ಕುರುಹುಗಳನ್ನು ಪತ್ತೆ ಮಾಡುವುದರಿಂದ ಹಿಡಿದು, ಆಧುನಿಕ ಕಾಲದ ಹವಾಮಾನ ಬದಲಾವಣೆ ಪರಿಣಾಮಗಳೂ ಸೇರಿ ಹಲವು ವಿಷಯಗಳ ಬಗ್ಗೆ ಈ ತಂಡ ಸಂಶೋಧನೆ ಕೈಗೊಳ್ಳಲಿದೆ.

ಭೂಮಿಯ ಉತ್ತರ ಧ್ರುವ ಪ್ರದೇಶ 'ಆರ್ಕ್ಟಿಕ್'ನಲ್ಲಿ ಭಾರತ ತನ್ನದೇ ಆದ ಸಂಶೋಧನಾ ಕೇಂದ್ರವನ್ನು ಹೊಂದಿದ್ದು, ಇದನ್ನು ಹಿಮಾದ್ರಿ ಎಂದು ಕರೆಯಲಾಗುತ್ತದೆ. 2008 ರಿಂದ ಇದು ಕಾರ್ಯ ನಿರ್ವಹಿಸುತ್ತಿದೆ.

ಈ ಬಾರಿ ಭಾರತೀಯ ತಂಡದ ನೇತೃತ್ವವನ್ನು ಆರ್‌ಆರ್‌ಐನ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಗ್ರೂಪ್ ವಿಭಾಗದ ಗಿರೀಶ್ ಬಿ.ಎಸ್ ವಹಿಸಿದ್ದಾರೆ. ಖಗೋಳವಿಜ್ಞಾನ, ಹವಾಮಾನ ಬದಲಾವಣೆ, ವಾತಾವರಣ ವಿಜ್ಞಾನ ಸೇರಿ ಹಲವು ವಿಷಯಗಳ ಬಗ್ಗೆ ಅಧ್ಯಯನ ನಡೆಸಲಿದ್ದಾರೆ.

ಭಾರತೀಯ ವಿಜ್ಞಾನಿಗಳು ಇದೇ ಮೊದಲ ಬಾರಿ ಆರ್ಕ್ಟಿಕ್‌ನ ಸ್ವಾಲ್ಬರ್ಡ್‌ನಲ್ಲಿ ರೇಡಿಯೊ ತರಂಗಾಂತರಗಳ ವಾತಾವರಣದ ಗುಣಲಕ್ಷಣಗಳನ್ನು ಅಧ್ಯಯನ ನಡೆಸಲಿದ್ದಾರೆ.

ಈ ಅಧ್ಯಯನದಿಂದ ಖಗೋಳ ವಿಜ್ಞಾನಿಗಳು ಖಗೋಳ ಮಾಪನ ಕಾರ್ಯವನ್ನು ಅತ್ಯಂತ ಕರಾರುವಾಕ್ಕಾಗಿ ನಡೆಸಲು ನೆರವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ರೇಡಿಯೊ ತರಂಗಾಂತರಗಳ ವಾತಾವರಣದ ಗುಣಲಕ್ಷಣ ಗಳನ್ನು ಅಧ್ಯಯನ ನಡೆಸುವುದರಿಂದ ಮುಂದಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಕಡಿಮೆ ತರಂಗಾಂತರದ ದೂರದರ್ಶಕವನ್ನು ಸ್ಥಾಪಿಸುವ ಸಾಧ್ಯತೆಯೂ ಇದೆ ಎಂದು ಆರ್‌ಆರ್‌ಐ ತಿಳಿಸಿದೆ.

ಮೊದಲ ತಂಡ ತನ್ನ ಕಾರ್ಯವನ್ನು ಮಂಗಳವಾರ ಆರಂಭಿಸಿದ್ದು, ಜನವರಿ 15 ರವರೆಗೆ ಕಾರ್ಯ ನಿರ್ವಹಿಸಲಿದೆ. ಈ ಕಾರ್ಯಕ್ಕೆ ಕೇಂದ್ರ ಭೂವಿಜ್ಞಾನಗಳ ಸಚಿವಾಲಯ ಅನುದಾನ ನೀಡಿದ್ದು, ಗೋವಾದಲ್ಲಿರುವ ರಾಷ್ಟ್ರೀಯ ಧ್ರುವ ಮತ್ತು ಸಾಗರ ಸಂಶೋಧನಾ ಕೇಂದ್ರ ನೋಡಲ್ ಏಜೆನ್ಸಿಯಾಗಿದೆ.

## ಹಲ್ಲೆ ಯತ್ನದ ಹಿಂದೆ ಸಚಿವರ ಕೈವಾಡ– ಬಿಜೆಪಿ ಆರೋಪ

**ಬೆಂಗಳೂರು:** ಮಾಜಿ ಸಚಿವ ಗೋವಿಂದ ಕಾರಜೋಳ ಮೇಲಿನ ಹಲ್ಲೆ ಪ್ರಯತ್ನದಲ್ಲಿ ಸಚಿವರಾದ ಎಚ್‌.ಸಿ.ಮಹದೇವಪ್ಪ ಮತ್ತು ಪ್ರಿಯಾಂಕ್ ಖರ್ಗೆ ಅವರ ಕೈವಾಡ ಇದೆ ಎಂದು ಬಿಜೆಪಿ ವಕ್ತಾರ ಹಾಗೂ ಮಾಜಿ ಶಾಸಕ ಪಿ.ರಾಜೀವ್ ಆರೋಪಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತರಿಗೆ ಮೀಸಲಿಟ್ಟ ಹಣವನ್ನು ಸರ್ಕಾರ ದುರ್ಬಳಕೆ ಮಾಡುತ್ತಿದೆ ಎಂಬ ವಿಷಯವನ್ನು ಕಾರಜೋಳ ಪದೇ ಪದೇ ಪ್ರಸ್ತಾಪ ಮಾಡುತ್ತಿರುವುದರಿಂದ ಅವರ ಮೇಲೆ ಹಲ್ಲೆ ಯತ್ನ ನಡೆದಿದೆ. ಸರ್ಕಾರದ ಕುತಂತ್ರ ದಲಿತ ಸಮುದಾಯಗಳಿಗೆ ಅರ್ಥವಾಗಿದ್ದು, ಇದರಿಂದ ದಲಿತರು ಸರ್ಕಾರದ ಮೇಲೆ ತಿರುಗಿ ಬೀಳುತ್ತಾರೆ ಎಂಬ ಭಯ ಸರ್ಕಾರವನ್ನು ಕಾಡುತ್ತಿದೆ ಎಂದು ಹೇಳಿದರು.

ಗೃಹಜ್ಯೋತಿ ಯೋಜನೆಗೆ ಎಸ್‌ಇಎಸ್‌ಪಿ ಟಿಎಸ್‌ಪಿಯಡಿ ₹2,400 ಕೋಟಿ ಇಟ್ಟಿದ್ದಾರೆ. ಅಲ್ಲದೇ, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಯೋಜನೆಯಡಿ ₹2,800 ಕೋಟಿ ಇಟ್ಟಿದ್ದಾರೆ. ಈ ಮೊತ್ತದಲ್ಲಿ ಶೇ 90 ರಷ್ಟು ದಲಿತರಿಗೆ ಪ್ರಯೋಜನ ಸಿಗುತ್ತದೆ. ಹಾಗಿದ್ದ ಮೇಲೆ ಪ್ರತ್ಯೇಕವಾಗಿ ₹2400 ಕೋಟಿ ಇಟ್ಟಿದ್ದು ಏಕೆ ಎಂದು ಪ್ರಶ್ನಿಸಿದರು.

**ತಾಳ್ಮೆ ಕಳೆದುಕೊಂಡ ಕಾಂಗ್ರೆಸ್:** ತಮ್ಮ ಟೀಕಾಕಾರರ ಬಗ್ಗೆ ಕಾಂಗ್ರೆಸ್ ತಾಳ್ಮೆ ಕಳೆದುಕೊಂಡಿದೆ. ಆದ್ದರಿಂದಲೇ ಕಾರಜೋಳ ಅವರು ಸುದ್ದಿಗೋಷ್ಠಿ ನಡೆಸುವಾಗ ಹಲ್ಲೆಗೆ ಪ್ರಯತ್ನ ಮಾಡಿದೆ. ಇದರ ಹಿಂದೆ ಕಾಂಗ್ರೆಸ್ ಕೈವಾಡ ಇದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹರಿಹಾಯ್ದಿದ್ದಾರೆ.

136 ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿದಿರುವ ಕಾಂಗ್ರೆಸ್‌ಗೆ ಅಭದ್ರತೆ ಕಾಡುತ್ತಿದೆ. ಹೀಗಾಗಿ ಈ ರೀತಿಯ ದುಸ್ಸಾಹಸಕ್ಕೆ ಕೈ ಹಾಕಿದೆ ಎಂದಿದ್ದಾರೆ.

## ಅಂಗನವಾಡಿ ಗೌರವಧನ: ಮನವಿ ಪರಿಗಣಿಸಲು ನಿರ್ದೇಶನ

**ಬೆಂಗಳೂರು:** 'ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರ ಗೌರವಧನ ಯೋಜನೆಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಮನವಿಯನ್ನು ಪರಿಗಣಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಹಾಯಕಿಯರ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್‌.ಎಸ್‌.ಸಂಜಯ್ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಮುಂದಿನ ಎರಡು ತಿಂಗಳಲ್ಲಿ ಈ ಪ್ರಕ್ರಿಯೆ ಯನ್ನು ಪೂರ್ಣಗೊಳಿಸಬೇಕು' ಎಂದು ಆದೇಶಿಸಿದೆ.

'ಅಂಗನವಾಡಿ ಕಾರ್ಯಕರ್ತೆ ಯರು ಮತ್ತು ಸಹಾಯಕಿಯರಿಗೆ ಉತ್ತಮ ಸೌಲಭ್ಯ ದೊರೆಯುತ್ತಿಲ್ಲ. ಹೀಗಾಗಿ, ಅವರ ಸೇವೆಯನ್ನು ಪರಿಗಣಿಸಿ ಗೌರವಧನ ಹೆಚ್ಚಳ ಮಾಡಬೇಕೆಂಬ ಮನವಿಯ ಪರಿಶೀಲನೆ ಅವಶ್ಯವಿದೆ' ಎಂದು ನ್ಯಾಯಪೀಠ ತಿಳಿಸಿದೆ.

'ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಪಾವತಿ ಯೋಜನೆಯನ್ನು 2011ರ ಮಾರ್ಚ್ 18ರಂದು ಪ್ರಾರಂಭಿಸಿದ್ದ ಸರ್ಕಾರ ಕಾರ್ಯಕರ್ತೆಯರಿಗೆ ₹ 30 ಸಾವಿರ ಮತ್ತು ಸಹಾಯಕಿಯರಿಗೆ ₹ 50 ಸಾವಿರ ನೀಡುತ್ತಿದೆ. ಈ ಮೊತ್ತವನ್ನು ಕ್ರಮವಾಗಿ ₹ 50 ಸಾವಿರ ಹಾಗೂ ₹ 1 ಲಕ್ಷಕ್ಕೆ ಹೆಚ್ಚಳ ಮಾಡಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

# ಪ್ರಾಚಾರ್ಯ ವಿರುದ್ಧ ವರದಿ

## ಸಾವರ್ಕರ್ ಸ್ಮರಣೆಗೆ ವಿದ್ಯಾರ್ಥಿನಿಯರು

ಪ್ರಜಾವಾಣಿ ವಾರ್ತೆ

**ಹಾವೇರಿ:** ನಗರದ ಇಜಾರಿಲಕಮಾಪುರದಲ್ಲಿನ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರನ್ನು 'ವೀರ ಸಾವರ್ಕರ್ ಸಂಸ್ಮರಣೆ' ಖಾಸಗಿ ಕಾರ್ಯಕ್ರಮದ ಸಮೂಹ ಗಾಯನ ತರಬೇತಿಗೆ ಕಳುಹಿಸಿದ್ದ ಪ್ರಾಚಾರ್ಯ ಕೆ.ಕೃಷ್ಣಪ್ಪ ವಿರುದ್ಧ ಶಿಸ್ತುಕ್ರಮ ಜರುಗಿಸಲು ಇಲಾಖೆ ಮುಂದಾಗಿದೆ.



ಕೆ. ಕೃಷ್ಣಪ್ಪ

ಡಿಸೆಂಬರ್ 12ರಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಮತ್ತು ಹಾವೇರಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ಷಯ ಶ್ರೀಧರ್ ಅವರು ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹಾಜರಾತಿ ಅತ್ಯಂತ ಕಡಿಮೆ ಇರುವ ಬಗ್ಗೆ ಪ್ರಶ್ನಿಸಿದಾಗ, '95 ವಿದ್ಯಾರ್ಥಿನಿಯರು 'ವೀರ ಸಾವರ್ಕರ್ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸುವ ಸಮೂಹ ಗಾಯನದ ತರಬೇತಿಗೆ ಹೋಗಿದ್ದಾರೆ' ಎಂದು ಉಪನ್ಯಾಸಕರು ಉತ್ತರಿಸಿದ್ದರು. ಒಟ್ಟಾರೆ ಪ್ರಕರಣದ ಕುರಿತು ವರದಿ ನೀಡುವಂತೆ ರಿತೇಶ್‌ಕುಮಾರ್ ಸಿಂಗ್ ಅವರು ಅಕ್ಷಯ್ ಶ್ರೀಧರ್ ಅವರಿಗೆ ಸೂಚಿಸಿದ್ದರು.

'ಪ್ರಾಚಾರ್ಯ ಕೆ.ಕೃಷ್ಣಪ್ಪ ಅವರು ಇಲಾಖೆಯಿಂದ ಆಯೋಜಿಸುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಖಾಸಗಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಲು ಅನುಮತಿ ನೀಡಿ ಕರ್ತವ್ಯ ಲೋಪ ಎಸಗಿದ್ದಾರೆ' ಎಂದು ಇಲಾಖೆಗೆ ವರದಿ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹಾವೇರಿಯ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ರಾಷ್ಟ್ರಭಕ್ತರ ಬಳಗದಿಂದ ಬಿಜೆಪಿ ನಾಯಕ ಕೆ.ಎಸ್‌.ಈಶ್ವರಪ್ಪ ಮತ್ತು ಪುತ್ರ ಕೆ.ಇ. ಕಾಂತೇಶ್ ಅವರ ಮುಖಂಡತ್ವದಲ್ಲಿ ಡಿಸೆಂಬರ್ 17ರಂದು ಆಯೋಜಿದ್ದ 'ವೀರ ಸಾವರ್ಕರ್ ಸಂಸ್ಮರಣೆ' ಕಾರ್ಯಕ್ರಮದಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಸಮೂಹ ಗಾಯನ ಪ್ರಸ್ತುತಪಡಿಸಿದ್ದರು. ಅದರಲ್ಲಿ ಇಜಾರಿಲಕಮಾಪುರದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯರು ಕೂಡ ಇದ್ದರು ಎನ್ನಲಾಗಿದೆ.

## '₹675 ಕೋಟಿ ಅನುದಾನಕ್ಕೆ ಮನವಿ'

**ನವದೆಹಲಿ:** ಕರ್ನಾಟಕದಲ್ಲಿ ಹೊಸದಾಗಿ 19 ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಮೆಟ್ರಿಕ್ ನಂತರದ 50 ಹಾಸ್ಟೆಲ್‌ಗಳ ನಿರ್ಮಾಣಕ್ಕೆ ₹ 675 ಕೋಟಿ ಅನುದಾನ ಒದಗಿಸಬೇಕು ಎಂದು ವಿನಂತಿಸಿ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಮನವಿ ಸಲ್ಲಿಸಿದ್ದಾರೆ. ಮಂಗಳವಾರ ಸಂಸತ್ ಭವನದಲ್ಲಿ ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವೆ ಸ್ಮೃತಿ ಇರಾನಿ ಅವರನ್ನು ಭೇಟಿ ಮಾಡಿದ ಅವರು, 'ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಬೇಡಿಕೆ ಇದ್ದು, 19 ಶಾಲೆಗಳಿಗೆ ₹475 ಕೋಟಿ ನೆರವು ನೀಡಬೇಕು' ಎಂದು ಕೋರಿದರು.

ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ನಿರ್ಮಾಣಕ್ಕೆ ₹200 ಕೋಟಿ ಅನುದಾನ ಒದಗಿಸಬೇಕು. 2.93 ಲಕ್ಷ ವಿದ್ಯಾರ್ಥಿಗಳಿಗೆ 2022-23ನೇ ಸಾಲಿನ ವಿದ್ಯಾರ್ಥಿ ವೇತನ ಮೊತ್ತ ಬಿಡುಗಡೆಗೆ ಬಾಕಿ ಇದ್ದು ತಕ್ಷಣ ಬಿಡುಗಡೆ ಮಾಡಬೇಕು. 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಸಲ್ಲಿಸಿದರು.

## ಆಸ್ಪತ್ರೆಗಳನ್ನು ಸಜ್ಜಗೊಳಿಸಲು ಆರೋಗ್ಯ ಇಲಾಖೆ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ಕ್ರಮವಾಗಿ ಆಸ್ಪತ್ರೆಗಳಲ್ಲಿನ ತೀವ್ರ ನಿಗಾ ಘಟಕ (ಐಸಿಯು), ವೈದ್ಯಕೀಯ ಆಮ್ಲಜನಕ ಘಟಕ ಸೇರಿ ವಿವಿಧ ಘಟಕಗಳನ್ನು ಸಜ್ಜುಗೊಳಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸೂಚಿಸಿದ್ದಾರೆ.

'ವೈದ್ಯಕೀಯ ಸಿಲಿಂಡರ್‌ಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು. 'ಪ್ರೆಷರ್ ಸ್ವಿಂಗ್ ಅಡ್ಸಾರ್ಪ್ಷನ್' (ಪಿಎಸ್‌ಎ) ಆಮ್ಲಜನಕ ತಯಾರಿಕಾ ಘಟಕಗಳು, ವೈದ್ಯಕೀಯ ಆಮ್ಲಜನಕ ಘಟಕಗಳು, ಐಸಿಯು ಉಪಕರಣಗಳು ಹಾಗೂ ಆಮ್ಲಜನಕ ವೆಂಟಿಲೇಟರ್‌ಗಳನ್ನು ಪರಿಶೀಲಿಸಿ, ಕಾರ್ಯನಿರ್ವಹಣೆ ಬಗ್ಗೆ ವರದಿ ನೀಡಬೇಕು. ವೈದ್ಯಕೀಯ ಗ್ಯಾಸ್ ಪೈಪ್‌ಲೈನ್ ಬಗ್ಗೆ ತಪಾಸಣೆ ನಡೆಸಬೇಕು. ಔಷಧಗಳ ಲಭ್ಯತೆ ಬಗ್ಗೆಯೂ ಕ್ರಮಕೈಗೊಳ್ಳಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

'ಐಸಿಯು ಉಪಕರಣಗಳು, ಪಿಎಸ್‌ಎ ಆಮ್ಲಜನಕ ತಯಾರಿಕಾ ಘಟಕ ಸೇರಿ ವಿವಿಧ ಘಟಕಗಳ ಉಪಕರಣಗಳ ರಿಪೇರಿಗೆ ಲಭ್ಯವಿರುವ ಅನುದಾನ ಬಳಸಿ, ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿ ಇಡಬೇಕು' ಎಂದು ತಿಳಿಸಿದ್ದಾರೆ.

'ಕೋವಿಡ್ ಪ್ರಕರಣಗಳು ಹೆಚ್ಚಾದಲ್ಲಿ ಪರಿಸ್ಥಿತಿ ನಿಭಾಯಿಸಲು ಆಸ್ಪತ್ರೆಗಳ ಸಿದ್ಧತೆಯನ್ನು ಖಚಿತ ಪಡಿಸಿಕೊಳ್ಳಬೇಕು. ಇದೇ ತಿಂಗಳಾಂತ್ಯದೊಳಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಅಣಕು ಪ್ರದರ್ಶನ ಪೂರ್ಣಗೊಳಿಸಬೇಕು' ಎಂದು ಸೂಚಿಸಿದ್ದಾರೆ.

### ಕೆಇಎ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಸಾಧನಗಳ ಬಳಕೆ ಪ್ರಕರಣ

# 12 ಮಂದಿ ವಿರುದ್ಧ 'ಕೋಕಾ' ಅಸ್ತ್ರ

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಬ್ಲೂಟೂತ್ ಸಾಧನ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆಯಲು ನೆರವಾದ ಅಕ್ರಮ ಪ್ರಕರಣದಲ್ಲಿ ಬಂಧಿತ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಸೇರಿ 12 ಆರೋಪಿಗಳ ವಿರುದ್ಧ ಸಿಐಡಿ ಪೊಲೀಸರು 'ಕೋಕಾ' (ಕರ್ನಾಟಕ ಸಂಘಟಿತ ಅಪರಾಧ ತಡೆ ಕಾಯ್ದೆ)–2000 ಅಸ್ತ್ರ ಪ್ರಯೋಗಿಸಿದ್ದಾರೆ.

ಅಶೋಕ ನಗರ ಠಾಣೆ ವ್ಯಾಪ್ತಿಯ ಖಾಸಗಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಬಳಸಿದ ಸಂಬಂಧ ಪರೀಕ್ಷಾ ಅಭ್ಯರ್ಥಿಗಳು ಸೇರಿ 15 ಮಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು. ಮೂವರು ಅಭ್ಯರ್ಥಿಗಳನ್ನು ಬಿಟ್ಟು 12 ಆರೋಪಿಗಳ ವಿರುದ್ಧ ಸಿಐಡಿ ಪೊಲೀಸರು ಮಂಗಳವಾರ 'ಕೋಕಾ' ಪ್ರಕರಣ ದಾಖಲಿಸಿದ್ದಾರೆ.

ಸಿಐಡಿ ಡಿವೈಎಸ್‌ಪಿಗಳಾದ ಶಂಕರಗೌಡ ಪಾಟೀಲ, ತನ್ವೀರ್ ನೇತೃತ್ವದ ತಂಡ ತನಿಖೆ ನಡೆಸುತ್ತಿದೆ.

ಪ್ರಮುಖ ಆರೋಪಿ ಆರ್.ಡಿ. ಪಾಟೀಲ, ನೆಲೋಗಿ ಮೂಲದ ಬೆಳಗಾವಿಯ ಅಥಣಿಯ ಸಣ್ಣನೀರಾವರಿ ಇಲಾಖೆಯ ಎಇ ರುದ್ರಗೌಡ, ರಾಯಲ್ ಪಬ್ಲಿಕ್ ಶಾಲಾ ಕೇಂದ್ರದ ಮುಖ್ಯಸ್ಥನಾಗಿದ್ದ ಚಂದ್ರಕಾಂತ ಬುರಕಲ್ ಹಾಗೂ ಕಲ್ಯಾಣಿಯಂದ ಬಣ್ಣ (ಬಸವರಾಜ) ಪೂಜಾರಿ, ಪ್ರಶ್ನೆ ಪತ್ರಿಕೆ ಸೋರಿಕೆಗಾಗಿ ಪ್ರಾಂಶುಪಾಲರನ್ನು ಭೇಟಿ ಮಾಡಿದ್ದ ಸಂತೋಷ ಕಟ್ಟೋಳಿ, ಡೀಲ್ ಮಾಡಿಕೊಂಡ ಅಭ್ಯರ್ಥಿಗಳ ಪಟ್ಟಿ ಮಾಡುತ್ತಿದ್ದ ಶಶಿಧರ ಜಮಾದಾರ, ಬ್ಲೂಟೂತ್ ಡಿವೈಸ್ ತಯಾರಿಸಿ ಅಭ್ಯರ್ಥಿಗಳಿಗೆ ಪೂರೈಸುತ್ತಿದ್ದ ಸಾಗರ್, ಶಿವಕುಮಾರ ಸೇರಿ ಒಟ್ಟು 12 ಆರೋಪಿಗಳ ವಿರುದ್ಧ 'ಕೋಕಾ' ಪ್ರಕರಣ ದಾಖಲಾಗಿದೆ ಎಂದು ಸಿಐಡಿ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಈ ಹಿಂದೆ ಜಾಮೀನು ನೀಡುವಾಗ 'ಇಂತಹ ಅಕ್ರಮದಲ್ಲಿ ಭಾಗಿಯಾಗದಂತೆ ಪ್ರಮುಖ ಆರೋಪಿಗೆ ಹೈಕೋರ್ಟ್ ಎಚ್ಚರಿಸಿತ್ತು. ಅದನ್ನು ಲೆಕ್ಕಿಸದೆ ತನ್ನದೇ ಆದ ಗ್ಯಾಂಗ್ ಕಟ್ಟಿಕೊಂಡು ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಪದೇ ಪದೇ ಅಕ್ರಮ ಎಸಗಿದ ಆರೋಪ ಕೇಳಿಬಂದಿತ್ತು. ಇದರಿಂದ ಪಾರದರ್ಶಕವಾಗಿ ಪರೀಕ್ಷೆ ನಡೆಸುವುದಕ್ಕೆ ಅಡ್ಡಿಯಾಗುತ್ತಿತ್ತು. ಹೀಗಾಗಿ, ಸಿಐಡಿ ಡಿಜಿಪಿ ಎಂ.ಎ.ಸಲೀಂ, ಸಿಐಡಿ ಡಿಐಜಿ ಸುಧೀರಕುಮಾರ ರೆಡ್ಡಿ ಸೇರಿ ಇತರೆ ಮೇಲಾಧಿಕಾರಿಗಳಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ, ಅವರ ಒಪ್ಪಿಗೆ ಪಡೆದು 'ಕೋಕಾ' ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದರು.

'ಕೋಕಾ' ಅಡಿ ಪ್ರಕರಣ ದಾಖಲಿಸಬೇಕಾದರೆ, ಆರೋಪಿಗಳ ವಿರುದ್ಧ ಕನಿಷ್ಠ ಎರಡು ಪ್ರಕರಣಗಳಾದರೂ ದಾಖಲಾಗಿರಬೇಕು. ಆದರೆ, ಪ್ರಮುಖ ಆರೋಪಿ ವಿರುದ್ಧ ಕೆಇಎ ನೇಮಕಾತಿ ಅಕ್ರಮ ಸಂಬಂಧ ಅಫಜಲಪುರ ಪೊಲೀಸ್ ಠಾಣೆ, ಗುಲಬರ್ಗಾ ವಿಶ್ವವಿದ್ಯಾಲಯ ಠಾಣೆ ಹಾಗೂ ಈ ಹಿಂದೆ ನಡೆದಿದ್ದ ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ. ಈ ಪ್ರಕರಣಗಳಲ್ಲಿ ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಗುವುದಿಲ್ಲ. ಒಮ್ಮೆ ಆರೋಪ ಸಾಬೀತಾದರೆ 5 ವರ್ಷಗಳಿಂದ ಜೀವಾವಧಿವರೆಗೂ ಶಿಕ್ಷೆಯಾಗುವ ಸಾಧ್ಯತೆ ಇರುತ್ತದೆ ಎಂದು ಮಾಹಿತಿ ನೀಡಿದರು.

ಕಲಬುರಗಿ ನಗರದಲ್ಲಿ ಈ ಹಿಂದೆ ನಡೆದಿದ್ದ ಶ್ರೀಕಾಂತ ರೆಡ್ಡಿ ಮೇಲಿನ ಹಲ್ಲೆ ಪ್ರಕರಣ ಸಂಬಂಧ ಪೊಲೀಸರು ಐವರು ರೌಡಿಶೀಟರ್‌ಗಳ ವಿರುದ್ಧ 'ಕೋಕಾ' ಅಡಿ ಪ್ರಕರಣ ದಾಖಲಿಸಿಕೊಂಡಿದ್ದರು. ಈಗ ಕೆಇಎ ಅಕ್ರಮದ ಆರೋಪಿಗಳ ವಿರುದ್ಧವೂ ಇದೇ ಪ್ರಕರಣ ದಾಖಲಾಗಿದೆ.

## ಬಾಲಕಿ ಮೇಲೆ ಅತ್ಯಾಚಾರ

### ಚಾಕು ತೋರಿಸಿ ಬೆದರಿಸಿದ ಬಾಲಕರು

ಪ್ರಜಾವಾಣಿ ವಾರ್ತೆ

> ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ಬಾಲ ನ್ಯಾಯ ಮಂಡಳಿಗೆ ಒಪ್ಪಿಸಲಾಗುವುದು
> ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕಲಬುರಗಿ: ಕಾಳಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ 16 ವರ್ಷದ ಇಬ್ಬರು ಬಾಲಕರು ಚಾಕು ತೋರಿಸಿ ಬೆದರಿಸಿ 12 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದು, ಈ ದೃಶ್ಯವನ್ನು ಮೊಬೈಲ್‌ನಲ್ಲಿ ವಿಡಿಯೊ ಸಹ ಮಾಡಿಕೊಂಡಿದ್ದಾರೆ.

ಸಂತ್ರಸ್ತ ಬಾಲಕಿಯ ಪೋಷಕರು ನೀಡಿದ ದೂರಿನ ಅನ್ವಯ ಕಾನೂನು ಸಂಘರ್ಷಕ್ಕೆ ಒಳಗಾದ ಇಬ್ಬರು ಬಾಲಕರ ವಿರುದ್ಧ ಕಾಳಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಬಾಲಕಿ ಹಾಗೂ ಬಾಲಕರ ವೈದ್ಯಕೀಯ ತಪಾಸಣೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ಪೋಷಕರು ಕೂಲಿಗಾಗಿ ಮುಂಬೈ ಹೋಗಿದ್ದಾರೆ. ಅಜ್ಜಿಯ ಕಣ್ಗಾವಲಿನಲ್ಲಿ 9 ಮತ್ತು 10ನೇ ತರಗತಿ ಓದುತ್ತಿರುವ ಸಹೋದರರೊಂದಿಗೆ ಬೇರೊಂದು ಮನೆಯಲ್ಲಿ 6ನೇ ತರಗತಿ ಓದುತ್ತಿರುವ ಬಾಲಕಿ ವಾಸವಾಗಿದ್ದಳು.

ಡಿಸೆಂಬರ್ 7 ಮತ್ತು 10ರಂದು ಬಾಲಕಿಯ ಮನೆಯಲ್ಲಿ ಬೇರೆ ಯಾರೂ ಇಲ್ಲದ ವೇಳೆ 9 ಮತ್ತು 10ನೇ ತರಗತಿ ಓದುತ್ತಿರುವ ಬಾಲಕರು ಒಳ ನುಗ್ಗಿದರು. ಚಾಕು ತೋರಿಸಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಯಾರಿಗಾದರು ಹೇಳಿದರೆ ಸಹೋದರರು ಸೇರಿ ಬಾಲಕಿಯನ್ನು ಕೊಲ್ಲುವುದಾಗಿ ಚಾಕು ತೋರಿಸಿ ಬೆದರಿಕೆ ಹಾಕಿದರು. ಹೀಗಾಗಿ, ಬಾಲಕಿಯು ತನ್ನ ಮೇಲಾದ ದೌರ್ಜನ್ಯದ ಬಗ್ಗೆ ಯಾರಲ್ಲೂ ಹೇಳಿಕೊಂಡಿರಲಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಲೈಂಗಿಕ ದೌರ್ಜನ್ಯ ಎಸಗಿದಾಗ ಬಾಲಕನೊಬ್ಬ ಇನ್ನೊಬ್ಬನಿಗೆ ಗೊತ್ತಾಗದಂತೆ ವಿಡಿಯೊ ಮಾಡಿಕೊಂಡು, ತನ್ನ ಮೊಬೈಲ್‌ಗೆ ಕಳುಹಿಸಿಕೊಂಡಿದ್ದ. ಬಳಿಕ ಸ್ನೇಹಿತನ ಮೊಬೈಲ್‌ನಿಂದ ವಿಡಿಯೊ ಡಿಲೀಟ್ ಮಾಡಿದ್ದ. ಬಾಲಕನಲ್ಲಿ ಲೈಂಗಿಕ ದೌರ್ಜನ್ಯದ ವಿಡಿಯೊ ಇರುವುದು ಬಾಲಕಿಯ ಅಣ್ಣನ ಗಮನಕ್ಕೆ ಬಂತು. ಈ ಬಗ್ಗೆ ಹಿರಿಯ ಮಗ ಮಾಹಿತಿ ನೀಡಿದ್ದರಿಂದ ಮುಂಬೈನಿಂದ ಬಂದ ಪೋಷಕರು, ಮಗಳಿಂದ ಘಟನೆ ಬಗ್ಗೆ ಮಾಹಿತಿ ಪಡೆದು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

10ನೇ ತರಗತಿ ಓದಿಗೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಬಾಲಕನ ತಾಯಿ ಹಾಗೂ ಮತ್ತೊಬ್ಬ ಬಾಲಕಿಗೆ ಆತನ ಸೋದರ ಮಾವ ಮೊಬೈಲ್ ಕೊಡಿಸಿದ್ದರು ಎಂದು ತಿಳಿದುಬಂದಿದೆ.

## ಗಡಿ ಜಿಲ್ಲೆಗಳಲ್ಲಿ ಎಚ್ಚರಿಕೆಗೆ ಸೂಚನೆ

ಒಂದನೇ ಪುಟದಿಂದ...

'ಕೋವಿಡ್ ಲಕ್ಷಣ ಹೊಂದಿರುವ ಅಂತರರಾಷ್ಟ್ರೀಯ ಪ್ರಯಾಣಿಕರ ಹಾಗೂ ಗುಂಪು ಗುಂಪಾಗಿ ವರದಿಯಾಗುವ ಪ್ರಕರಣಗಳಲ್ಲಿ ಸೋಂಕಿತರ ಗಂಟಲು ಹಾಗೂ ಮೂಗಿನ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜೆನೋಮಿಕ್ ಸಿಕ್ವೆನ್ಸ್) ಪರೀಕ್ಷೆಗೆ ಕಳುಹಿಸಬೇಕು. ತೀವ್ರ ಸ್ವರೂಪದ ರೋಗ ಲಕ್ಷಣ ಹೊಂದಿರುವವರು, ಆಸ್ಪತ್ರೆಗೆ ದಾಖಲಾದ ಕೋವಿಡ್ ಪೀಡಿತರು, ಕೋವಿಡ್ ಮರಣ ಪ್ರಕರಣಗಳು ಹಾಗೂ ಎರಡು ಡೋಸ್ ಲಸಿಕೆ ಪಡೆದರೂ ಕೋವಿಡ್ ಪೀಡಿತರಾದವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಪರೀಕ್ಷೆಗೆ ಒಳಪಡಿಸಬೇಕು' ಎಂದು ಹೇಳಿದ್ದಾರೆ.

'ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದೃಢಪಟ್ಟ ಕೋವಿಡ್ ಪ್ರಕರಣಗಳಲ್ಲಿ 25ಕ್ಕಿಂತ ಹೆಚ್ಚಿನ 'ಸಿಟಿ ವ್ಯಾಲ್ಯೂ' ಇದ್ದಲ್ಲಿ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಪರೀಕ್ಷೆಗಾಗಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಕಳುಹಿಸಬೇಕು' ಎಂದು ತಿಳಿಸಿದ್ದಾರೆ.

### 44 ಹೊಸ ಪ್ರಕರಣಗಳು ದೃಢ

ರಾಜ್ಯದಲ್ಲಿ ಮಂಗಳವಾರ ಹೊಸದಾಗಿ 44 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. 24 ಗಂಟೆಗಳ ಅವಧಿಯಲ್ಲಿ 722 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 6.09ರಷ್ಟಿದೆ. ಸದ್ಯ ರಾಜ್ಯದಲ್ಲಿ 79 ಕೋವಿಡ್ ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 62 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ, 17 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ.

ಆಸ್ಪತ್ರೆ ಚಿಕಿತ್ಸೆಗೆ ಒಳಗಾದವರಲ್ಲಿ ಆರು ಮಂದಿ ಐಸಿಯು ಹಾಗೂ 11 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

### ಮುಖಗವಸು ಧರಿಸಲು ಸಲಹೆ

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನ ಆಧಾರ 60 ವರ್ಷ ಮೇಲ್ಪಟ್ಟವರು, ಹೃದಯ, ಮೂತ್ರಪಿಂಡ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು, ಗರ್ಭಿಣಿಯರು, ಬಾಣಂತಿಯರು ಹಾಗೂ ಜ್ವರ, ಕೆಮ್ಮು ಸೇರಿ ಕೊರೊನಾ ಸೋಂಕಿನ ವಿವಿಧ ಲಕ್ಷಣ ಹೊಂದಿರುವವರು ಮುಖಗವಸು (ಮಾಸ್ಕ್) ಧರಿಸುವುದು ಸೂಕ್ತ ಎಂದು ಇಲಾಖೆ ಸಲಹೆ ನೀಡಿದೆ.



ಕಲೋತ್ಸವ

ದಾವಣಗೆರೆಯ ಶಾಮನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದಲ್ಲಿ ವಿದ್ಯಾರ್ಥಿಯೊಬ್ಬ ಮೀನಿನ ಆಕೃತಿ ರಚಿಸಿ ಗಮನ ಸೆಳೆದನು –ಪ್ರಜಾವಾಣಿ ಚಿತ್ರ/ ಸತೀಶ್ ಬಡಿಗೇರ




## ಜನವರಿಯಲ್ಲಿ ನಿತ್ಯ 1030 ಕ್ಯೂಸೆಕ್ ನೀರು ಬಿಡಲು ಶಿಫಾರಸು

ಒಂದನೇ ಪುಟದಿಂದ...

'ತಮಿಳುನಾಡಿನ ಕಾವೇರಿ ಜಲಾನಯನ ಪ್ರದೇಶದಲ್ಲಿ ಹಿಂಗಾರಿನಲ್ಲಿ ಮಳೆಯಾಗುತ್ತಿದೆ. ಹೀಗಾಗಿ, ಆ ರಾಜ್ಯಕ್ಕೆ ಬೆಳೆಗಳನ್ನು ಉಳಿಸಿಕೊಳ್ಳಲು ಯಾವುದೇ ತೊಂದರೆ ಆಗುವುದಿಲ್ಲ. ಸಾಂಬಾ ಬೆಳೆಯ ಕಟಾವು ಡಿಸೆಂಬರ್ ಮೊದಲ ವಾರದಲ್ಲೇ ಮುಗಿದಿದೆ. ಹೀಗಾಗಿ, ನೀರಿನ ಅವಶ್ಯಕತೆ ಇಲ್ಲ' ಎಂದು ಹೇಳಿದರು.

'ಮೆಟ್ಟೂರು ಮತ್ತು ಭವಾನಿ ಸಾಗರ ಜಲಾಶಯಗಳಲ್ಲಿ 50.367 ಟಿಎಂಸಿ ಅಡಿ ನೀರಿದೆ. ಇದು ತಮಿಳುನಾಡಿನ ಬೇಡಿಕೆಗಿಂತ ಹೆಚ್ಚು. ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಒಳಹರಿವು ಸ್ಥಗಿತಗೊಂಡಿದೆ. ಮುಂದಿನ ದಿನಗಳಲ್ಲಿ ಒಳಹರಿವಿನ ನಿರೀಕ್ಷೆ ಇಲ್ಲ. ಹೀಗಾಗಿ, ನೀರು ಬಿಡುಗಡೆ ಸಾಧ್ಯವಿಲ್ಲ' ಎಂದರು.

'ಕರ್ನಾಟಕವು 14 ಟಿಎಂಸಿ (7.60 ಟಿಎಂಸಿ ಬಾಕಿ ಸೇರಿದಂತೆ) ನೀರು ಬಿಡಬೇಕು' ಎಂದು ತಮಿಳುನಾಡಿನ ಅಧಿಕಾರಿಗಳು ಒತ್ತಾಯಿಸಿದರು.




**ಸುಭಾಷಿತ**

ಸಂಬಂಧಗಳನ್ನು ಕಾಯ್ದುಕೊಳ್ಳುವಲ್ಲಿ ಜಾದೂ ನಡೆಯಬೇಕೆಂದರೆ, ಇತರರ ಬಗ್ಗೆ ತೀರ್ಪು ನೀಡುವುದನ್ನು ಬಿಡಬೇಕು.

–ವೇನ್ ಡಯರ್

# ವಿರೋಧ ಪಕ್ಷಗಳ ಸದಸ್ಯರ ಅಮಾನತು ದುರ್ಬಲಗೊಂಡಿದ್ದು ಪ್ರಜಾಪ್ರಭುತ್ವ

**ಸಂಸತ್ತಿನ** ಉಭಯ ಸದನಗಳಲ್ಲಿ ವಿರೋಧ ಪಕ್ಷಗಳ ಸದಸ್ಯರನ್ನು ಹಾಲಿ ಅಧಿವೇಶನದ ಅವಧಿ ಪೂರ್ಣಗೊಳ್ಳುವವರೆಗೆ ಅಮಾನತು ಮಾಡುವ ಪರಿಪಾಟ ಕೆಲವು ದಿನಗಳಿಂದ ನಡೆಯುತ್ತಿದೆ. ಇದರ ಪರಿಣಾಮವಾಗಿ ಉಭಯ ಸದನಗಳಲ್ಲಿ ವಿರೋಧ ಪಕ್ಷದ ಸದಸ್ಯರಿಗೆ ಮೀಸಲಾಗಿರುವ ಆಸನಗಳು ಬಹುತೇಕ ಖಾಲಿಯಾಗಿವೆ. ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರನ್ನು ದಿನದಿನವೂ ಸಾಮೂಹಿಕವಾಗಿ ಅಮಾನತು ಮಾಡುತ್ತಿರುವುದು ತೀರಾ ಅಸಾಮಾನ್ಯ ಬೆಳವಣಿಗೆ. ಕಳೆದ ವಾರ, ವಿರೋಧ ಪಕ್ಷಗಳ 14 ಮಂದಿ ಸದಸ್ಯರನ್ನು ಅಮಾನತು ಮಾಡಲಾಯಿತು. ಸೋಮವಾರ, ಲೋಕಸಭೆಯ 33 ಸಂಸದರನ್ನು, ರಾಜ್ಯಸಭೆಯ 45 ಸಂಸದರನ್ನು ಅಮಾನತು ಮಾಡಲಾಯಿತು. ಇವರೆಲ್ಲರೂ 'ಇಂಡಿಯಾ' ಮೈತ್ರಿಕೂಟದ ಸದಸ್ಯ ಪಕ್ಷಗಳಿಗೆ ಸೇರಿದವರು. ಮಂಗಳವಾರದ ಕಲಾಪದಲ್ಲಿ ಒಟ್ಟು 49 ಮಂದಿಯನ್ನು ಅಮಾನತು ಮಾಡಲಾಗಿದೆ. ಅಂದರೆ ಈ ಬಾರಿಯ ಅಧಿವೇಶನದಲ್ಲಿ ಇದುವರೆಗೆ 141 ಮಂದಿ ಸಂಸದರನ್ನು ಅಮಾನತು ಮಾಡಲಾಗಿದೆ. ಕೆಲವು ಸದಸ್ಯರ ವರ್ತನೆಯ ಬಗ್ಗೆ ಪರಿಶೀಲನೆ ನಡೆಸುವಂತೆ ಹಕ್ಕುಬಾಧ್ಯತಾ ಸಮಿತಿಗೆ ಸೂಚಿಸಲಾಗಿದೆ. ಹಕ್ಕುಬಾಧ್ಯತಾ ಸಮಿತಿಯ ವರದಿ ಸಲ್ಲಿಕೆ ಆಗುವವರೆಗೆ ಈ ಸದಸ್ಯರು ಸದನದಿಂದ ಹೊರಗೆ ಇರಬೇಕಿದೆ. ಇನ್ನುಳಿದ ಸದಸ್ಯರು ಚಳಿಗಾಲದ ಅಧಿವೇಶನ ಪೂರ್ಣಗೊಳ್ಳುವವರೆಗೆ ಅಮಾನತಿನಲ್ಲಿ ಇರುತ್ತಾರೆ. ಇಷ್ಟೊಂದು ಸಂಖ್ಯೆಯಲ್ಲಿ ಸಂಸದರ ವಿರುದ್ಧ ಹಿಂದೆ ಕ್ರಮ ಕೈಗೊಂಡ ನಿದರ್ಶನ ಇಲ್ಲ.



ದೇಶದ ಸಾಂವಿಧಾನಿಕ ವ್ಯವಸ್ಥೆಯ ಹೃದಯ ಸ್ಥಾನದಲ್ಲಿ ಇರುವ ಸಂಸತ್ತನ್ನು ಒಂದು ಪ್ರಹಸನದ ಮಟ್ಟಕ್ಕೆ ಇಳಿಸುವ ಕೆಲಸ ಯಾರಿಂದಲೂ ಆಗಬಾರದು

ಸಂಸತ್ತಿನ ಭದ್ರತಾ ಲೋಪದ ವಿಚಾರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು ಎಂಬ ಬೇಡಿಕೆಗೆ ಪಟ್ಟು ಹಿಡಿದು ವಿರೋಧ ಪಕ್ಷಗಳ ಸದಸ್ಯರು ಭಿತ್ತಿಪತ್ರಗಳನ್ನು ಹಿಡಿದು ಘೋಷಣೆಗಳನ್ನು ಕೂಗಿರುವುದು ಈ ಅಮಾನತುಗಳಿಗೆ ಪ್ರಧಾನ ಕಾರಣವಾಗಿದೆ. ಸರ್ಕಾರವು ಸಂಸತ್ತಿನಲ್ಲಿ ಹೇಳಿಕೆ ನೀಡಿಲ್ಲ. ಆದರೆ ದುರದೃಷ್ಟದ ಸಂಗತಿಯೆಂದರೆ, ಇಬ್ಬರೂ ನಾಯಕರು ಸಂಸತ್ತಿನ ಭದ್ರತಾ ಲೋಪದ ಬಗ್ಗೆ ಸಂಸತ್ತಿನ ಹೊರಗಡೆ ಹೇಳಿಕೆಗಳನ್ನು ನೀಡಿದ್ದಾರೆ. ಹೀಗೆ ಮಾಡಿರುವುದು ಸಂಸತ್ತಿನ ಹಕ್ಕಿನ ಉಲ್ಲಂಘನೆ ಎಂದೂ ಪರಿಗಣಿಸಬಹುದು. ಇಂಥದ್ದೊಂದು ಮಹತ್ವದ ವಿಚಾರದ ಬಗ್ಗೆ ಸರ್ಕಾರ ಹೇಳಿಕೆ ನೀಡಬೇಕು ಹಾಗೂ ಅದರ ಬಗ್ಗೆ ಚರ್ಚೆ ನಡೆಯಬೇಕು ಎಂದು ಬೇಡಿಕೆ ಇಡುವ ಹಕ್ಕು ಸಂಸದರಿಗೆ ಇದೆ. ಸಂಸತ್ತು ಇರುವುದೇ ಇಂತಹ ಚರ್ಚೆಗಳಿಗೆ ವೇದಿಕೆ ಕಲ್ಪಿಸಲು. ಚರ್ಚೆಗಳು ನಡೆದರೆ ದೇಶಕ್ಕೆ ಅದರ ಪ್ರಯೋಜನ ಸಿಗುತ್ತದೆ. ಆದರೆ ಕೇಂದ್ರ ಸರ್ಕಾರವು ತಾಂತ್ರಿಕ ಕಾರಣ ನೀಡಿ ಅಥವಾ ಒಪ್ಪಲು ಸಾಧ್ಯವಿಲ್ಲದ ಯಾವುದಾದರೂ ಒಂದು ಕಾರಣ ನೀಡಿ ಇಂತಹ ಚರ್ಚೆಗೆ ಅವಕಾಶ ನಿರಾಕರಿಸಲು ಯತ್ನಿಸುತ್ತಿದೆ. ಪ್ರಧಾನಿಯಾಗಲೀ ಗೃಹ ಸಚಿವರಾಗಲೀ ನಿಯಮಗಳಿಗೆ, ಸಂಪ್ರದಾಯಗಳಿಗೆ ಹಾಗೂ ಸಂಸತ್ತಿನಲ್ಲಿ ವ್ಯಕ್ತವಾಗುವ ಬೇಡಿಕೆಗಳಿಗೆ ಅತೀತರಲ್ಲ. ಸಂಸದೀಯ ಹೊಣೆಗಾರಿಕೆಗಳನ್ನು ನಿರ್ವಹಿಸುವ ಸಂದರ್ಭಗಳಲ್ಲಿ, ವಿರೋಧ ಪಕ್ಷಗಳು ಹೇಳಿರುವಂತೆ, ವ್ಯಕ್ತಿಗತ ಅಹಂ ಭಾವವು ಅಡ್ಡಿಯಾಗಬಾರದು.

ವಿರೋಧ ಪಕ್ಷಗಳ ಸದಸ್ಯರು ಸದನದ ಘನತೆ ಕುಗ್ಗಿಸುವ ನಡತೆ ತೋರಿದ್ದಕ್ಕಾಗಿ ಅವರನ್ನು ಅಮಾನತು ಮಾಡಲಾಗಿದೆ ಎಂಬ ಸಮರ್ಥನೆಯು ಸರ್ಕಾರದ ಕಡೆಯಿಂದ ಬಂದಿದೆ. ವಿರೋಧ ಪಕ್ಷಗಳ ಸದಸ್ಯರು ತಮ್ಮ ಹಕ್ಕುಗಳ ನಿರಾಕರಣೆ ಆದಾಗ ಹತಾಶೆಯಿಂದ ದುರ್ವರ್ತನೆ ತೋರಿದ್ದುದಿದೆ. ಆದರೆ ವಿರೋಧ ಪಕ್ಷಗಳನ್ನು ಜೊತೆಯಾಗಿ ಕೊಂಡೊಯ್ಯುವ, ಸಂಸತ್ತಿನ ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆಯು ಸರ್ಕಾರದ ಮೇಲಿದೆ. ಸದಸ್ಯರನ್ನು ಸಂಸತ್ತಿನಿಂದ ಅಥವಾ ವಿಧಾನಸಭೆಗಳಿಂದ ದೀರ್ಘ ಅವಧಿಗೆ ಅಮಾನತು ಮಾಡುವುದು ಅಸಾಂವಿಧಾನಿಕ, ಅದು ಉಚ್ಚಾಟನೆಗೆ ಸಮ ಎಂದು ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ವಿರೋಧ ಪಕ್ಷಗಳ ಸದಸ್ಯರು ಇಲ್ಲದಿದ್ದ ಸಂದರ್ಭದಲ್ಲಿ ಅಂಗೀಕಾರ ಪಡೆದುಕೊಂಡ ಮಸೂದೆಗಳ ಮಹತ್ವವು ಅರ್ಥಹೀನವಾಗಿ ಕುಗ್ಗುತ್ತದೆ. ಈಗ ವಿರೋಧ ಪಕ್ಷಗಳ ಹೆಚ್ಚಿನ ಸದಸ್ಯರು ಸದನದ ಕಲಾಪಗಳಲ್ಲಿ ಭಾಗಿಯಾಗುತ್ತಿಲ್ಲ. ಅವರು ಸಂಸತ್ತಿನ ಹೊರಗಡೆ ಪ್ರತಿಭಟನೆ ಮುಂದುವರಿಸಬಹುದು. ಇದರ ಪರಿಣಾಮವಾಗಿ ಉಳಿದುಕೊಳ್ಳುವುದು ದುರ್ಬಲಗೊಂಡ ಸಂಸತ್ತು ಹಾಗೂ ದುರ್ಬಲಗೊಂಡ ಪ್ರಜಾಪ್ರಭುತ್ವ. ವಿರೋಧ ಪಕ್ಷಗಳ ಸದಸ್ಯರನ್ನು ಈ ಪ್ರಮಾಣದಲ್ಲಿ ಸಂಸತ್ತಿನಿಂದ ಹೊರಹಾಕುವ ಕೆಲಸ ನಡೆಯುವುದು ಸರ್ವಾಧಿಕಾರಿ ಪ್ರಭುತ್ವ ಇರುವೆಡೆಗಳಲ್ಲಿ ಮಾತ್ರ. ದೇಶದ ಸಾಂವಿಧಾನಿಕ ವ್ಯವಸ್ಥೆಯ ಹೃದಯ ಸ್ಥಾನದಲ್ಲಿ ಇರುವುದು ಸಂಸತ್ತು. ಇದನ್ನು ಒಂದು ಪ್ರಹಸನದ ಮಟ್ಟಕ್ಕೆ ಇಳಿಸುವ ಕೆಲಸ ಆಗಬಾರದು.

---

## ದಿನದ ಟ್ವೀಟ್

### ನಿರುದ್ಯೋಗಕ್ಕೆ ಮೂಲ



**ಆಮದು ಸುಂಕ ಕಡಿತಗೊಂಡರೆ ಹೀಗೇ ಆಗುವುದು. ಪ್ರತೀಕಾರದ ಕ್ರಮವಾಗಿ ಹಾಕಿದ್ದ ಸುಂಕವನ್ನು ತೆಗೆದುಹಾಕಿದ ನಂತರ ಅಮೆರಿಕದ ಸೇಬಿನ ಆಮದು 4.40 ಲಕ್ಷ ಬಾಕ್ಸ್‌ಗಳಿಗೆ ಏರಿಕೆಯಾಗಿದೆ. ಈ ಮೊದಲು ಅಮೆರಿಕದ ಸೇಬಿನ 10 ಸಾವಿರ ಬಾಕ್ಸ್‌ಗಳು ಮಾತ್ರ ಆಮದಾಗುತ್ತಿದ್ದವು. ಹಣ್ಣಿನ ಆಮದು ನಿರುದ್ಯೋಗದ ಆಮದಿಗೂ ಕಾರಣವಾಗುತ್ತದೆ ಎಂಬುದನ್ನು ಮರೆಯಬಾರದು.**

**ದೇವಿಂದರ್ ಶರ್ಮಾ,** ಲೇಖಕ

## ಕಿಡಿನುಡಿ



**ರಾಮಜನ್ಮಭೂಮಿ ಬಗ್ಗೆ ಇಡೀ ದೇಶದಲ್ಲಿ ಜಾಗೃತಿ ಮೂಡಿಸಿದ್ದ ಬಿಜೆಪಿಯ ಹಿರಿಯ ನಾಯಕರಾದ ಎಲ್‌.ಕೆ.ಅಡ್ವಾಣಿ ಮತ್ತು ಮುರಳಿ ಮನೋಹರ ಜೋಷಿ ಅವರನ್ನು ಆರೋಗ್ಯ ಮತ್ತು ವಯಸ್ಸಿನ ಕಾರಣಕ್ಕಾಗಿ, ಅಯೋಧ್ಯೆಯಲ್ಲಿ ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಿಂದ ದೂರ ಇಡುವುದು ಸರಿಯಲ್ಲ. 75 ವರ್ಷ ವಯಸ್ಸಾಗಿದೆ ಎಂದು ಅಡ್ವಾಣಿ ಅವರಿಗೆ ಲೋಕಸಭಾ ಟಿಕೆಟ್ ನೀಡದೆ ಈಗಾಗಲೇ ಕಡೆಗಣಿಸಲಾಗಿದೆ. ಹೊಸದಾಗಿ ಮೂಲೆಗುಂಪು ಮಾಡಲು ಇನ್ನೇನೂ ಉಳಿದಿಲ್ಲ.**

**ಜಗದೀಶ ಶೆಟ್ಟರ್,** ಕಾಂಗ್ರೆಸ್ ಶಾಸಕ

## 25 ವರ್ಷಗಳ ಹಿಂದೆ

ಭಾನುವಾರ, 20-12-1998

**● ಬನವಾಸಿಯಲ್ಲಿ ಪಂಪ ಪ್ರಶಸ್ತಿ ಪ್ರದಾನ**

**ಕಾರವಾರ, ಡಿ. 19–** ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಗಳ ಸ್ಮರಣೆಗಳನ್ನು ಜಾಗೃತಿಗೊಳಿಸುವುದು ತೀರಾ ಅಗತ್ಯವಾಗಿದ್ದು, ನಮ್ಮಲ್ಲಿ ಸಾಹಿತ್ಯಿಕ ಪ್ರಜ್ಞೆ ಬೆಳೆಯಬೇಕಾಗಿದೆ ಎಂದು ಹಿರಿಯ ಸಾಹಿತಿ ಡಾ. ಜಿ.ಎಸ್.ಶಿವರುದ್ರಪ್ಪ ಬನವಾಸಿಯಲ್ಲಿ ಒತ್ತಿ ಹೇಳಿದರು.

ಬನವಾಸಿಯ 'ಅಭಿಶಂಕರ ವೇದಿಕೆ'ಯಲ್ಲಿ ಇಂದು ನಡೆದ ಕದಂಬೋತ್ಸವದಲ್ಲಿ ಪಂಪ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

'ಸಂಸ್ಕೃತಿ ಎಂಬುದು ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲ' ಎಂದ ಡಾ. ಶಿವರುದ್ರಪ್ಪ, ತಮಗೆ ದೊರಕಿರುವ ಪ್ರಶಸ್ತಿಯ ಮೊತ್ತವಾದ 1 ಲಕ್ಷ ರೂ.ಗಳನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕ ಉದ್ದೇಶಕ್ಕಾಗಿ ಬಳಸುವುದಾಗಿ ಘೋಷಿಸಿದರು.

**● ಕ್ಲಿಂಟನ್‌ಗೆ ವಾಗ್ದಂಡನೆ**

**ವಾಷಿಂಗ್ಟನ್, ಡಿ. 19 (ಪಿಟಿಐ)–** ಅಮೆರಿಕದ ಪ್ರಜಾಪ್ರತಿನಿಧಿ ಸಭೆ ಇಂದು ಅಧ್ಯಕ್ಷ ಬಿಲ್ ಕ್ಲಿಂಟನ್ ಅವರಿಗೆ ವಾಗ್ದಂಡನೆ ವಿಧಿಸಿತು. ಆದರೂ ಕ್ಲಿಂಟನ್ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ.

ಈ ಐತಿಹಾಸಿಕ ನಿರ್ಧಾರ ಕೈಗೊಂಡ ಅಲ್ಲಿನ ಪ್ರಜಾಪ್ರತಿನಿಧಿ ಸಭೆ, ಮೊನಿಕಾ ಲೆವೆನ್‌ಸ್ಕಿ ಪ್ರಕರಣದಲ್ಲಿ ಜ್ಯೂರಿಗಳ ಎದುರು ಸುಳ್ಳು ಸಾಕ್ಷ್ಯ ನೀಡಿದ್ದಕ್ಕಾಗಿ ಕ್ಲಿಂಟನ್ ಅವರನ್ನು ತಪ್ಪಿತಸ್ಥ ಎಂದು ನಿರ್ಧರಿಸಿತು. ಇದರೊಂದಿಗೆ ಅಮೆರಿಕದ ಇತಿಹಾಸದಲ್ಲೇ ವಾಗ್ದಂಡನೆಗೆ ಗುರಿಯಾದ ಪ್ರಥಮ ಅಧ್ಯಕ್ಷ ಎಂಬ ಕುಖ್ಯಾತಿಗೆ ಕ್ಲಿಂಟನ್ ಪಾತ್ರರಾದರು.

## 50 ವರ್ಷಗಳ ಹಿಂದೆ

ಗುರುವಾರ, 20-12-1973

**● ರಂಗನಾಥ್‌ಗೆ ಸಾರಿಗೆ, ವಸತಿ; ಪೌರಾಡಳಿತ ನಾಯಕರ್‌ಗೆ**

**ಬೆಂಗಳೂರು, ಡಿ. 19–** ರಾಜ್ಯದ ಪುನರ್‌ರಚಿತ ಮಂತ್ರಿಮಂಡಲದ ನೂತನ ಸದಸ್ಯರಾದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ರಂಗನಾಥ್ ಅವರು ಸಾರಿಗೆ ಹಾಗೂ ವಸತಿ, ಎನ್.ರಾಚಯ್ಯನವರು ಸಮುದಾಯ ಅಭಿವೃದ್ಧಿ-ಸಮಾಜ ಕಲ್ಯಾಣ, ಎನ್.ಚಿಕ್ಕೇಗೌಡರು ವ್ಯವಸಾಯ ಮತ್ತು ಪಶುಸಂಗೋಪನೆ ಹಾಗೂ ಸಿ.ಎನ್. ಪಾಟೀಲರು ಸಹಕಾರ ಸಚಿವರುಗಳಾಗಿದ್ದಾರೆ.

ಎಂ.ಮಲ್ಲಿಕಾರ್ಜುನ ಸ್ವಾಮಿ ಅವರು ಶಿಕ್ಷಣ ಸಚಿವರಾಗಿದ್ದಾರೆ. ಆದರೆ ಈ ಖಾತೆಯನ್ನು ಪ್ರತ್ಯೇಕಿಸಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣವನ್ನು ರಾಜ್ಯ ಸಚಿವೆ ಈವಾವಾಜ್ ಅವರಿಗೆ ವಹಿಸಲಾಗಿದೆ. ಡಿ.ಕೆ.ನಾಯಕರ್ ಅವರಿಗೆ ಪೌರಾಡಳಿತ ಖಾತೆ ಕೊಡಲಾಗಿದೆ.

**ಅರಸು ಕಿವಿಮಾತು:** ಇಲಾಖೆಗಳಿಗೆ ಸಚಿವರಿಂದ ಗಹನವಾದ ಗಮನ ಅಗತ್ಯ. ಯೋಜನೆಗಳ ಫಲ ಜನರಿಗೆ ತಲುಪುವುದೇ ಉದ್ದೇಶವಾಗಿರುವಾಗ ಎಲ್ಲ ಇಲಾಖೆಯೂ ಸಮಾನವಾಗಿ ಪ್ರಮುಖವಾದುದು. –ಇದು, ಮುಖ್ಯಮಂತ್ರಿ ದೇವರಾಜ ಅರಸು ತಮ್ಮ ಹೊಸ ಸಚಿವ ಸಹೋದ್ಯೋಗಿಗಳಿಗೆ ಹೇಳಿರುವ ಕಿವಿಮಾತು.

---

'ಬೂಸಾ' ಸರ್ವವ್ಯಾಪಿಯಾಗಿರುವ ಕಾಲಘಟ್ಟದಲ್ಲಿ ಮಾನವೀಯತೆಯನ್ನು ಎಲ್ಲಿ ಹುಡುಕುವುದು?

# ಆಹಾ, ಇದು ಇದುವೆ ಪುರುಷಾಹಂಕಾರಂ...



**ಪಡಸಾಲೆ**

**ರಘುನಾಥ ಚ.ಹ.**

**'ಸ್ತ್ರೀಮತವನುತ್ತರಿಸಲಾಗದೆ** ಧರ್ಮಶಾಸ್ತ್ರದೊಳು?' ಎನ್ನುವುದು ಕೌರವರ ಒಡ್ಡೋಲಗಕ್ಕೆ ಕುಮಾರವ್ಯಾಸನ ದ್ರೌಪದಿ ಕೇಳುವ ಪ್ರಶ್ನೆ. ಅಳಲು, ಆಕ್ರೋಶ, ವಿಷಾದವನ್ನೊಳಗೊಂಡ ಈ ಪ್ರಶ್ನೆ ದ್ವಾಪರದ ದ್ರೌಪದಿಯದಷ್ಟೇ ಅಲ್ಲ, ಎಲ್ಲ ಕಾಲದ ಹೆಣ್ಣುಮಕ್ಕಳದೂ ಹೌದು. ಆದರೆ, ಪುರಾಣ ಇತಿಹಾಸಗಳುದ್ದಕ್ಕೂ ಮತ್ತೆ ಮತ್ತೆ ಅನುರಣಿಸುವ ಈ ಪ್ರಶ್ನೆಗೆ ಉತ್ತರಿಸುವುದು ಯಾರಿಗಾದರೂ ಸಾಧ್ಯವಾಗಿದೆಯೆ? ವರ್ತಮಾನದಲ್ಲೂ ಈಗಲೂ, ಈ ಪ್ರಶ್ನೆ ಧುತ್ತೆಂದು ಎದುರು ನಿಂತಾಗ ಉತ್ತರಿಸುವುದು ನಮಗೆ ಸಾಧ್ಯವಾದೀತೆ?


ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ಬೆತ್ತಲಾಗಿಸಿ, ಬೀದಿಯಲ್ಲಿ ಅಟ್ಟಾಡಿಸಿ, ಥಳಿಸಿದ ಘಟನೆ ನಡೆದಿದೆ. ಆ ಸಂತ್ರಸ್ತ ಮಹಿಳೆ ಕುಮಾರವ್ಯಾಸನ ದ್ರೌಪದಿಯನ್ನು ಅರಿಯದೆ ಹೋದರೂ, ಯಾವುದಾದರೂ ರೂಪದಲ್ಲಿ ಹೊಸ ವಂಟಮೂರಿಯ ಮಹಿಳೆಯ ಮನಸ್ಸಿನಲ್ಲೂ ದ್ರುಪದ ನಂದನೆಯ ಪ್ರಶ್ನೆ ಮೂಡಿರಬಹುದು. ಮಹಾಭಾರತವನ್ನು ಪುಣ್ಯಗ್ರಂಥವೆಂದು ಭಾವಿಸಿರುವ ಈ ದೇಶದಲ್ಲಿ, ಮಹಾಕಾವ್ಯದ 'ದ್ರೌಪದಿ ವಸ್ತ್ರಾಪಹರಣ' ಪ್ರಸಂಗವನ್ನು ಆಗಾಗ ಬೀದಿಗಳಲ್ಲಿ ಸಮಕಾಲೀನಗೊಳಿಸುತ್ತಲೇ ಇರುವಾಗ, ದ್ರೌಪದಿ ಕೇಳಿದ ಪ್ರಶ್ನೆ ಅನುರಣಿಸುವುದು ಹಾಗೂ ಆ ಪ್ರಶ್ನೆಯನ್ನು ಸಮಾಜ ನಿರ್ಲಕ್ಷಿಸುವುದು ಅಸಹಜವೇನೂ ಅಲ್ಲ. ಇದೇ ವರ್ಷದ ಮೇ ತಿಂಗಳಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿ ಸಾಮೂಹಿಕ ಅತ್ಯಾಚಾರವೆಸಗಿದ ಘಟನೆ ಮಣಿಪುರದಲ್ಲಿ ನಡೆದಿತ್ತು. ಇಂಥ ಘಟನೆಗಳು ನಡೆದಾಗಲೆಲ್ಲ ಭಾವುಕ ಪ್ರತಿಕ್ರಿಯೆಗಳು ಸಮಾಜದಲ್ಲಿ ವ್ಯಕ್ತವಾಗುತ್ತವೆ. ಆದರೆ, ಉತ್ತರಿಸಬೇಕಾದವರು ಹಾಗೂ ಘಟನೆಯ ನೈತಿಕ ಹೊಣೆ ಹೊರಬೇಕಾದವರು, ನಡೆದ ಘಟನೆಗೂ ತಮಗೂ ಸಂಬಂಧ ಇಲ್ಲವೆನ್ನುವಂತೆ ಮೌನದ ಮೊರೆಹೋಗುತ್ತಾರೆ; ದುರ್ಯೋಧನನ ಒಡ್ಡೋಲಗದ ಮೂಕಪ್ರೇಕ್ಷಕರಂತೆ. ಕಾಲ ಬದಲಾದರೂ ಪಾತ್ರಗಳು ಬದಲಾದರೂ ಗಂಡಿನ ದರ್ಪ ಮತ್ತು ಅಹಂಕಾರ ಮಾತ್ರ ಕೊಂಚವೂ ಮುಕ್ಕಾಗದೆ ಉಳಿದುಬಂದಿದೆ.

ಕಾಳಜಿ ವಹಿಸಬೇಕಾಗಿದ್ದ ವ್ಯಕ್ತಿಯಿಂದಲೇ ಲೈಂಗಿಕ ದೌರ್ಜನ್ಯ ನಡೆದಿದೆಯೆಂದು ಕುಸ್ತಿಯಾಡುವ ಹೆಣ್ಣುಮಕ್ಕಳು ಬಯಲಿಗೆ ಬಂದು ಅಳಲು ತೋಡಿಕೊಂಡರೂ ಕಣ್ಣೀರಿಟ್ಟರೂ, ಅವರ ಮಾತುಗಳನ್ನು ಆಲಿಸುವ ಕನಿಷ್ಠ ಸೌಜನ್ಯವನ್ನು ಪ್ರಜಾಪ್ರಭುತ್ವದ ಧರ್ಮಸಭೆಯ ಸೂತ್ರಗಳನ್ನು ವಹಿಸಿಕೊಂಡವರು ತೋರಿಸದ ವರ್ತಮಾನಕ್ಕೆ ನಾವು ಸಾಕ್ಷಿ ಆಗಿದ್ದೇವೆ. ಪ್ರಜಾಪ್ರತಿನಿಧಿಗಳ ನಿರ್ಲಕ್ಷ್ಯದೆದುರು ಪ್ರತಿಭಟನೆನಿರತ ಹೆಣ್ಣುಮಕ್ಕಳು ನಿರುಪಾಯರಾಗಿ ಮೂಕರಾದುದು ಈ ದೇಶದ ಎಷ್ಟು ಜನರಲ್ಲಿ ಕಸಿವಿಸಿ ಉಂಟುಮಾಡಿತು? ಹಣೆಗೆ ಕುಂಕುಮ ಧರಿಸದಿರುವ ಮಹಿಳೆಯನ್ನು ಸಾರ್ವಜನಿಕವಾಗಿ ತರಾಟೆಗೆ ತೆಗೆದುಕೊಂಡ ಕೋಲಾರದ ಸಂಸದರ ವರ್ತನೆ ಇನ್ನೂ ಎಷ್ಟು ಜನರಿಗೆ ನೆನಪಿದೆ? ನೈತಿಕತೆಯ ಹೆಸರಿನಲ್ಲಿ ಅನೈತಿಕ ಕೃತ್ಯವನ್ನೆಸಗಿದ ಜನಪ್ರತಿನಿಧಿಯ ಮಾತುಗಳು, ಮಹಿಳೆಯರನ್ನು ಸಂಕೇತಗಳಲ್ಲಿ ಬಂದಿಯಾಗಿರಿಸುವ ಪುರುಷ ಮನಃಸ್ಥಿತಿಯಿಂದ ಕೂಡಿರುವಂತಹದ್ದು; ಮಹಿಳೆಯರ ಸ್ವಂತಿಕೆ ಮತ್ತು ಸ್ವಾಭಿಮಾನವನ್ನು ಅವಮಾನಿಸುವಂತಹದ್ದು.

ಹೆಣ್ಣನ್ನು ಮಿಕದಂತೆ ಕಾಣುವ ಅನಾಗರಿಕ ಕೃತ್ಯ ಹಲವು ರೂಪಗಳಲ್ಲಿ ನಮ್ಮ ನಡುವೆ ಪ್ರಕಟಗೊಳ್ಳುತ್ತಲೇ ಇರುತ್ತದೆ. ಹೊಸ ವಂಟಮೂರಿ ಗ್ರಾಮದ ಬೆತ್ತಲೆ ಪ್ರಕರಣವಿರಲಿ, 'ಅನಿಮಲ್' ಹಿಂದಿ ಚಿತ್ರದಲ್ಲಿನ ಹೆಣ್ಣಿನ ಚಿತ್ರಣವಿರಲಿ, 'ಬಿಗ್ ಬಾಸ್' ಆಟದ ಮನೆಯಲ್ಲಿನ ಗಂಡುಗಳ ಧೋರಣೆಯಿರಲಿ– ಎಲ್ಲೆಡೆ ಇರುವುದೂ ಒಂದೇ ಮನಃಸ್ಥಿತಿ; ಗಂಡು ನಿರ್ಧರಿಸಿದ ಚೌಕಟ್ಟಿನಲ್ಲಿ ಹೆಣ್ಣಿನ ಬಿಂಬ ಹೊಂದಿಕೊಳ್ಳಬೇಕೆನ್ನುವುದು. ಕನ್ನಡದ ಕಿರುತೆರೆಯಲ್ಲೀಗ ಚಾಲ್ತಿಯಲ್ಲಿರುವ ಬಿಗ್ ಬಾಸ್ ಆಟದಲ್ಲಿ ಯುವತಿಯೊಬ್ಬಳನ್ನು ಮನೆಯೊಳಗೆ ಹಾಗೂ ಹೊರಗೆ ನಡೆಸಿಕೊಳ್ಳುತ್ತಿರುವ ರೀತಿ ಕೂಡ, ಗಂಡು ರೂಪಿಸಿರುವ ಚೌಕಟ್ಟಿನೊಳಗೆ ಹೆಣ್ಣು ಅಡಕವಾಗದೆ ಹೋದಾಗ ಉಂಟಾಗುವ ಪ್ರತಿಕ್ರಿಯೆಗಳ ಮೂರ್ತರೂಪವೇ ಆಗಿದೆ. ವ್ಯಕ್ತಿತ್ವಗಳ ಸೌಂದರ್ಯದ ಅನಾವರಣದ ಬದಲು, ವಿಕೃತಿಯ ಅನಾವರಣವನ್ನೇ ಕಿರುತೆರೆಯ ಆಟ ಗುರಿಯಾಗಿಸಿಕೊಂಡಂತೆ ಕಾಣುತ್ತಿದೆ. ಈ ಆಟವನ್ನು ಜನ ಮುಗಿಬಿದ್ದು ನೋಡುತ್ತಿರುವುದು ನಮ್ಮೊಳಗಿನ ಸುಪ್ತ ಕ್ರೌರ್ಯವನ್ನು ತಣಿಸುತ್ತಿರುವ ಸಂಕೇತದಂತಿದೆ.

ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ 'ಅನಿಮಲ್' ಚಿತ್ರದ ಯಶಸ್ಸು ಸಮಾಜದ ನೈತಿಕತೆಯ ಸೋಗಲಾಡಿತನಕ್ಕೆ ಹೊಸತೊಂದು ಉದಾಹರಣೆ. ಸಿನಿಮಾದಲ್ಲಿನ ಹಿಂಸೆ, ನಗ್ನತೆ ಹಾಗೂ ಅಸಭ್ಯತೆಯ ಬಗ್ಗೆ ಸಂಸತ್‌ನಲ್ಲಿಯೂ ಚರ್ಚೆ ನಡೆದಿದೆ. ಬಹುತೇಕ ಸಿನಿಮಾ ವಿಮರ್ಶೆಗಳು 'ಅನಿಮಲ್' ಒಳಗೊಂಡಿರುವ ಪಶು ಮನೋಭಾವವನ್ನು ಪ್ರಶ್ನಿಸಿವೆ. ಇದಾವುದರ ಪರಿವೆಯಿಲ್ಲದೆ ಜನ 'ಅನಿಮಲ್' ಚಿತ್ರವನ್ನು ಮುಗಿಬಿದ್ದು ನೋಡುತ್ತಿದ್ದಾರೆ. ಕಲೆ ಮತ್ತು ಆಟದ ಹೆಸರಿನಲ್ಲಿನ ಹಿಂಸೆ ಒಪ್ಪಿತ ಎನ್ನುವುದಾದರೆ, ಅದು ಬಯಲಿನಲ್ಲಿ ನಡೆದಾಗ ನಾಗರಿಕ ಮನಸ್ಸು ಹೆಚ್ಚೇನೂ ಗಾಸಿಗೊಳ್ಳದು. ಆಟದ ಹೆಸರಿನಲ್ಲಿ, ಕಣ್ಣಿನ ದೃಷ್ಟಿಗೆ ಅಪಾಯ ಉಂಟಾಗುವ ಮಟ್ಟಿಗೆ ಯಾರನ್ನಾದರೂ ಹಿಂಸಿಸುವುದು, ಆಟ ನಡೆಸುವವರು ಹಾಗೂ ನೋಡುವವರಿಗೆ ಆ ವಿಕೃತಿ ಸಹ್ಯ ಎನ್ನಿಸುವುದು ಸಂವೇದನಾರಾಹಿತ್ಯ ಸಮಾಜ ರೂಪುಗೊಳ್ಳುತ್ತಿರುವುದನ್ನು ಕಾಣಿಸುವಂತಿದೆ. ಆಟದಲ್ಲಿ ಗಾಯಗೊಂಡ ಯುವತಿಯ ಬಗ್ಗೆ, ಕೃತ್ಯಕ್ಕೆ ಕಾರಣರಾದವರಲ್ಲಿ ಪ್ರಾಯಶ್ಚಿತ್ತ ಭಾವ ತೋರಿಕೆಗಾದರೂ ಕಾಣಿಸದಿರುವುದು, ಆ ದುರಂತಕ್ಕೆ ಆಕೆಯ ಹಟಮಾರಿತನವೇ ಕಾರಣ ಎಂದವರು ಬಿಂಬಿಸುತ್ತಿರುವುದು ಏನನ್ನು ಹೇಳುತ್ತಿದೆ? ಈ ಘಟನೆಯ ಪಂಚಾಯಿತಿ ಮಾಡಬೇಕಾದ ವ್ಯಕ್ತಿ ಕೂಡ, ತಪ್ಪಿಗೆ ಕಾರಣಗಳನ್ನು ಹುಡುಕುವುದರಲ್ಲಿ ಹಾಗೂ ಆ ತಪ್ಪಿನ ಹೊಣೆಯನ್ನು ಸಾಮೂಹಿಕಗೊಳಿಸುವುದರಲ್ಲಿ ತೋರಿದ ಜಾಣ್ಮೆ ನ್ಯಾಯಸಮ್ಮತವಾಗಿರಲಿಲ್ಲ, ಅಂತಃಕರಣದಿಂದಲೂ ಕೂಡಿರಲಿಲ್ಲ. ಕಣ್ಣುಗಳಿಗೆ ಗಂಭೀರ ಹಾನಿಯಾಗಿ ಚಿಕಿತ್ಸೆ ಪಡೆದಿರುವ ಹೆಣ್ಣುಮಗಳನ್ನು ಆಟದ ಮನೆಯಲ್ಲಿ ಹಟಮಾರಿಯಂತೆ ಬಿಂಬಿಸಲಾಗುತ್ತಿದೆ ಹಾಗೂ ಆ ಹಟಮಾರಿತನವೇ ಆಕೆಯ ಸಂಕಷ್ಟಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಸಾಮಾಜಿಕ ಜಾಲತಾಣದ ಚರ್ಚೆಗಳಲ್ಲಿಯೂ ಕೆಲವರು ಆಕೆಯ ಹಟಮಾರಿತನವನ್ನು ಹೀಯಾಳಿಸುತ್ತಿದ್ದಾರೆ. ಗಂಡನ್ನು ಪ್ರಶ್ನಿಸುವ, ಗಂಡಿನ ಅಹಂಕಾರವನ್ನು ಒಪ್ಪದ ಹೆಣ್ಣುಮಕ್ಕಳ ಮನೋಭಾವ ಮಹಿಳೆಯರಿಗೂ ಹಟಮಾರಿತನದಂತೆ ಕಾಣಿಸುವ ಮಟ್ಟಿಗೆ ನಮ್ಮ ಸಮಾಜ ಪುರುಷಪಕ್ಷಪಾತಿಯಾಗಿದೆ. ಈ ಧೋರಣೆ ಬಿಗ್ ಬಾಸ್ ಆಟದಲ್ಲೂ ಕಾಣಿಸುತ್ತಿದೆ. ಕನ್ನಡ ಕಿರುತೆರೆಯ ಬಿಗ್ ಬಾಸ್ ಆಟದಲ್ಲಿನ ಕಳೆದ ಒಂಬತ್ತು ಆವೃತ್ತಿಗಳಲ್ಲಿ ಒಮ್ಮೆಯಷ್ಟೇ ಮಹಿಳಾಸ್ಪರ್ಧಿ ಗೆದ್ದಿರುವುದು, ಆ ಆಟ ಎಷ್ಟರಮಟ್ಟಿಗೆ ಪುರುಷಪಕ್ಷಪಾತಿಯಾಗಿದೆ ಎನ್ನುವುದನ್ನು ಹೇಳುವಂತಿದೆ.

ಕನ್ನಡ ಸಾಹಿತ್ಯದಲ್ಲಿ ತುಂಬಿಕೊಂಡಿರುವ ಬೂಸಾವನ್ನು ಬಿ. ಬಸವಲಿಂಗಪ್ಪನವರು ಎತ್ತಿ ತೋರಿಸಿದ ಚಾರಿತ್ರಿಕ ಘಟನೆಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭವಿದು. ಈ ಐವತ್ತು ವರ್ಷಗಳಲ್ಲಿ ಸಾಹಿತ್ಯದಲ್ಲಿನ ಬೂಸಾ ಕಡಿಮೆಯಾಗಿದೆಯೆ? ಇಲ್ಲ, ಆ ಬೂಸಾ ಸಾಹಿತ್ಯದಾಚೆಗೂ ಹರಡಿಕೊಂಡಿದೆ, ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲೂ ತುಂಬಿಕೊಂಡಿದೆ. ರಾಜಕಾರಣಿಗಳಿಗಂತೂ ಬೂಸಾ ರುಚಿಕರ ಹಾಗೂ ಲಾಭಕರವಾಗಿದೆ. ಈ ಬೂಸಾ ಕಾಲಘಟ್ಟದಲ್ಲಿ ಮಾನವೀಯತೆಯನ್ನು, ಹೃದಯ ಸಂವಾದವನ್ನು ಎಲ್ಲಿ, ಯಾರಲ್ಲಿ ಹುಡುಕುವುದು?



ಮತ್ತೆ ಕುಮಾರವ್ಯಾಸನ ಮಾತಿಗೆ ಬರೋಣ. 'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳು?' ಎಂದು ಕುಮಾರವ್ಯಾಸನ ದ್ರೌಪದಿ ಕೇಳಿದ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿದೆಯೆ? ಉತ್ತರದ ಮಾತಿರಲಿ, ಆ ಪ್ರಶ್ನೆಯನ್ನು ಸಾವಧಾನದಿಂದ ಎದುರುಗೊಳ್ಳುವಷ್ಟು ಸಹೃದಯತೆಯನ್ನಾದರೂ ನಾವು ಉಳಿಸಿಕೊಂಡಿದ್ದೇವೆಯೆ? ಕೌರವನ ಒಡ್ಡೋಲಗದಲ್ಲಿನ ಹಿರಿಯರಿಗೆ ದ್ರೌಪದಿಯ ಪ್ರಶ್ನೆಯಿಂದ ಗಂಟಲುಕಟ್ಟಿತು, ಎದೆಗೆ ನೈತಿಕತೆಯ ಮುಳ್ಳು ನಾಟಿತು. ಈ ಹೊತ್ತು, ಪ್ರಶ್ನೆ ಕೇಳುವ ಹೆಣ್ಣುಮಕ್ಕಳನ್ನು ಗಯ್ಯಾಳಿಗಳೆಂದು ಕರೆದು, ಅವರ ಬಾಯಿ ಮುಚ್ಚಿಸಲಾಗುತ್ತದೆ. ನೋವುಂಡವರಿಗೆ ತಮ್ಮ ಸಂಕಟವನ್ನು ಹೇಳಿಕೊಳ್ಳುವ ಅವಕಾಶವನ್ನೇ ಕೊಡದೆ, ಪ್ರಶ್ನೆಗಳ ಕೂರಂಬುಗಳನ್ನು ಅವರ ಮೇಲೆ ತೂರಲಾಗುತ್ತಿದೆ. ಮಾತಿನ ದಾಳಿಯ ಮೂಲಕ, ಅನುಭವಿಸಿದ ನೋವು 'ಕೇವಲ'ವೆನ್ನಿಸುವಂತೆ ಮಾಡುವ ರಾಜಕೀಯ ಚತುರತೆ ಜನಸಾಮಾನ್ಯರಿಗೂ ಸಿದ್ಧಿಸಿದೆ.

'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳು?' ಎಂದು ದ್ರೌಪದಿಗೆ ಬಾಯಿ ಕೊಟ್ಟ ಕವಿಯೇ ಹೇಳಿರುವ ಮತ್ತೊಂದು ಮಾತು: 'ಅರಸು ರಾಕ್ಷಸ ಮಂತ್ರಿಯೆಂಬುವ/ ಮೊರೆವ ಹುಲಿ ಪರಿವಾರ ಹದ್ದಿನ/ ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು.'

---

## ಚುರುಮುರಿ



# 'ಅತಿಥಿ' ಅಳಲು!

• ಮಣ್ಣೆರಾಜು

**'ಸರ್ಕಾರದ** ಗಮನ ಸೆಳೆಯಲು ಇವತ್ತು ತಮಟೆ ಬಾರಿಸಿ ಚಳವಳಿ ಮಾಡ್ತೀವಿ' ಅಂದ್ರು ಅತಿಥಿ ಉಪನ್ಯಾಸಕ ಶಂಕ್ರಿ.

'ನಿನ್ನೆ ಪ್ರತಿಭಟನಾ ಸ್ಥಳದಲ್ಲಿ ತರಕಾರಿ ಮಾರಾಟ ಮಾಡಿದ್ರಿ, ಅಲ್ವಾ? ವ್ಯಾಪಾರದಲ್ಲಿ ಲಾಭ ಬಂತಾ?' ಪತ್ನಿ ಸುಮಿ ಕೇಳಿದರು.

'ಹೌದು. ಸ್ಥಳಕ್ಕೆ ಬಂದಿದ್ದ ಅಧಿಕಾರಿಗಳು ಅಹವಾಲು ಸ್ವೀಕರಿಸಿ, ತರಕಾರಿಯನ್ನೂ ಕೊಂಡುಕೊಂಡರು, ನನಗೆ ನೂರೈವತ್ತು ರೂಪಾಯಿ ಲಾಭ ಬಂತು, ಮನೆ ಖರ್ಚಿಗೆ ಇಟ್ಕೋ' ದುಡ್ಡು ಕೊಟ್ಟರು.

'ಅತಿಥಿ ಉಪನ್ಯಾಸಕ್ಕಿಂತ ತರಕಾರಿ ಮಾರುವುದೇ ಲಾಭದಾಯಕ ಕಣ್ರೀ!'

'ನಮ್ಮ ಕೆಲ ಉಪನ್ಯಾಸಕರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು'.

'ಲಂಚ್ ಬಾಕ್ಸ್ ಕೊಡ್ತೀನಿ, ಪ್ರತಿಭಟನೆ ಬ್ರೇಕ್‌ನಲ್ಲಿ ಊಟ ಮಾಡಿಕೊಳ್ಳಿ'.

'ಬೇಡ, ನಾವು ಉಪವಾಸ ಇರುತ್ತೇವೆ'.

'ನೀವು ಉಪವಾಸವಿದ್ದರೆ ನನಗೆ ಊಟ ಸೇರುತ್ತೇನ್ರೀ? ಮನೇಲಿ ನಾನೂ ಉಪವಾಸವಿದ್ದು ಮೌನ ಪ್ರತಿಭಟನೆ ಮಾಡ್ತೀನಿ'.

'ಮುಂದಿನ ಹಂತದ ಹೋರಾಟದಲ್ಲಿ ಉಪನ್ಯಾಸಕರ ಕುಟುಂಬದವರೂ ಪಾಲ್ಗೊಳ್ಳಲು ಅವಕಾಶ ಇರುತ್ತೆ, ಆಗ ಮಾಡುವೆಯಂತೆ'.

'ಶಾಲೆ ಬಿಟ್ಟ ಮಕ್ಕಳನ್ನು 'ಮರಳಿ ಬಾ ಶಾಲೆಗೆ' ಎಂದು ಕರೆಯುವ ಸರ್ಕಾರ, 'ಮರಳಿ ಬಾ ಕಾಲೇಜಿಗೆ' ಅಂತ ಅತಿಥಿ ಉಪನ್ಯಾಸಕರನ್ನು ಕರೆಯಲಿಲ್ವಾ?'

'ಬೇಡಿಕೆ ಈಡೇರಿಸಿದರೆ ಕರೆಯದಿದ್ದರೂ ಹೋಗ್ತೀವಿ'.

'ಬಾಕಿ ಇರುವ ಫೀಸ್ ಕಟ್ಟಿ ಎಂದು ಮಗಳ ಸ್ಕೂಲ್ ಟೀಚರ್ ಫೋನ್ ಮಾಡಿದ್ರು'.

'ನನಗೂ ಫೋನ್ ಮಾಡಿದ್ರು. ಫೀಸ್ ಕಟ್ಟದಿದ್ದರೆ ಆಡಳಿತ ಮಂಡಳಿಯವರು ನಮ್ಮ ಸಂಬಳ ಕಟ್ ಮಾಡ್ತಾರೆ ಅಂತ ಗೋಳಾಡಿದರು'.

'ಮೂರು ತಿಂಗಳ ಮನೆ ಬಾಡಿಗೆ ಬಾಕಿ ಇದೆ. ಬಾಡಿಗೆ ಕೊಡಿ ಇಲ್ಲವೆ ಮನೆ ಖಾಲಿ ಮಾಡಿ, ಇಲ್ಲದಿದ್ದರೆ ಮನೆ ಮುಂದೆ ಜಾಗಟೆ ಬಾರಿಸಿ ಗಲಾಟೆ ಮಾಡ್ತೀವಿ ಅಂತ ಓನರ್ ಹೆಂಡ್ತಿ ಆವಾಜ್ ಹಾಕಿದ್ರೂರೀ' ಸುಮಿ ಕಳವಳಗೊಂಡರು.

---

## ಸಂಗತ

# ಏಕತೆ: ನಮಗಾಗಿ, ಎಲ್ಲರಿಗಾಗಿ

### ನಮ್ಮ ಆಚಾರ– ವಿಚಾರಗಳು, ಕೌಶಲ, ಆಸಕ್ತಿ ಒಂದೇ ತರಹ ಇದ್ದರೆ ಪರಸ್ಪರ ಕಲಿಯುವುದಕ್ಕಾದರೂ ಏನಿದೆ? ಹಾಗಾಗಿ, ವೈವಿಧ್ಯವೇ ಜೀವಾಳ

• ಯೋಗಾನಂದ

**ಕಡ್ಡಿಯನ್ನು** ಮುರಿದಂತೆ ಕಡ್ಡಿಗಳ ಕಟ್ಟನ್ನು ಮುರಿಯಲಾಗದು. ಒಗ್ಗಟ್ಟಿನಲ್ಲಿ ಬಲವಿದೆ ಎಂದು ಬೋಧಿಸಲು ಈ ನಿದರ್ಶನ ಘನವಾಗಿದೆ. ಕಂಟಕಗಳು ಕಾಡಿದಾಗ ದೇಶ, ರಾಜ್ಯಗಳ ನಡುವೆ ಏನೇ ವಾದ, ವ್ಯಾಜ್ಯಗಳಿರಲಿ ಅವನ್ನು ಬದಿಗೊತ್ತಿ ಸ್ವಯಂಪ್ರೇರಣೆಯ ಸಹಾಯ ಹಸ್ತಗಳು ಚಾಚಿರುತ್ತವೆ.

ಟರ್ಕಿಯಲ್ಲಿ ಇತ್ತೀಚೆಗೆ ಘೋರ ಭೂಕಂಪವಾದಾಗ ಭಾರತ ಕೂಡಲೇ ಆಹಾರ, ಔಷಧಿ, ಬಟ್ಟೆಯಂತಹ ಅಗತ್ಯ ಸಾಮಗ್ರಿಗಳನ್ನು ಕಳಿಸಿ ಕೊಟ್ಟಿತು. ಚೆನ್ನೈನಲ್ಲಿ ಮಳೆ ಅವಾಂತರವಾದಾಗ ಬೆಂಗಳೂರಿನ ಹಲವು ಮನೆಗಳಲ್ಲಿ ಚಪಾತಿಗಳು ಬೆಂದವು. ಟಿ.ವಿ. ಚಾನೆಲ್ಲುಗಳ ಕಚೇರಿಗಳತ್ತ ಜನ ಸಿದ್ಧಆಹಾರ, ಸ್ವೆಟರ್, ಸೋಪು, ರಗ್ಗು, ಕಂಬಳಿಗಳಿದ್ದ ಬಂಡಲ್‌ಗಳ ಸಮೇತ ಧಾವಿಸಿದರು. ಮಿಡಿದ ಮಂದಿ ನಾನು ತಾನೆಂದು ಸರದಿ ಸಾಲಿನಲ್ಲಿ ನಿಂತರು. ಜನರಿಗೆ ಜನರು ಆಗುವುದೆಂದರೆ ಇದೇ ಅಲ್ಲವೇ ಅಂತ ಮೂಗಿನ ಮೇಲೆ ಕೈಯಿಟ್ಟ ಇತರರೂ ಕೈಕಟ್ಟಿ ಕೂರದೆ ಯಥೋಚಿತ ಪರೋಪಕಾರಕ್ಕೆ ಮುಂದಾದರು.

ಧರ್ಮಸ್ಥಳದಲ್ಲಿ ನೇತ್ರಾವತಿ ನದಿ ಬತ್ತಿದಾಗ ಜನರ ಸ್ಪಂದನ ಹೃದಯಸ್ಪರ್ಶಿಯಾಗಿತ್ತು. ಜನ ದೂರದ ಊರುಗಳಿಂದಲೂ ದೊಡ್ಡ ದೊಡ್ಡ ನೀರಿನ ಬಾಟಲಿಗಳನ್ನು ಲಾರಿಗಳಲ್ಲಿ ಪೇರಿಸಿಕೊಂಡು ಹೋಗಿ ಅಲ್ಲಿಗೆ ಅರ್ಪಿಸಿದರು. ಕೋವಿಡ್‌-19 ಕಾಡಿದಾಗ ಜಗತ್ತಿನ ಜನರೆಲ್ಲ ಒಂದಾಗಿ ಅದನ್ನು ಎದುರಿಸಿದರು. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರು 'ಕೋವಿಡ್ ವ್ಯಾಧಿಯ ವಿರುದ್ಧ ಮನುಷ್ಯರೆಲ್ಲ ಒಟ್ಟಿಗೇ ನಿಲ್ಲದಿದ್ದರೆ ಅದು ಕೋವಿಡ್ ವ್ಯಾಧಿಗಿಂತಲೂ ಭಯಾನಕವಾದುದು' ಎಂದಿದ್ದೇ ಎಲ್ಲರ ಐಕಮತ್ಯಕ್ಕೆ ಪ್ರೇರಣೆಯಾಯಿತು. ಜೆಕ್ ಗಣರಾಜ್ಯದಲ್ಲಿ ನೆಲೆಸಿರುವ ಜೆಕ್ ವಿಯಟ್ನಾಮೀಸ್ ಸಮುದಾಯ ಹೊಲಿಗೆ ಯಂತ್ರಗಳಲ್ಲಿ ಹಗಲಿರುಳು ಮಗ್ನವಾಯಿತು, ಲಕ್ಷಗಟ್ಟಲೆ ಮುಖಗವಸುಗಳನ್ನು ಸಿದ್ಧಪಡಿಸಿತು. ಜಗತ್ತಿನಲ್ಲಿ ಪ್ರತಿಯೊಬ್ಬರೂ ಸುರಕ್ಷಿತವಾಗಿರುವ ತನಕ ಯಾರೂ ಸುರಕ್ಷಿತರಲ್ಲ ಎಂಬ ನಿಲುವಿಗೆ ಮಂದಿ ಪಣತೊಟ್ಟರು.

ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಎಂಬ ತತ್ವದಡಿ ನಾವು ಒಂದು ಬಾಗಿಲು ತೆರೆದರೆ, ಅದು ಎಲ್ಲ ಬಾಗಿಲುಗಳನ್ನೂ ತೆರೆಯುತ್ತದೆ. ವ್ಯಕ್ತಿಗಳೆಂದು ಭಾವಿಸದೆ ನೊಂದವರಿಗೆ ಸಹಾಯ ಮಾಡಿದರೆ ಅದು ಏಕತೆಯಲ್ಲ, ದಯೆ. ಯಾವುದೇ ಶ್ರೇಷ್ಠ ಕಾರ್ಯ, ಆವಿಷ್ಕಾರ ನಿರ್ವಾತದಲ್ಲಿ ಆಗಿಲ್ಲ. ಅದು ಸಾಧ್ಯವಾಗುವುದು ನಮ್ಮ ಒಗ್ಗಟ್ಟಿನ ಪರಿಶ್ರಮದಲ್ಲಿ. ನಮ್ಮ ಒಬ್ಬೊಬ್ಬರಿಂದಲೂ ನಾವು ಎನ್ನುವುದು ಆಗಿದೆ.

ನಮ್ಮ ಆಚಾರ ವಿಚಾರಗಳು, ಕೌಶಲ, ಆಸಕ್ತಿ ಒಂದೇ ತರಹ ಇದ್ದರೆ ಪರಸ್ಪರ ಕಲಿಯುವುದಕ್ಕಾದರೂ ಏನಿದೆ? ಹಾಗಾಗಿ ವೈವಿಧ್ಯವೇ ಜೀವಾಳ. ನಮ್ಮ ದೃಷ್ಟಿ, ಚಿಂತನೆ, ಗ್ರಹಿಕೆಗಳು ಭಿನ್ನ ವಿಭಿನ್ನವಾಗಿರುವುದೇ ಅದ್ಭುತ ಚೈತನ್ಯ. ಪ್ರತಿಯೊಬ್ಬ ವಿಶ್ವಪ್ರಜೆಯಲ್ಲೂ ಒಂದೊಂದು ಕಥೆ, ನೋವು, ಹಿಗ್ಗು ಇರುತ್ತದೆ. ಅವೆಲ್ಲವನ್ನೂ ಹಂಚಿಕೊಳ್ಳಬೇಕು, ಸಡಗರಿಸಬೇಕು. ಜಾಗತಿಕವಾಗಿ ನಂಬಿಕೆಗಳು, ಸಂಸ್ಕೃತಿಗಳು, ದೌರ್ಬಲ್ಯಗಳು, ಧ್ಯೇಯಗಳು ಬೆರೆಯಬೇಕು. ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಒಗ್ಗಟ್ಟು ಬಲಗೊಂಡಷ್ಟೂ ಬಡತನ, ರೋಗರುಜಿನ, ಅನಕ್ಷರತೆಗೆ ಪರಿಹಾರ ಸುಲಭವಾಗುತ್ತದೆ. ಭೂಗ್ರಹದ ಮಾನವರೆಲ್ಲ ಒಂದಾದರೆ ಪ್ರಾಕೃತಿಕ ವಿಕೋಪಗಳನ್ನು ಮಾತ್ರವಲ್ಲ, ಮನುಷ್ಯಕೃತ ಸಮರ, ಅಶಾಂತಿ, ಪರಿಸರ ಮಾಲಿನ್ಯ, ಅತಿವೃಷ್ಟಿ, ಅನಾವೃಷ್ಟಿಯನ್ನೆಲ್ಲ ಸುಲಭವಾಗಿ ಎದುರಿಸಬಹುದು.

ಒಂದರ್ಥದಲ್ಲಿ ನೈಸರ್ಗಿಕ ವಿಕೋಪಗಳೇ ಜನರನ್ನು ಏಕತೆಗೆ ಪ್ರೇರೇಪಿಸುವುದು. ಸಮಗ್ರ ಜಾಗೃತಿ, ಪೂರ್ವಸಿದ್ಧತೆ ಮತ್ತು ಮುನ್ನೆಚ್ಚರಿಕೆಗಳಿಂದ ಭೂಕಂಪ, ಸುನಾಮಿ, ಚಂಡಮಾರುತ, ನೆರೆಯಂತಹ ಸವಾಲುಗಳನ್ನು ತಗ್ಗಿಸಬಹುದು. ವಿಶ್ವಸಂಸ್ಥೆಯು 2005ರಲ್ಲಿ ನಿಶ್ಚಯಿಸಿದಂತೆ, ಪ್ರತಿವರ್ಷ ಡಿಸೆಂಬರ್ 20ರಂದು 'ವಿಶ್ವ ಮಾನವ ಒಗ್ಗಟ್ಟಿನ ದಿನ' ಆಚರಿಸಲಾಗುತ್ತದೆ. ಈ ಬಾರಿಯ ಧ್ಯೇಯವಾಕ್ಯ 'ಸುಧಾರಣೆಗಾಗಿ ವಕಾಲತ್ತು ವಹಿಸಿ'. ಮಾನವ ಏಕತೆಯು ಸಮಾನತೆ, ಒಳಗೊಳ್ಳುವಿಕೆ ಹಾಗೂ ಸಾಮಾಜಿಕ ನ್ಯಾಯ ಆಧಾರಿತ ಮಾನವೀಯ ಮೌಲ್ಯ.



ಯಾವುದೇ ಬಗೆಯ ವೈವಿಧ್ಯವು ಜನರ ಒಗ್ಗಟ್ಟನ್ನು ಬಾಧಿಸಬಾರದು. ಇನ್ನೊಬ್ಬರ ಮೇಲೆ ನಮ್ಮ ಅಭಿಪ್ರಾಯಗಳನ್ನು ಹೇರದೆ ನಾವು ನಾವಾಗಿರಬೇಕು. ಈ ದಿಸೆಯಲ್ಲಿ ಭಾರತ ವಿಶ್ವಕ್ಕೇ ಮಾದರಿಯಾದ ದೇಶ. ಪರಮ ಸಹಿಷ್ಣುತೆಯಿಂದ ಶತಮಾನಗಳಿಂದಲೂ ಧರ್ಮ, ಜಾತಿ, ವರ್ಗ, ಪಂಥ, ಪಂಗಡ ಮೀರಿ ಇಲ್ಲಿ ಜನ ಬದುಕುತ್ತಿದ್ದಾರೆ. ಋಗ್ವೇದದಲ್ಲಿ ಹೇಳಿರುವ 'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ' ಪರಿಕಲ್ಪನೆಗಿಂತ ಉದಾಹರಣೆ ಬೇಕಿಲ್ಲ.

ಇಂಗ್ಲಿಷ್ ಪ್ರಬಂಧಕಾರನಾಗಿದ್ದ ಎಮರ್ಸನ್‌ನ ಅಭಿಪ್ರಾಯದಂತೆ, ಜಗತ್ತಿನಲ್ಲಿ ಏಕತೆಯ ಕೊರತೆ ಏಕೆಂದರೆ ಮನುಷ್ಯ ಸ್ವತಃ ತನ್ನೊಳಗೇ ಸಂಘರ್ಷವನ್ನು ಎದುರಿಸುತ್ತಿದ್ದಾನೆ. ಪರರ ಭಿನ್ನ ಭಿನ್ನ ಬೇಕು, ಬೇಡಗಳನ್ನು ಗೌರವಿಸಿದಾಗ ಏಕತೆ ಯಶಸ್ವಿಯಾಗುತ್ತದೆ. ಏಕತೆ ಮತ್ತು ಸ್ಥಿರತೆ ಒಂದೇ ನಾಣ್ಯದ ಎರಡು ಮುಖಗಳು. ವರ್ಣಭೇದದ ನಿವಾರಣೆ ವರ್ಣಭೇದದಿಂದಲ್ಲ, ಏಕತೆಯಿಂದ. ಮಾನವರೆಲ್ಲ ಒಂದೇ ಎಂಬ ಮಾನಸಿಕ ಪ್ರಜ್ಞೆ ಇಂದು ಜಗತ್ತನ್ನು ಕಾಡುತ್ತಿರುವ ಅನೇಕ ಸವಾಲುಗಳನ್ನು ಬಗ್ಗುಬಡಿಯಬಲ್ಲದು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಆದಿಕವಿ ಪಂಪ ಸಾರಿ ವರ್ಷಗಳೇ ಸಂದಿವೆ. ಐಕಮತ್ಯ ಎನ್ನುವುದು ಗುಂಪುಗಾರಿಕೆಯಲ್ಲ. ಅದು ವ್ಯಕ್ತಿಗಳನ್ನು ಸಮಾಜದ ಮೂಲವೆಂದು ಪರಿಭಾವಿಸುತ್ತದೆ, ಬದುಕಿನ ಪ್ರತಿಕೂಲಗಳನ್ನು ವಿರೋಧಿಸುತ್ತದೆ. ಪರಸ್ಪರ ಹಕ್ಕುಗಳಿಗಾಗಿ ಹೋರಾಟ, ಕನಿಷ್ಠತಮ ಸಂಘರ್ಷ, ಅಗತ್ಯವಾದಾಗ ನೆರವು- ಇವು ಮಾನವ ಏಕತೆಯ ಮುಖ್ಯ ಗುರಿಗಳು. ಜಾಗತಿಕ ಏಕತೆಯಿಲ್ಲದೆ ಮಾನವ ಹಕ್ಕುಗಳು ಈಡೇರವು.

---

## ವಾಚಕರ ವಾಣಿ

### ದಂಡದ ಅಸ್ತ್ರ ಸ್ವಾಗತಾರ್ಹ

ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶ ಅತ್ಯಂತ ಶ್ಲಾಘನೀಯ. ಪ್ರಕರಣವನ್ನು ಮೌನವಾಗಿ ನೋಡುತ್ತಾ ಸಂತ್ರಸ್ತೆಯ ರಕ್ಷಣೆಗೆ ಧಾವಿಸದಿರುವುದು ಸಾಮಾಜಿಕ ಹೊಣೆಗಾರಿಕೆ ಇಲ್ಲದ ವರ್ತನೆಯಾಗಿದ್ದು, ಅಂತಹ ಗ್ರಾಮಸ್ಥರಿಗೆ ದಂಡ ವಿಧಿಸುವಂತೆ ಕೋರ್ಟ್ ಸೂಚನೆ ನೀಡಿರುವುದು ಸಮಂಜಸವಾಗಿದೆ.

ಮಹಿಳೆಯರೊಂದಿಗೆ ಹೇಗೆ ವರ್ತಿಸಬೇಕು ಎನ್ನುವುದನ್ನು ಪುರುಷರಿಗೆ ಕಲಿಸಬೇಕಾಗಿದೆ ಎನ್ನುವ ಅಭಿಪ್ರಾಯವು ಸರಿಯಾಗಿದೆ. ನಮ್ಮ ಸಮಾಜದಲ್ಲಿ ಒಳ್ಳೆಯವರೂ ಇದ್ದಾರೆ ದುಷ್ಟರೂ ಇದ್ದಾರೆ. ಈ ದುಷ್ಟ ದುಶ್ಯಾಸನರು ಹೆಣ್ಣುಮಕ್ಕಳನ್ನು ಸಾರ್ವಜನಿಕವಾಗಿ ಅವಮಾನಿಸುವ ಪ್ರಕರಣಗಳು ಹಳೆಯವೆ. ನಾಗರಿಕ ಸಮಾಜದಲ್ಲಿ ಅನಾಗರಿಕರಂತೆ ಅಪಮಾನ ಮಾಡಿ ಬೀಗುವ, ಅಮಾಯಕರ ಮೇಲೆ ಸವಾರಿ ನಡೆಸುವ ಇಂಥ ಖಳರ ಹೆಡೆಮುರಿ ಕಟ್ಟಲು ಈ ಬಗೆಯ ಐತಿಹಾಸಿಕ ಆದೇಶಗಳು ಬರಬೇಕು.

**ಸುಮಾವೀಣಾ,** ಹಾಸನ

### ಒಬ್ಬರಿಗೆ ಆಹ್ವಾನ, ಇಬ್ಬರಿಗೆ ತಿರಸ್ಕಾರ!

ಅಯೋಧ್ಯೆಯ ರಾಮಮಂದಿರದಲ್ಲಿ ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಆಹ್ವಾನಿಸಲಾಗಿದ್ದು, ಎಲ್.ಕೆ. ಅಡ್ವಾಣಿ ಮತ್ತು ಮುರಳಿಮನೋಹರ ಜೋಷಿ ಅವರಿಗೆ ವಯಸ್ಸು ಹಾಗೂ ಆರೋಗ್ಯದ ಕಾರಣದಿಂದ ಕಾರ್ಯಕ್ರಮಕ್ಕೆ ಬಾರದಂತೆ ರಾಮಮಂದಿರ ಟ್ರಸ್ಟ್ ಮನವಿ ಮಾಡಿರುವ ಸುದ್ದಿ ಕುರಿತು ಚರ್ಚೆಯಾಗುತ್ತಿದೆ. ವಯಸ್ಸಿನ ಕಾರಣಕ್ಕೆ ಅವರಿಬ್ಬರನ್ನೂ ಬರಬೇಡಿ ಎನ್ನುವುದಾದರೆ ಅದು ದೇವೇಗೌಡರಿಗೂ ಅನ್ವಯವಾಗಬೇಕಿತ್ತು. ಇದು ಒಂದುಕಡೆ ಇರಲಿ.

ರಾಮಮಂದಿರದ ಹೆಸರಿನಲ್ಲಿ ಇಟ್ಟಿಗೆ ಯಾತ್ರೆ ನಡೆದ ನಂತರ ತುಮಕೂರಿನಲ್ಲಿ ಜನತಾ ಪರಿವಾರದ ಸಾರ್ವಜನಿಕ ಸಭೆ ನಡೆದಿತ್ತು. ಎಚ್.ಡಿ.ದೇವೇಗೌಡರು ಭಾಷಣ ಮಾಡಲು ಎದ್ದಾಗ ಸಭಿಕರೊಬ್ಬರು ಒಂದು ಚೀಟಿ ನೀಡಿದರು. ಅದರಲ್ಲಿದ್ದ ವಿಷಯ 'ಇಟ್ಟಿಗೆ ಯಾತ್ರೆಯ ಇಟ್ಟಿಗೆಗಳು ಏನಾದವು?' ಎಂಬುದಾಗಿತ್ತು. ಅದರ ಬಗ್ಗೆಯೇ ಮಾತನಾಡಿದ ದೇವೇಗೌಡರು, 'ನಿಮ್ಮಿಂದ ರಾಮಮಂದಿರಕ್ಕೆಂದು ಇಟ್ಟಿಗೆ ಮತ್ತು ಹಣ ಸಂಗ್ರಹಿಸಿದರಲ್ಲ, ಅದು ಯಾವ ಚರಂಡಿಯಲ್ಲಿರಬಹುದು, ಯಾವ ಮೆಟ್ಟಿಲಿಗೆ ಬಳಕೆಯಾಗಿರಬಹುದು, ಎಲ್ಲಿ ಅನಾಥವಾಗಿ ಬಿದ್ದಿರಬಹುದು?' ಎಂದು ವ್ಯಂಗ್ಯವಾಗಿ ಮಾತನಾಡಿ ಝಾಡಿಸಿದ್ದರು. ಆದರೆ ಅದೇ ದೇವೇಗೌಡರನ್ನು ಅದೇ ವಿಶ್ವ ಹಿಂದೂ ಪರಿಷತ್ತಿನವರು ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ಬಹುಶಃ ದೇವೇಗೌಡರು ಭಾಗವಹಿಸಬಹುದು! ಕಾಲಾಯ ತಸ್ಮೈ ನಮಃ.

**ಈ.ಬಸವರಾಜು,** ಬೆಂಗಳೂರು

### ಕಟ್ಟಡ ಬದಲಾದರೆ ಸಾಲದು...

ಸಂಸತ್ ಭವನದ ಭದ್ರತಾಲೋಪ ಕುರಿತು ಗೃಹ ಸಚಿವರ ಹೇಳಿಕೆಗೆ ಪಟ್ಟು ಹಿಡಿದ ಕಾರಣ, ವಿರೋಧ ಪಕ್ಷಗಳಿಗೆ ಸೇರಿದ, ಲೋಕಸಭೆ ಮತ್ತು ರಾಜ್ಯಸಭೆಯ ಹೆಚ್ಚಿನ ಸಂಸದರನ್ನು ಅಮಾನತುಗೊಳಿಸಲಾಗಿದೆ. ಈ ಹಿಂದೆ ಮಣಿಪುರ ಗಲಭೆಗಳ ಕುರಿತು ಪ್ರಧಾನಿ ಹೇಳಿಕೆಗೆ ಒತ್ತಾಯಿಸಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನೇ ಮಂಡಿಸಲಾಯಿತು. ದೇಶದ ಗಂಭೀರ ವಿಷಯಗಳ ಕುರಿತು ಸರ್ಕಾರ ಸ್ವಯಂಪ್ರೇರಿತ ಹೇಳಿಕೆಗಳನ್ನು ಲೋಕಸಭೆ ಅಥವಾ ರಾಜ್ಯಸಭೆಯಲ್ಲಿ ನೀಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಸತ್ಸಂಪ್ರದಾಯ. ಸದನಗಳಿರುವುದೇ ಮಾತನಾಡಲು, ಚರ್ಚಿಸಲು, ಚಿಂತಿಸಲು. ಹೀಗಾಗಿ, ಮಾತನಾಡಲು ಅಥವಾ ಮಾತನಾಡದೆ ಇರಲು ಯಾರೂ ಪಟ್ಟು ಹಿಡಿಯಬೇಕಾಗಿಲ್ಲ. ಅದು ಯಾರ ಪ್ರತಿಷ್ಠೆಯ ಪ್ರಶ್ನೆಯೂ ಆಗಬೇಕಿಲ್ಲ. ಮಾತುಗಳು ಸೋತಾಗ, ಮುತ್ಸದ್ದಿತನ ಮಾಯವಾದಾಗ ಪ್ರಜಾಪ್ರಭುತ್ವ ವ್ಯವಸ್ಥೆ ಸೊರಗುತ್ತಾ ಹೋಗುತ್ತದೆ. ಪ್ರಜಾಪ್ರಭುತ್ವದ ಅಣಕು ಪ್ರದರ್ಶನಗೊಳ್ಳತೊಡಗುತ್ತದೆ.

ಹಳೆಯ ಸಂಸತ್ ಭವನದ ವರಸೆಗಳು ಹೊಸ ಸಂಸತ್ ಭವನದಲ್ಲೂ ಪುನರಾವರ್ತನೆಗೊಳ್ಳುತ್ತಿವೆ. ಬರೀ ಕಟ್ಟಡ ಬದಲಾದರೆ ಸಾಲದು, ಪ್ರಜಾಪ್ರಭುತ್ವದ ತೇರು ಎಳೆಯುವ ಮನಸ್ಸುಗಳು ಬದಲಾಗಬೇಕಲ್ಲವೇ? ಆಳುವ ಮತ್ತು ವಿರೋಧ ಪಕ್ಷಗಳ ಮಧ್ಯೆ ಅತಿಯಾದ ರಾಜಕೀಯ ಮತ್ತು ಅತಿಯಾದ ಅವಿಶ್ವಾಸ ಇಂತಹ ಎಲ್ಲ ಬೆಳವಣಿಗೆಗಳಿಗೆ ಕಾರಣ. ರಾಜ್ಯ ರಾಜಕಾರಣದಲ್ಲೂ ರಾಷ್ಟ್ರ ರಾಜಕಾರಣದಲ್ಲೂ ಇಂತಹ ಬೆಳವಣಿಗೆಗಳನ್ನೇ ನೋಡುತ್ತಿದ್ದೇವೆ. ಹೀಗೆಯೇ ಮುಂದುವರಿದಲ್ಲಿ ನಮ್ಮ ಪ್ರಜಾಪ್ರಭುತ್ವಕ್ಕೆ ಭವಿಷ್ಯ ಇದೆಯೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡತೊಡಗುತ್ತದೆ.

**ವೆಂಕಟೇಶ ಮಾಚಕನೂರ,** ಧಾರವಾಡ

### ಏಕಾಏಕಿ ಜಾತ್ಯತೀತರಾಗುವುದು ಹೇಗೆ?

'ಲಯ ತಪ್ಪಿದ ವಿಶ್ವವಿದ್ಯಾಲಯ' ಲೇಖನದಲ್ಲಿ (ಚರ್ಚೆ, ಡಿ. 19) ರಾಜಕುಮಾರ ಕುಲಕರ್ಣಿ ಅವರು ಇಂದಿನ ಸರ್ಕಾರಿ ವಿಶ್ವವಿದ್ಯಾಲಯಗಳ ಸ್ಥಿತಿಯನ್ನು ಸ್ಥೂಲವಾಗಿ ವಿವರಿಸಿದ್ದಾರೆ. ಹಲವಾರು ಕಾರಣಗಳಿಂದ ಇಂದು ಅಧೋಗತಿಗೆ ತಲುಪಿರುವ ಈ ವಿಶ್ವವಿದ್ಯಾಲಯಗಳ ಬಗ್ಗೆ ಪುಟಗಟ್ಟಲೆ ಬರೆಯಬಹುದು. ಜಡತ್ವದಲ್ಲಿ ಬೋಧಕರ ಪಾತ್ರ ಏನೂ ಕಮ್ಮಿಯಿಲ್ಲ ಎನ್ನುವ ಮಾತು ಅಕ್ಷರಶಃ ಸತ್ಯ. ಇಂದು ಅವರಿಗೆ ಬೋಧನೆಯಾಗಲೀ ಸಂಶೋಧನೆಯಾಗಲೀ ಆದ್ಯತೆಯ ಕರ್ತವ್ಯವಾಗಿ ಉಳಿದಿಲ್ಲ. ಅನೇಕ ಬೋಧಕರು ವಿವಿಧ ಹುದ್ದೆಗಳಿಗೆ ಲಾಬಿ ಮಾಡುತ್ತಾ ಕಾಲ ಕಳೆಯುವುದನ್ನು ನೋಡಿದರೆ ಹೇಸಿಗೆಯಾಗುತ್ತದೆ. ಪ್ರತಿವರ್ಷ ಸಂಶೋಧನೆಯಲ್ಲಿ ಪ್ರಗತಿ ಸಾಧಿಸುವುದು ಮತ್ತು ಆಡಳಿತದ ಹುದ್ದೆಗಳನ್ನು ಜೇಷ್ಠತೆಯ ಆಧಾರದ ಮೇಲೆ ಮಾತ್ರ ಸ್ವಾಭಾವಿಕವಾಗಿ ಬಡ್ತಿ ಮೂಲಕ ತುಂಬುವಂತೆ ಮಾಡಿದರೆ ಬೋಧಕ ವರ್ಗದವರನ್ನು ಸ್ವಲ್ಪಮಟ್ಟಿಗೆ ನಿಯಂತ್ರಣ ಮಾಡಬಹುದೇನೊ.

ವಿಶ್ವವಿದ್ಯಾಲಯಗಳನ್ನು ಭ್ರಷ್ಟಾಚಾರಮುಕ್ತಗೊಳಿಸಿ ಪ್ರಭುತ್ವದ ಚಹರೆಯಿಂದ ದೂರವಿಟ್ಟು ಬೋಧಕರನ್ನು ಜಾತಿ, ಧರ್ಮದ ಸಂಕೋಲೆಯಿಂದ ಹೊರತರಬೇಕೆಂಬ ಲೇಖಕರ ಮಾತು ಕನಸಿನ ಮಾತಿನಂತೆ ಕಾಣಿಸುತ್ತದೆ. ಕೆಲಸಕ್ಕೆ ಸೇರುವಾಗ ಅಥವಾ ಕೆಲಸವನ್ನು ಕಾಯಂ ಮಾಡಿಸಿಕೊಳ್ಳುವಾಗ ಹಣ ನೀಡಿ, ರಾಜಕೀಯ ಪ್ರಭಾವ ಬೀರಿ, ಜಾತಿ ಧರ್ಮದ ಹೆಸರಿನಲ್ಲಿ ಒತ್ತಡ ಹಾಕಿಸಿ ಬದುಕು ನಡೆಸುತ್ತಿರುವವರಿಗೆ ಅವನ್ನೆಲ್ಲಾ ಒಮ್ಮೆಗೇ ಬಿಟ್ಟುಬಿಡಿ ಎಂದು ಹೇಳಿದರೆ ಪಾಲಿಸಲು ಸಾಧ್ಯವೇ? ಜ್ಞಾನ ದೇಗುಲದ ಆವರಣದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಕಿತಾಪತಿ ಮಾಡುತ್ತಾ ಜಾತಿಯ ಹೆಸರಿನಲ್ಲಿ ಪ್ರತಿಭಟನೆಯನ್ನು ಮಾಡುವ ಹಂತಕ್ಕೆ ಬದಲಾಗಿರುವ ಬೋಧಕ ವರ್ಗ ಏಕಾಏಕಿ ಜಾತ್ಯತೀತರಾಗುವುದು ಹೇಗೆ ಮತ್ತು ಗುಣಮಟ್ಟದ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದು ಹೇಗೆ?

**ಡಾ. ಕೆ.ಎಸ್.ಗಂಗಾಧರ,** ಶಿವಮೊಗ್ಗ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಕೊರೊನಾ ಉಪತಳಿ ಜೆಎನ್.1 ಬೇಕಿಲ್ಲ ದಿಗಿಲು

ಕೆಲಕಾಲದ ವಿರಾಮದ ಬಳಿಕ, ಕೊರೊನಾ ವೈರಾಣುವಿನ ಹೊಸ ಉಪತಳಿ ಜೆಎನ್.1 ಕುರಿತು ಜಗತ್ತಿನಾದ್ಯಂತ ಚರ್ಚೆ ಆರಂಭವಾಗಿದೆ. ಅಮೆರಿಕದಲ್ಲಿ ಮೊದಲು ಕಾಣಿಸಿಕೊಂಡ ಈ ಉಪತಳಿ ಈಗ ಇತರ ಕೆಲವು ದೇಶಗಳಿಗೂ ಹಬ್ಬಿದೆ. ಭಾರತದಲ್ಲಿಯೂ ಕೆಲವು ಪ್ರಕರಣಗಳು ವರದಿಯಾಗಿವೆ. ಬಹುತೇಕ ದೇಶಗಳಲ್ಲಿ ಹೆಚ್ಚಿನ ಜನ ಕೋವಿಡ್ ತಡೆ ಲಸಿಕೆಯನ್ನು ಈಗಾಗಲೇ ಪಡೆದುಕೊಂಡಿದ್ದಾರೆ. ಜೊತೆಗೆ ಜನರಲ್ಲಿ ಕೊರೊನಾ ಸೋಂಕು ನಿರೋಧಕ ಶಕ್ತಿಯೂ ಬೆಳೆದಿದೆ. ಹಾಗಾಗಿ, ಹೊಸ ಉಪತಳಿಯು ಹೆಚ್ಚು ಅಪಾಯ ಉಂಟುಮಾಡದು ಎಂದು ಪರಿಣತರು ಅಂದಾಜಿಸಿದ್ದಾರೆ. ದಿಗಿಲಾಗುವ ಅಗತ್ಯ ಇಲ್ಲ, ಆದರೆ ಎಚ್ಚರ ಇರಲಿ ಎಂಬುದೇ ಪರಿಣತರು ಜನರಿಗೆ ನೀಡುವ ಸಲಹೆ. ಹೊಸ ಉಪತಳಿ ಕುರಿತ ವಿವರಗಳು ಇಲ್ಲಿವೆ

ಪ್ರಜಾವಾಣಿ ವಾರ್ತೆ

ಮತ್ತೊಮ್ಮೆ ಚಳಿಗಾಲ ಬಂದಿದೆ. ಕ್ರಿಸ್‌ಮಸ್, ಹೊಸ ವರ್ಷಾಚರಣೆ ಕೂಡ ಮುಂದಿದೆ. ಇಂಥ ಹೊತ್ತಿನಲ್ಲಿ ಕೊರೊನಾ ವೈರಸ್‌ನ ಹೊಸದೊಂದು ರೂಪ ಜೆಎನ್.1 ಕಾಣಿಸಿಕೊಂಡಿದೆ. ಈ ಕಾರಣದಿಂದ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿಯನ್ನು ನೀಡಿದೆ. ಜೊತೆಗೆ, ಕರ್ನಾಟಕವೂ ತನ್ನದೇ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಹಾಗಿದ್ದರೆ, ಏನಿದು ಜೆಎನ್.1 ಮತ್ತು ಇದು ಎಷ್ಟರಮಟ್ಟಿಗೆ ಸಂಕಷ್ಟ ತಂದೊಡ್ಡಲಿದೆ?

ಮೊದಲಿಗೆ ಕಾಣಿಸಿಕೊಂಡಾಗಿನಿಂದ ಈವರೆಗೆ ಕೊರೊನಾ ವೈರಸ್ ರೂಪಾಂತರಗೊಳ್ಳುತ್ತಲೇ ಸಾಗಿದೆ. ಈ ರೂಪಾಂತರ ಪ್ರಕ್ರಿಯೆ ಈಗ ಇನ್ನಷ್ಟು ವೇಗ ಪಡೆದುಕೊಂಡಿದೆ. ಡೆಲ್ಟಾ, ಒಮೈಕ್ರಾನ್ ಕೊರೊನಾ ವೈರಸ್‌ನ ರೂಪಾಂತರಗೊಂಡ ತಳಿಗಳು. ಇವುಗಳಲ್ಲಿ ಮತ್ತೆ ಹತ್ತು ಹಲವು ಉಪತಳಿಗಳು ರೂಪು ಪಡೆದುಕೊಂಡಿವೆ. ಬಿಎ.2.86 ಒಮೈಕ್ರಾನ್‌ನ ಒಂದು ಉಪತಳಿಯಾಗಿದೆ. ಇದರ ಉಪತಳಿಯೇ ಜೆಎನ್.1 ಆಗಿದೆ. ಬಿಎ.2.86 ಹಾಗೂ ಜೆಎನ್.1 ಉಪತಳಿಗಳ ನಡುವೆ ಹೆಚ್ಚೇನು ಅಂತರವಿಲ್ಲ. ಸೋಂಕಿನ ಮುಳ್ಳು ಚಾಚಿಕೆಗಳಲ್ಲಿ ಸಣ್ಣದೊಂದು ಬದಲಾವಣೆ ಇದೆಯಷ್ಟೇ ಎಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೆರಿಕದ ರೋಗ ನಿಯಂತ್ರಣ ಹಾಗೂ ತಡೆ ಕೇಂದ್ರ (ಸಿಡಿಸಿ) ಹೇಳಿದೆ.


ಜೆಎನ್.1 ಉಪತಳಿಯು ಮೊದಲು ಕಾಣಿಸಿಕೊಂಡಿದ್ದು ಅಮೆರಿಕದಲ್ಲಿ. ಸೆಪ್ಟೆಂಬರ್ ಹೊತ್ತಿಗೆ ಈ ಉಪತಳಿಯು ಅಮೆರಿಕದಲ್ಲಿ ನಿಧಾನಗತಿಯಲ್ಲಿ ಕಾಣಿಸಿಕೊಳ್ಳತೊಡಗಿತು. ಡಿಸೆಂಬರ್‌ನ ಮೊದಲೆರಡು ವಾರಗಳಲ್ಲಿ ಸೋಂಕಿಗೆ ಒಳಗಾಗುವವರಲ್ಲಿ ಶೇ 15–20ರಷ್ಟು ಜನರು ಜೆಎನ್.1 ಉಪತಳಿಯ ಸೋಂಕು ಹೊಂದಿದ್ದರು. ಚೀನಾದಲ್ಲಿಯೂ ಈ ಉಪತಳಿ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ಸಿಂಗಪುರದಲ್ಲಿಯೂ ತೀವ್ರಗತಿಯಲ್ಲಿ ಸೋಂಕು ಕಾಣಿಸಿಕೊಳ್ಳತೊಡಗಿದೆ. ಇದೇ ಕಾರಣಕ್ಕೆ ಅಲ್ಲಿಯೂ ಆರೋಗ್ಯ ಸಚಿವಾಲಯವು ಹೆಚ್ಚು ಎಚ್ಚರದಿಂದ ಇರುವಂತೆ ತಾಕೀತು ಮಾಡಿದೆ. ಬಳಿಕ, ಈ ಉಪತಳಿಯು ಭಾರತಕ್ಕೆ ಕಾಲಿಟ್ಟಿದೆ. ಡಿ.6ರಂದು ಕೇರಳದಲ್ಲಿ 79 ವರ್ಷದ ವೃದ್ಧೆಯಲ್ಲಿ ಈ ಸೋಂಕು ಪತ್ತೆಯಾಯಿತು. ನಂತರ, ಈಗ ಕರ್ನಾಟಕದಲ್ಲಿ ಜೆಎನ್.1 ಉಪತಳಿಯ ಸೋಂಕು ಕೆಲವರಲ್ಲಿ ಪತ್ತೆಯಾಗಿದೆ. ಆದರೆ ಭಾರತದಲ್ಲಿ ಈ ಉಪತಳಿಗೆ ಸಂಬಂಧಿಸಿ ಅಪಾಯಕಾರಿ ಪರಿಸ್ಥಿತಿ ಇಲ್ಲ. ಸೋಂಕು ತಡೆಯುವುದಕ್ಕೆ ಸಂಬಂಧಿಸಿ ಜನರಲ್ಲಿ ಅರಿವು ಮತ್ತು ಜಾಗೃತಿ ಈಗಾಗಲೇ




ಇರುವುದರಿಂದ ಈ ಉಪತಳಿಯ ಸೋಂಕು ಹರಡುವಿಕೆಯನ್ನೂ ತಡೆಯುವುದಕ್ಕೆ ಸಾಧ್ಯವಿದೆ.

**ಹರಡುವ ಪ್ರಕ್ರಿಯೆ, ನಡೆಯುತ್ತಿದೆ ಅಧ್ಯಯನ:** ಮೊದಲೇ ಹೇಳಿದ ಹಾಗೆ, ಕೊರೊನಾ ವೈರಾಣು ಕಾಲ ಕಾಲಕ್ಕೆ ತೀವ್ರವಾಗಿ ರೂಪಾಂತರಗೊಳ್ಳುತ್ತಿದೆ. ಆದ್ದರಿಂದ, ರೂಪಾಂತರಗೊಂಡು ಸೃಷ್ಟಿಯಾಗುವ ಉಪತಳಿಗಳ ಕುರಿತ ಅಧ್ಯಯನವು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಹೆಚ್ಚು ಹೆಚ್ಚು ಅಧ್ಯಯನ ನಡೆಯದ ಹೊರತು ಉಪತಳಿಯ ಗುಣಲಕ್ಷಣಗಳು ಮತ್ತು ಪ್ರಭಾವವನ್ನು ಅಂದಾಜಿಸಲು ಸಾಧ್ಯವಿಲ್ಲ. ಜೆಎನ್.1 ಉಪತಳಿಯ ಅಧ್ಯಯನವು ಈಗ ಮೊದಲ ಹಂತದಲ್ಲಿದೆ.

ಒಂದು ಕಡೆ ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಇನ್ನೊಂದು ಕಡೆ ಅಮೆರಿಕದ ರೋಗ ನಿಯಂತ್ರಣ ಹಾಗೂ ತಡೆ ಕೇಂದ್ರವು ಈ ಬಗ್ಗೆ ಅಧ್ಯಯನ ನಡೆಸುತ್ತಿದೆ. ಈ ಉಪತಳಿಯ ಲಕ್ಷಣಗಳ ಕುರಿತು ಈವರೆಗೂ ಯಾವುದೇ ಸ್ಪಷ್ಟ ಚಿತ್ರಣ ದೊರೆತಿಲ್ಲ. ಇದೇ ಕಾರಣಕ್ಕೆ ಇದನ್ನು ತಡೆಯುವ ಲಸಿಕೆ ಕುರಿತೂ ಸ್ಪಷ್ಟ ಮಾಹಿತಿ ಇಲ್ಲ. ಹೊಸದಾಗಿ ರೂಪುಗೊಳ್ಳುವ ಉಪತಳಿಗಳು ಈ ಹಿಂದೆ ಇದ್ದ ಉಪತಳಿಗಿಂತ ಹೆಚ್ಚು ಭಿನ್ನವಾಗಿರುವುದಿಲ್ಲ ಎನ್ನುತ್ತದೆ ಸಿಡಿಸಿ. 'ಜೆಎನ್.1ನ ಲಕ್ಷಣಗಳನ್ನು ಗಮನಿಸಿದರೆ, ಇದು ವೇಗವಾಗಿ ಹರಡುತ್ತದೆ ಎನ್ನಿಸುತ್ತದೆ' ಎಂದು ಸಿಡಿಸಿ ಅಭಿಪ್ರಾಯಪಟ್ಟಿದೆ. 'ಯಾವ ಉಪತಳಿಯು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಎಂಥ ಪರಿಣಾಮ ಬೀರಬಲ್ಲದು ಎಂಬುದು ತಿಳಿದಿಲ್ಲ. ಕೊರೊನಾ ವೈರಾಣುವಿನ ಹೊಸ ಹೊಸ ಉಪತಳಿಗಳು





ತೀವ್ರ ಪರಿಣಾಮ ಬೀರಬಹುದು ಮತ್ತು ಲಸಿಕೆಯ ಪ್ರಭಾವವನ್ನೂ ಮೀರಬಲ್ಲ ಶಕ್ತಿ ಹೊಂದಿವೆ' ಎಂದು ವಿಶ್ವ ಆರೋಗ್ಯ ಸಂಸ್ಥೆ ತನ್ನ ವರದಿಗಳಲ್ಲಿ ತಿಳಿಸಿದೆ. ಸೋಂಕು ಉಂಟು ಮಾಡುವ ಲಕ್ಷಣಗಳ ಕುರಿತು ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸಿಡಿಸಿ ನಡುವೆ ಸಹಮತ ಇಲ್ಲ. ಹಾಗಿದ್ದರೂ, ಜೆಎನ್.1 ಉಪತಳಿಯ ಪ್ರಭಾವ ಮತ್ತು ಪರಿಣಾಮ ಯಾವ ರೀತಿ ಇರಬಹುದು ಎಂಬುದು ಅಧ್ಯಯನದಿಂದಷ್ಟೇ ತಿಳಿಯಬೇಕಿದೆ.

**ಹೇಗಿದೆ ಲಸಿಕೆ ಪ್ರಭಾವ:** ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಕೋವಿಡ್ ಲಸಿಕೆ ಅಭಿಯಾನಗಳು ನಡೆಯುತ್ತಲೇ ಇವೆ. ಭಾರತದಲ್ಲಂತೂ ಮೊದಲ ಡೋಸ್, ಎರಡನೇ ಡೋಸ್ ನೀಡಿದ ಜೊತೆಯಲ್ಲಿ ಮೂರನೆಯ ಬೂಸ್ಟರ್ ಡೋಸ್ ಅನ್ನು ಕೂಡ ನೀಡಲಾಗುತ್ತಿದೆ. ಈ ಲಸಿಕೆಗಳು ಕೋವಿಡ್‌ನ ಉಪತಳಿಗಳ ಮೇಲೂ ಪ್ರಭಾವ ಬೀರಬಲ್ಲುದೇ ಎಂಬುದರ ಕುರಿತು ಅಧ್ಯಯನಗಳು ನಡೆಯುತ್ತಿವೆ. ಹಲವು ಉಪತಳಿಗಳಿಗೆ ಕೂಡ ಲಸಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. 'ಕೋವಿಡ್ ತಡೆ ಲಸಿಕೆಗಳೇ ಕೆಲವು ಉಪತಳಿಗಳನ್ನು ತಡೆಯಬಲ್ಲದು ಮತ್ತು ಅದು ಜೆಎನ್.1 ಉಪತಳಿಯನ್ನೂ ತಡೆಯಬಲ್ಲುದು' ಎನ್ನುತ್ತದೆ ಸಿಡಿಸಿ. ವಿಶ್ವ ಆರೋಗ್ಯ ಸಂಸ್ಥೆಯೂ ಇದನ್ನೇ ಹೇಳುತ್ತಿದೆ. 'ಕೋವಿಡ್ ಹಾಗೂ ಅದರ ಉಪತಳಿಗಳಿಗೆ ಸದ್ಯ ನೀಡಲಾಗುತ್ತಿರುವ 'ಮೊನೊವಲೆಂಟ್ ಎಕ್ಸ್‌ಬಿಬಿ.1.5' ಲಸಿಕೆಯು ಮನುಷ್ಯನ ರೋಗನಿರೋಧಕ ಶಕ್ತಿಯನ್ನು ವೃದ್ಧಿಸಲು ಹೆಚ್ಚು ಶಕ್ತವಾಗಿದೆ. ಆದ್ದರಿಂದ, ಜೆಎನ್.1ಗೂ ಈ ಲಸಿಕೆಯನ್ನೇ ನೀಡಬಹುದು ಹಾಗೂ ಈಗ ನೀಡುತ್ತಿರುವ ಲಸಿಕೆಯನ್ನೇ ಎಲ್ಲ ದೇಶಗಳೂ ಮುಂದುವರಿಸಿ' ಎಂದು ವಿಶ್ವ ಆರೋಗ್ಯ ಸಂಸ್ಥೆ ಸಲಹೆ ನೀಡಿದೆ.

**ಆಧಾರ:** ರಾಯಿಟರ್ಸ್, ಪಿಟಿಐ, ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳು, ಅಮೆರಿಕದ ರೋಗ ನಿಯಂತ್ರಣ ಹಾಗೂ ತಡೆ ಕೇಂದ್ರ (ಸಿಡಿಸಿ) ವರದಿಗಳು, ಕೇಂದ್ರ ಸರ್ಕಾರದ ಕೋವಿಡ್ ಟ್ರ್ಯಾಕರ್ ವೆಬ್‌ಸೈಟ್

## ರೋಗ ಲಕ್ಷಣಗಳು ಯಾವುವು?

ಈ ಉಪತಳಿಯಿಂದಾಗುವ ರೋಗದ ಲಕ್ಷಣಗಳ ಕುರಿತು ನಿಖರ ಮಾಹಿತಿ ಲಭ್ಯವಿಲ್ಲ. ಕೊರೊನಾ ಸೋಂಕು ಉಂಟಾದಾಗ ಕಾಣಿಸಿಕೊಳ್ಳುವ ಲಕ್ಷಣಗಳೇ ಸಾಮಾನ್ಯವಾಗಿ ಈ ಉಪತಳಿಯ ಸೋಂಕಿನಲ್ಲಿಯೂ ಕಾಣಿಸಿಕೊಳ್ಳುತ್ತದೆ ಎನ್ನುತ್ತಾರೆ ತಜ್ಞರು. ಆದರೆ, ಈ ರೋಗಲಕ್ಷಣಗಳ ತೀವ್ರತೆಯಲ್ಲಿ ಪ್ರತಿ ಉಪತಳಿಯಲ್ಲಿಯೂ ವ್ಯತ್ಯಾಸ ಕಂಡುಬರುತ್ತದೆ. ಆದ್ದರಿಂದ, ಪ್ರಸ್ತುತ ಜೆಎನ್.1 ಉಪತಳಿಯ ಲಕ್ಷಣಗಳು ಎಷ್ಟು ತೀವ್ರವಾಗಿವೆ ಎಂದು ಇನ್ನಷ್ಟೇ ತಿಳಿಯಬೇಕು. ಭಾರತ ಸರ್ಕಾರವು ರೋಗ ಲಕ್ಷಣಗಳ ಕುರಿತು ಮಾರ್ಗಸೂಚಿ ಹೊರಡಿಸಿದ್ದು, ತೀವ್ರ ಜ್ವರ ಹಾಗೂ ಕೆಮ್ಮು (Influenza Like Illness) ಇರುವ ರೋಗಗಳ ಕುರಿತು ಜಿಲ್ಲಾವಾರು ವರದಿ ನೀಡುವಂತೆ ಹೇಳಿದೆ. ಜೊತೆಗೆ, ಸೋಂಕಿನ ಪತ್ತೆಯನ್ನು ಮತ್ತಷ್ಟು ಹೆಚ್ಚಿಸಲೂ ಹೇಳಿದೆ. ವಿಶ್ವ ಆರೋಗ್ಯ ಸಂಸ್ಥೆ ಕೂಡ ತನ್ನ ಸದಸ್ಯ ದೇಶಗಳಿಗೆ ಈ ಸೂಚನೆಯನ್ನೇ ನೀಡಿದೆ.




## 'ರವಿಕೆ ಪ್ರಸಂಗ'ಕ್ಕೆ ಗುರುಕಿರಣ್ ಬಲ

'ಬ್ರಹ್ಮಗಂಟು' ಧಾರಾವಾಹಿ ಖ್ಯಾತಿಯ ಗೀತಾಭಾರತಿ ಭಟ್ ಮುಖ್ಯಭೂಮಿಕೆಯಲ್ಲಿರುವ 'ರವಿಕೆ ಪ್ರಸಂಗ' ಚಿತ್ರದ ಹಾಡೊಂದನ್ನು ಸಂಗೀತ ನಿರ್ದೇಶಕ ಗುರುಕಿರಣ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

'ಮನಸಲಿ ಜೋರು ಕಲರವ' ಎಂಬ ಸುಮಧುರ ಗೀತೆಗೆ ಕಿರಣ್ ಕಾವೇರಪ್ಪ ಅವರ ಸಾಹಿತ್ಯ, ಮಾನಸ ಹೊಳ್ಳ ಅವರ ಧ್ವನಿ ಹಾಗೂ ವಿನಯ್ ಶರ್ಮಾ ಸಂಗೀತವಿದೆ.

ಸಂತೋಷ್ ಕೊಡಂಕೇರಿ ಅವರ ಚಿತ್ರಕಥೆ-ನಿರ್ದೇಶನದ ಚಿತ್ರವನ್ನು ದೃಷ್ಟಿ ಮಿಡಿಯಾ & ಪ್ರೊಡಕ್ಷನ್ ನಿರ್ಮಾಣ ಮಾಡಿದೆ. 'ಚಿತ್ರದ ಎಲ್ಲಾ ಕೆಲಸಗಳು ಮುಕ್ತಾಯವಾಗಿದ್ದು, ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದು ನಿರ್ದೇಶಕರು ಹೇಳಿದ್ದಾರೆ.



ಗೀತಾಭಾರತಿ ಭಟ್

ಸುಮನ್ ರಂಗನಾಥ್, ರಾಕೇಶ್ ಮಯ್ಯ, ಸಂಪತ್ ಮೈತ್ರೇಯ, ಕೃಷ್ಣಮೂರ್ತಿ ಕವತಾರ್, ಪದ್ಮಜಾ ರಾವ್, ರಘು ಪಾಂಡೇಶ್ವರ್, ಪ್ರವೀಣ್ ಅಥರ್ವ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

## ಡಿ.22ಕ್ಕೆ ಒಟಿಟಿಯಲ್ಲಿ 'ಟೋಬಿ'



ರಾಜ್ ಬಿ.ಶೆಟ್ಟಿ, ಚೈತ್ರ ಜೆ.ಆಚಾರ್ ಹಾಗೂ ಸಂಯುಕ್ತ ಹೊರನಾಡು ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಟೋಬಿ' ಸಿನಿಮಾ ಡಿ.22ರಂದು ಒಟಿಟಿ ವೇದಿಕೆ ಸೋನಿಲಿವ್‌ನಲ್ಲಿ ಬಿಡುಗಡೆಯಾಗಲಿದೆ.

ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟಿಸಿದ ಕೊನೆಯ ಚಿತ್ರ 'ಜೇಮ್ಸ್' ಸಿನಿಮಾ ಸೋನಿಲಿವ್‌ನಲ್ಲಿ ಬಿಡುಗಡೆಯಾಗಿತ್ತು. ಟೋಬಿ, ಇದೇ ಒಟಿಟಿ ವೇದಿಕೆಯಲ್ಲಿ ಬಿಡುಗಡೆಗೊಳ್ಳಲಿರುವ ಎರಡನೇ ಕನ್ನಡ ಚಿತ್ರವಾಗಿದೆ.

'ಟೋಬಿ'ಗೆ ಬಾಸಿಲ್ ಅಲ್ಚಲಕ್ಕಲ್ ಆ್ಯಕ್ಷನ್ ಕಟ್ ಹೇಳಿದ್ದು, ಸಿನಿಮಾದ ಮೂಲ ಕಥೆಯನ್ನು ಟಿ.ಕೆ.ದಯಾನಂದ್ ಬರೆದಿದ್ದಾರೆ. ರಾಜ್ ಬಿ.ಶೆಟ್ಟಿ ಇದನ್ನು ವಿಸ್ತರಿಸಿದ್ದಾರೆ. 'ಲೈಟರ್ ಬುದ್ಧ ಫಿಲ್ಮ್ಸ್' ನಡಿ ನಿರ್ಮಾಣವಾದ ರಾಜ್ ಬಿ.ಶೆಟ್ಟಿ ನಟನೆಯ 'ಗರುಡ ಗಮನ ವೃಷಭ ವಾಹನ' ಸಿನಿಮಾವನ್ನು ನಿರ್ಮಾಣ ಮಾಡಿದ್ದ ರವಿ ರೈ ಕಳಸ ಅವರೇ 'ಟೋಬಿ' ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ಮಿದುನ್ ಮುಕುಂದನ್ ಸಂಗೀತ ನಿರ್ದೇಶನವಿದ್ದು, ಪ್ರವೀಣ್ ಶ್ರೀಯನ್ ಛಾಯಾಗ್ರಹಣವಿದೆ. 'ಗರುಡ ಗಮನ..' ಸಿನಿಮಾದ ತಾಂತ್ರಿಕ ವಿಭಾಗದಲ್ಲಿ ಇದೇ ತಂಡ ಕಾರ್ಯನಿರ್ವಹಿಸಿದೆ. ಗೋಪಾಲಕೃಷ್ಣ ದೇಶಪಾಂಡೆ, ರಾಜ್ ದೀಪಕ್ ಶೆಟ್ಟಿ, ಭರತ್ ಜಿ.ಬಿ ಮತ್ತಿತರರು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪ್ರಸ್ತುತ ಚಲಾವಣೆಯಲ್ಲಿರುವ ₹100 ಮುಖಬೆಲೆಯ ಹಳೆಯ ನೋಟುಗಳನ್ನು ಮಾರ್ಚ್ ಅಂತ್ಯದ ಹೊತ್ತಿಗೆ ಸಂಪೂರ್ಣವಾಗಿ ಹಿಂಪಡೆಯಲಾಗುವುದು. ಇದು ಡಿಮಾನಿಟೈಸೇಷನ್ ಅಲ್ಲ. ಹಾಗಾಗಿ ಭೀತಿ ಬೇಡ ಎಂದು ಆರ್‌ಬಿಐ ಹೇಳಿದೆ' ಎಂಬಂಥ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಹಿಂದೆ 2016ರಲ್ಲಿ ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ಆರ್‌ಬಿಐ ಹಿಂಪಡೆದಿತ್ತು. ಆದ್ದರಿಂದ, '₹100, ₹10 ಹಾಗೂ ₹5 ಮುಖಬೆಲೆಯ ನೋಟುಗಳನ್ನು ಆರ್‌ಬಿಐ ಹಿಂಪಡೆಯಲಿದೆ. ಇದು ಎರಡನೇ ನೋಟು ರದ್ದತಿಯಾಗಲಿದೆ' ಎಂಬಂಥ ಪೋಸ್ಟ್‌ಗಳು 2019ರಲ್ಲಿ ಹಾಗೂ 2021ರಲ್ಲಿಯೂ ಹರಿದಾಡಿದ್ದವು. ಈಗ ಮತ್ತೊಮ್ಮೆ ₹100 ಮುಖಬೆಲೆಯ ಹಳೇ ನೋಟುಗಳನ್ನು ಹಿಂಪಡೆಯಲಾಗುತ್ತದೆ ಎಂಬ ಪೋಸ್ಟ್‌ಗಳು ಹರಿದಾಡುತ್ತಿವೆ. ಆದರೆ, ಇದು ಸುಳ್ಳು ಸುದ್ದಿ.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದ ಪೋಸ್ಟ್‌ಗಳ ಕುರಿತು ಆರ್‌ಬಿಐ 2021ರಲ್ಲಿ ಸ್ಪಷ್ಟನೆ ನೀಡಿತ್ತು. 'ಪ್ರಸ್ತುತ ಚಲಾವಣೆಯಲ್ಲಿರುವ ₹100, ₹10 ಹಾಗೂ ₹5 ಮುಖಬೆಲೆಯ ಹಳೆಯ ನೋಟುಗಳನ್ನು ಹಿಂಪಡೆಯಲಾಗುವುದು ಎಂಬಂಥ ವರದಿಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಆದರೆ, ನಾವು ಇಂಥ ಯಾವುದೇ ಪ್ರಕಟಣೆ ಹೊರಡಿಸಿಲ್ಲ' ಎಂದು ಆರ್‌ಬಿಐ ಸ್ಪಷ್ಟನೆ ನೀಡಿತ್ತು. ಈಗ ಹರಿದಾಡುತ್ತಿರುವ ಸುದ್ದಿಗೆ ಸಂಬಂಧಿಸಿದಂತೆ ಆರ್‌ಬಿಐ ಯಾವುದೇ ಪ್ರಕಟಣೆಯನ್ನು ಹೊರಡಿಸಿಲ್ಲ. ಆದ್ದರಿಂದ, ₹100 ಮುಖಬೆಲೆಯ ಹಳೆಯ ನೋಟುಗಳನ್ನು ಹಿಂಪಡೆದುಕೊಳ್ಳುವ ಸುದ್ದಿಯು ಸಹ ಸುಳ್ಳು ಸುದ್ದಿಯಾಗಿದೆ.

## ಗುಂಡಣ್ಣ




## ಹೆಪ್ಪಿಟ್ಟ ಹೃದಯಗಳ ಮಾತು




ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಇಬ್ಬರೂ ವಯಸ್ಸಾದ ದಂಪತಿಗಳು. ಇಬ್ಬರು ಗಂಡು ಮಕ್ಕಳಿಗೂ ಕೆಲಸ ಸಿಕ್ಕು ಬೇರೆ ಬೇರೆ ಊರುಗಳಲ್ಲಿ ನೆಲೆಸಿದ್ದಾರೆ. ಈಗ ಹೆಚ್ಚು ಕಡಿಮೆ ಒಂಟಿಯಾಗಿ ಇರುತ್ತಾರೆ. ಮಕ್ಕಳ ಜೊತೆ ಆಗಾಗ ಫೋನು, ಮಾತುಕತೆ, ಆರೋಗ್ಯ, ಇತ್ಯಾದಿ. ಮಕ್ಕಳು ವಾರಕ್ಕೆ ಒಮ್ಮೆಯಾದರೂ ಬಂದು ಹೋಗಲಿ ಎಂದು ಬಯಸುವ ಅವ್ವ. ಅವರಿಗೆ ಏನೇನು ಕೆಲಸವಿದೆಯೋ ಏನೋ? ಇರಲಿ ಬಿಡು ಎಂದು ಗದರುವ ಅಪ್ಪ. ಆತನಿಗೂ ಮಕ್ಕಳು ಬರಲಿ ಎಂಬ ಒಳಾಸೆ ಇದ್ದರೂ ತೋರಗೊಡುವುದಿಲ್ಲ. ಸೊಸೆಯಂದಿರು ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರೀತಿ ತೋರುತ್ತಾರೆ ಎಂದು ಮನದುಂಬಿ ಹೇಳುತ್ತಾರೆ. ಮಕ್ಕಳಿರುವ ಕಡೆ ಹೋಗಿರಲು ನೆಲೆಸಿ, ಬಾಳಿ, ಬದುಕಿದ ಊರಿನ ಬೇರುಗಳು ಬಿಡುತ್ತಿಲ್ಲ. ಅವರಿಗೆ ಯಾಕೆ ಹೊರೆ ಎಂಬ ಸ್ವಾಭಿಮಾನ ಬೇರೆ ಅಡ್ಡವಿದೆ.

ಅವರು ಆಗಾಗ ನನಗೆ ಫೋನ್ ಮಾಡಿ ತಾಸುಗಟ್ಟಲೆ ಮಾತಾಡುತ್ತಾರೆ. ಅಪಾರ ನೆನಪಿನ ಜೀವ ಮಾಹಿತಿ. ಪ್ರೀತಿ ತುಂಬಿದ ಎಳೆಯ ಮುಗ್ಧತೆ. ಹಾಸ್ಯಪ್ರಜ್ಞೆ ಬತ್ತಿಲ್ಲ. ಅದು ಚಿಗುರುತ್ತಲೇ ಇದೆ. 'ಜಗತ್ತಿನ ಡಾಕ್ಟ್ರುಗಳು ಮೈ ತುಂಬಾ ಕೊಯ್ದಾಗಿದೆ. ಜಾಸ್ತಿ ನಕ್ಕರೆ ಯಾವ ಹೊಲಿಗೆ ಫಟ್ ಎಂದು ಸಿಡಿವುದೋ? ಗೊತ್ತಿಲ್ಲ' ಎಂದು ನಗುತ್ತಾರೆ.

ಅವ್ವನ ಮಾತು ಕಡಿಮೆ. ವಾತ್ಸಲ್ಯ ಇದ್ದರೂ ಚೌಕಾಶಿ. ಸಣ್ಣ ಬೇಸರ, ಪುಟ್ಟ ಅಸಹನೆ. ಮುಗಿಯದ ತಕರಾರುಗಳು. ನಡುವೆ ಹೆಂಡತಿಯಿಂದ ಫೋನು ಕಿತ್ತುಕೊಂಡು ಮತ್ತೆ ಯಜಮಾನರು 'ಜೀವನ ಏನು ವಿಚಿತ್ರ ವೃತ್ತ ನೋಡಿ. ಎಲ್ಲಿಂದ ಶುರುವಾಗಿತ್ತೋ ಮತ್ತೆ ಅಲ್ಲಿಗೆ ಬಂದು ನಿಲ್ಲುತ್ತಿದೆ. ನಾವಿಬ್ಬರೂ ಸೇರಿ ಗೂಡು ಕಟ್ಟಿದೆವು. ಮರಿಗಳನ್ನು ಹೆತ್ತು ಸಾಕಿದೆವು. ಅವು ಇವೇ ಮನೆಯಲ್ಲಿ ಇರುತ್ತವೆ ಎಂದು ಭ್ರಮಿಸಿದೆವು. ಇದೆಲ್ಲ ತಪ್ಪು ಹೀಗೆ ಮಾಡಬಾರದಿತ್ತು. ಪುಟ್ಟ ಮನೆ ಭವ್ಯವಾಗಬಾರದಿತ್ತು. ನೀರ ಮೇಲೆ ಅಕ್ಷರ ಬರೆದು ನಿರೀಕ್ಷೆ ಮಾಡಿದ್ದು ನಮ್ಮ ಸ್ವಾರ್ಥ. ಬಾಳಿ ಬದುಕಬೇಕಾದವರು ಅನ್ನ ನೆಮ್ಮದಿ ಸಿಕ್ಕ ಕಡೆ ಹೊರಟು ಹೋಗುತ್ತಾರೆ. ನಾನು ಹಿಂದೆ ಮಾಡಿದ್ದೂ ಇದನ್ನೇ ಎಂದು ಮರೆಯುತ್ತೇವೆ'.

'ಸಮಯ ಸಿಕ್ಕಾಗ ಖಂಡಿತ ಬರುತ್ತಾರೆ. ನೋಡಿ, ಮಾತಾಡಿಸಿ, ಉಣಿಸಿ, ಉಂಡು ಸಂತಸ ಹಂಚಿ ಹೊರಡುತ್ತಾರೆ. ಮಕ್ಕಳಾಗಿದ್ದಾಗ ಹೊರಗಿ ಹೋಗಿ ಎಂದೆವು. ಈಗ ಬನ್ನಿ ಎನ್ನುತ್ತಿದ್ದೇವೆ. ಒಮ್ಮೆ ಹೋದವರು ಮತ್ತೆ ಮನೆಗೇ ಅತಿಥಿಗಳು. ಈ ಸತ್ಯ ಗೊತ್ತಿದ್ದೂ ಭಾವುಕರಾಗುತ್ತೇವೆ. ಒಂದು ಸಣ್ಣ ಹೆದರಿಕೆ ಕಾಡಿಸುತ್ತಿದೆ. ನಮ್ಮ ಸಾವು ಬಂದಾಗ ಮಕ್ಕಳು ಎದುರಿಗಿದ್ದರೆ ಒಳ್ಳೆಯದಲ್ಲವೇ? ಈ ಸಂಸಾರ ಶುರು ಮಾಡುವಾಗಲು ಇಬ್ಬರಿದ್ದೆವು. ಈ ವ್ಯಾಪಾರ ಮುಗಿಸುವಾಗಲೂ ಇಬ್ಬರೇ ಇದ್ದೇವೆ. ಈ ಸತ್ಯ ಗೊತ್ತಿತ್ತು. ಆದರೆ ಇದು ಇಷ್ಟು ನೋವು ಮತ್ತು ಕಹಿ ಎನ್ನುವುದು ಗೊತ್ತಿರಲಿಲ್ಲ. ಎಲ್ಲವೂ ಅರ್ಥವಾಗುವುದಕ್ಕೆ ಆಯಾ ಸಮಯವೇ ಬರಬೇಕು. ಇಷ್ಟು ಬದುಕಿದ್ದು ಸಾಕು. ಈಗ ಸುಖವಾದ ಸಾವನ್ನು ಕಾಣುವ ದರಿದ್ರ ಬಯಕೆ. ಆದರೆ ಸುಖದ ಸಾವೆಲ್ಲಿದೆ. ಸಾವಲ್ಲೇ ಸುಖವಿದೆ. ಹೀಗೆ ಅವರ ಮಾತು ನಡೆಯುತ್ತಲೇ ಇರುತ್ತದೆ.

ಜೀವನವನ್ನು ಸಂಪೂರ್ಣ ಅನುಭವಿಸಿದವರ ಒಂದೊಂದು ಮಾತು ಅಮೂಲ್ಯ. ಎಷ್ಟು ದಿನ ಬದುಕುತ್ತೇವೆ ಎನ್ನುವುದು ಮುಖ್ಯವಲ್ಲ. ಎಷ್ಟು ಚೆನ್ನಾಗಿ ಎಲ್ಲರೊಟ್ಟಿಗೆ ಬಾಳುತ್ತೇವೆ ಎನ್ನುವುದೇ ಮುಖ್ಯ. ಕೊರಗು, ನೋವಿನ ನಡುವೆಯೂ ಬತ್ತದ ಹಾಸ್ಯಪ್ರಜ್ಞೆ ಜೀವನಕ್ಕೆ ಅಮೃತವಿದ್ದಂತೆ. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಡಿಸೆಂಬರ್ 20, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶಿರ ಶುಕ್ಲ ಅಷ್ಟಮಿ ಗಂ. 11-15 **ನಕ್ಷತ್ರ:** ಉತ್ತರಾಭಾದ್ರ ಗಂ. 22-58 **ಯೋಗ:** ವ್ಯತೀಪತ ಗಂ 15-5 **ಕರಣ:** ಬವ ಗಂ. 11-15, ಧನು ಮಾಸದ 04 ನೇ ದಿನ, **ಮಳೆನಕ್ಷತ್ರ:** ಮೂಲಾ 2.
**ರಾಹುಕಾಲ:** ಮಧ್ಯಾಹ್ನ 12-00 – 01-30
**ಸೂರ್ಯೋದಯ:** 06-51 **ಸೂರ್ಯಾಸ್ತ:** 06-04,
**ಮುಸ್ಲಿಂ ದಿನಾಂಕ:** 06 ಜುಮಾದುಸ್ಸಾನಿ
**ದಿನ ವಿಶೇಷ:** ಮಿತ್ರ ಸಪ್ತಮಿ, **ಅದೃಷ್ಟ ಸಂಖ್ಯೆ:** 8, 3

**ಮೇಷ:** ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ. ಯಾವುದೇ ಜವಾಬ್ದಾರಿಯಿಂದ ವಿಮುಖರಾಗಬೇಡಿ. ಮೇಲಧಿಕಾರಿಗಳ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಗುವಿರಿ.

**ವೃಷಭ:** ನಿರ್ಮಾಣ ಕೆಲಸಗಳ ಗುತ್ತಿಗೆಯನ್ನು ಹಿಡಿಯುವವರು ವಸ್ತುಗಳ ಬೆಲೆ ಏರಿಕೆಯನ್ನು ನೋಡಿಕೊಂಡು ವ್ಯವಹಾರ ಮುಂದುವರೆಸುವುದು ಉತ್ತಮ. ಕೆಲಸಗಳಲ್ಲಿ ನಿಯಮ ಉಲ್ಲಂಘಿಸುವಂತೆ ಅನ್ಯರಿಂದ ಒತ್ತಡ ಹೆಚ್ಚಲಿದೆ.

**ಮಿಥುನ:** ಪ್ರತಿಯೊಂದರಲ್ಲೂ ಯಶಸ್ಸು ಕಾಣಬಯಸುವ ನೀವು ಅದಕ್ಕಾಗಿ ಶ್ರಮಪಡಬೇಕಾದ ಅಗತ್ಯವಿದೆ. ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ನಿಮ್ಮದಾಗಲಿದೆ. ಬರಹಗಾರರಿಗೆ ವಿಶೇಷ ವಿಷಯ ಸಂಗ್ರಹವಾಗುವುದು.

**ಕರ್ಕಾಟಕ:** ಸಮಸ್ಯೆ ಹೆಚ್ಚಳಕ್ಕೆ ಮುಂಚೆಯೇ ಜಾಣ್ಮೆಯಿಂದ ಪರಿಹಾರದ ಮಾರ್ಗವನ್ನು ಕಂಡುಕೊಳ್ಳಿರಿ. ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳಲು ಮನೆಯವರಿಗೆಲ್ಲ ಆತುರ ತೋರುವಿರಿ. ಆರ್ಥಿಕ ಪರಿಸ್ಥಿತಿ ಸ್ವಲ್ಪ ವ್ಯತ್ಯಾಸವಾಗಲಿದೆ.

**ಸಿಂಹ:** ಇನ್ನೊಬ್ಬರನ್ನು ನಿಮಗೆ ಹೋಲಿಸಿಕೊಳ್ಳದೇ, ಯಾವುದೇ ಅತಿಯಾಸೆ ಇಲ್ಲದೆ, ನಿಶ್ಚಿಂತೆಯಿಂದ ದುಡಿದಲ್ಲಿ ಹೆಚ್ಚಿನ ಆದಾಯವನ್ನು ಹೊಂದುವಿರಿ. ಕೆಲವು ಅಸಾಮಾನ್ಯ ವ್ಯಕ್ತಿಗಳನ್ನು ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ.

**ಕನ್ಯಾ:** ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಅಥವಾ ರಾಸಾಯನಿಕ ಶಾಸ್ತ್ರದ ಅಧ್ಯಯನದಲ್ಲಿ ಜಾಗ್ರತರಾಗಿರಿ. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ. ಸುಬ್ರಹ್ಮಣ್ಯನ ಸೇವೆ ಮಾಡುವುದರಿಂದ ಶುಭವಿರುವುದು.

**ತುಲಾ:** ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನ, ಗೌರವ, ಪುರಸ್ಕಾರ ಲಭಿಸಲಿದೆ. ವಕೀಲಿ ವೃತ್ತಿಯವರಿಗೆ ಅಧ್ಯಯನದ ಕೊರತೆ ಕಾಣಲಿದೆ. ಈ ದಿನ ನಿಮ್ಮ ಆರೋಗ್ಯ ಸುಧಾರಿಸುವುದು.

**ವೃಶ್ಚಿಕ:** ನಿಮ್ಮನ್ನು ಕಂಡು ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ವ್ಯವಹಾರದಲ್ಲಿನ ಲಾಭ ನಿಮ್ಮ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಹಳೇ ಬಾಕಿ ಸಂದಾಯವಾಗುವುದು.

**ಧನು:** ನಿಮ್ಮ ಆತ್ಮವಿಶ್ವಾಸವನ್ನು ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗಬೇಕು. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ. ಮನೆಯಲ್ಲಿ ಸಮಾರಂಭ ನಡೆಸಲು ತಯಾರಿ ನಡೆಸಬಹುದು.

**ಮಕರ:** ಸಿವಿಲ್ ಎಂಜಿನಿಯರ್‌ಗಳಿಗೆ ಕೀರ್ತಿ ಸಂಪಾದನೆ ಜೊತೆ ಆರ್ಥಿಕತೆಗೆ ಸಹಾಯವಾಗುವ ಉತ್ತಮ ಅವಕಾಶಗಳು ಸಿಗುವುದು. ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ.


**ಕುಂಭ:** ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಅಗತ್ಯವಾಗುವುದು. ಗುರಿ ತಲುಪಲು ತಾಳ್ಮೆ ಮತ್ತು ವಿಶ್ವಾಸ ಅತಿ ಅಗತ್ಯ ಎಂದು ತಿಳಿಯುವಿರಿ. ಅನುಭವದಿಂದ ಧಾರ್ಮಿಕ ಆಚರಣೆಯ ಬಗ್ಗೆ ಒಲವು ಮೂಡುವುದು.

**ಮೀನ:** ಈ ದಿನದಂದು ಷರತ್ತುಗಳುಳ್ಳ ಯಾವುದೇ ವ್ಯವಹಾರಗಳಿಗೂ ಕೈ ಹಾಕಬೇಡಿ. ತಂದೆ ತಾಯಿಯ ಆಶೀರ್ವಾದದೊಂದಿಗೆ ಹೊಸ ವ್ಯವಹಾರ ಪ್ರಾರಂಭಿಸಿ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

## ಪದಬಂಧ 5535 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
2.ಯಜಮಾನನ ಹುಟ್ಟುಗುಣ (4)
5.ಗಾಡಿಯಲ್ಲಿ ಬಂದಿರುವ ಯಕ್ಷಿಣಿಗಾರ (4)
6.ಟಾರ ರಸ್ತೆ ಬದಿಯಲ್ಲಿನ ಮೋರಿ (3)
7.ಪಂಚರು ನೋಡಿದ ಜಗತ್ತು (3)
9.ಕಾಮನು ಮೂಡಿಸಿದ ಆಸೆ (3)
10.ಈ ಪರಿ ಕೊನೆಗೆ ದನವನ್ನಿಟ್ಟು ಕತ್ತರಿಸುವುದು (5)
11.ಕುಲದಲ್ಲಿ ತೋರಿದ ಮೋಸ (3)
12.ಕ್ಷತ್ರಿಯನಿಗೆ ಗೋಚರಿಸಿದ ತಾರೆ (3)
14.ಮೀಸೆ ಬಂದವನಿಗೆ ಇದು ಮುಡಿಪು! (3)
16.ವಾದ ಮಾಡುತ್ತಲೇ ಭಾಷಾಂತರ (4)
17.ಕಾಡಿನ ಬೆಂಕಿ (4)

**ಮೇಲಿಂದ ಕೆಳಕ್ಕೆ**
1.ಎದುರಾಗಿ ಹೋಗುವವನು ತಿರುಗಿದ್ದಾನಲ್ಲಾ? (4)
2.ಜಾಗರೂಕತೆಯಿಂದ ಆಯ್ದುಕೊಂಡಿರುವ ಸ್ಥಳ (2)
3.ನಗರದಲ್ಲಿ ಖರೀದಿಸಿರುವ ಆಭರಣ (2)
4.ಅರಸನಿರುವ ಮನೆ (4)
8.ಚಂಚಲ ಸ್ವಭಾವದವನು (3)
9.ದನಕಾಯುವವನು ನೋಡಿರುವ ಅರಣ್ಯ (3)
11.ಕುಡಿಯೊಡೆಯುತ್ತಿರುವ ಮೀಸೆ (4)
13.ದ್ವಾದಶಿ ನಂತರದ ತಿಥಿ (4)
15.ನಾಲ್ಕನೆಯ ಒಂದು ಭಾಗ ಉಲ್ಟಾ ಕಾಣುತ್ತಿದೆ (2)
16.ಮುದ್ರಣ ಮಾಡುವುದು (2)




### 5534ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ವ್ಯಾಮೋಹ 3.ವಿಶ್ವಾಸಘಾತ
6.ಸುಸಂಧಿ 7.ಕಾಲ
8.ಣಗುಸು 9.ಮೂಡಣ
10.ಅನುಜ 13.ಪ್ರತಿ
14.ಹರಿತ 15.ವರದಕ್ಷಿಣೆ
16.ರಗಳೆ

**ಮೇಲಿಂದ ಕೆಳಕ್ಕೆ:**
1.ವ್ಯಾಕರಣ 2.ಹಸುಗೂಸು
3.ವಿಧಿ 4.ಸಕಾಲ
5.ತಬ್ಬಿಬ್ಬು 7.ಕಾರಣ
9.ಮೂರುತಿ 10.ಅವಾಂತರ
11.ಜಡಿಮಳೆ 12.ಗಡವ
13.ಪ್ರಸಾದ 14.ಹಣೆ

## ಸುಡೊಕು 5921


| | | | | | | | | |
|---|---|---|---|---|---|---|---|---|
| | 5 | | 4 | | 2 | | 7 | 6 |
| 3 | | 6 | | | | 2 | | 5 |
| | | 4 | | 5 | | | 8 | |
| 8 | | 5 | | | | | | 1 |
| | | | 5 | 9 | 3 | | 2 | |
| 7 | | 2 | | 6 | | 5 | | 4 |
| | | | | 2 | | 8 | | 7 |
| 2 | | 7 | | | | | 6 | |
| 6 | | | 7 | | 9 | 4 | | 2 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5920 ಸುಡೊಕು

| | | | | | | | | |
|---|---|---|---|---|---|---|---|---|
| 5 | 3 | 4 | 9 | 8 | 2 | 1 | 7 | 6 |
| 1 | 7 | 6 | 3 | 4 | 5 | 9 | 8 | 2 |
| 9 | 8 | 2 | 1 | 6 | 7 | 3 | 4 | 5 |
| 7 | 2 | 3 | 5 | 9 | 8 | 6 | 1 | 4 |
| 6 | 5 | 9 | 7 | 1 | 4 | 2 | 3 | 8 |
| 4 | 1 | 8 | 2 | 3 | 6 | 5 | 9 | 7 |
| 2 | 9 | 5 | 8 | 7 | 1 | 4 | 6 | 3 |
| 3 | 6 | 7 | 4 | 2 | 9 | 8 | 5 | 1 |
| 8 | 4 | 1 | 6 | 5 | 3 | 7 | 2 | 9 |

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 21,418 |
| ಇಂದಿನ ಅಂತ್ಯ | 21,453 |
| ▲ | 34 |
| ದಿನದ ಗರಿಷ್ಠ | 21,505 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹600 |
| 12 ಮೊಟ್ಟೆಗೆ | ₹80 |
| ಮೈಸೂರು | |
| 100 ಮೊಟ್ಟೆಗೆ | ₹604 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1620 (1620) |
| ಸೋಯಾ (ರಿಫೈನ್ಡ್) | ₹900 (900) |
| ಸೂರ್ಯಕಾಂತಿ (ರಿಫೈನ್ಡ್) | ₹910 (915) |
| ಪಾಮೋಲಿನ್ | ₹828 (824) |

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹292-465 |
| ದ್ವಿತಳಿ (ಬಿ.ವಿ) | ₹299-589 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹148 |
| ಆರ್‌ಎಸ್‌ಎಸ್-5 | ₹144 |
| ಗುಡ್ ಲಾಟ್ | ₹127 |

**ವಿನಿಮಯ ದರ**

| | |
|---|---|
| $ ಡಾಲರ್ | 83.18 |
| £ ಪೌಂಡ್ | 105.62 |
| € ಯುರೊ | 90.01 |
| ¥ ಯೆನ್ (100ಕ್ಕೆ) | 58 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹7500-8150 |
| ತಿಪಟೂರು | ₹7000-8500 |
| ತುರುವೇಕೆರೆ | ₹8150-8150 |

## ರಾಜ್ಯದಲ್ಲಿ ₹4,467 ಕೋಟಿ ಸಂಗ್ರಹ: ಖರ್ಚಾಗಿದ್ದು ₹2,040 ಕೋಟಿ

# ಖನಿಜ ನಿಧಿ ಬಳಕೆ ಕಡೆಗಣನೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ರಾಜ್ಯದಲ್ಲಿ ಗಣಿಗಾರಿಕೆಯಿಂದ ತತ್ತರಿಸಿರುವ ಪ್ರದೇಶಗಳ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗಾಗಿ ಸ್ಥಾಪಿಸಿರುವ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ (ಡಿಎಂಎಫ್) ಸಂಗ್ರಹವಾಗಿರುವ ಹಣ ಅರ್ಧದಷ್ಟು ಬಳಕೆಯಾಗಿಲ್ಲ ಎಂಬ ಸಂಗತಿ ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಶಿ ಅವರು, ಲೋಕಸಭೆಗೆ ನೀಡಿರುವ ಉತ್ತರದಲ್ಲಿ ಬಹಿರಂಗಗೊಂಡಿದೆ.

ಖನಿಜ ನಿಧಿ ಬಳಕೆಗೆ ಸಂಬಂಧಿಸಿದಂತೆ ಸಂಸದ ಕನಿಮೊಳಿ ಕರುಣಾನಿಧಿ ಕೇಳಿರುವ ಪ್ರಶ್ನೆಗೆ ಸಚಿವರು ಸಂಸತ್‌ನ ಕಲಾಪದಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ, 'ದೇಶದ 23 ರಾಜ್ಯಗಳ 644 ಜಿಲ್ಲೆಗಳಲ್ಲಿ ಡಿಎಂಎಫ್ ಸ್ಥಾಪಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

2015ರಲ್ಲಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ರೂಪಿಸಲಾಗಿದೆ. ಇದರ ಅನ್ವಯ ನಿಧಿ ಬಳಕೆಗೆ ಮಾರ್ಗಸೂಚಿ ರೂಪಿಸಲಾಗಿದೆ. ಸಂಗ್ರಹವಾಗುವ ನಿಧಿಯ ಗಣಿಬಾಧಿತ ಹಳ್ಳಿಗಳ ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೌಶಲ ಅಭಿವೃದ್ಧಿಗೆ ಶೇ60ರಷ್ಟು ಹಣ ಬಳಸಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದ್ದಾರೆ.

ಉಳಿದ ಶೇ40ರಷ್ಟು ಹಣವನ್ನು ಮೂಲಸೌಕರ್ಯ ಅಭಿವೃದ್ಧಿ, ನೀರಾವರಿ, ಪರಿಸರದ ಗುಣಮಟ್ಟ ಹೆಚ್ಚಳಕ್ಕೆ ಬಳಸಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ.

2015ರಿಂದ ಪ್ರಸಕ್ತ ವರ್ಷದ ಅಕ್ಟೋಬರ್‌ವರೆಗೆ ಕರ್ನಾಟಕದಲ್ಲಿ ಈ ನಿಧಿಯಡಿ ₹4,467.52 ಕೋಟಿ ಸಂಗ್ರಹಿಸಲಾಗಿದೆ. ಈ ಪೈಕಿ ₹2,040.83 ಕೋಟಿಯಷ್ಟು ಮಾತ್ರವೇ ವೆಚ್ಚವಾಗಿದೆ ಎಂದು ವಿವರಿಸಿದ್ದಾರೆ.

ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ 2021ರ ಅನ್ವಯ ಆಯಾ ರಾಜ್ಯಗಳು ಮಾರ್ಗಸೂಚಿ ಅನ್ವಯ ನಿಧಿಯನ್ನು ಬಳಸಿಕೊಳ್ಳಬೇಕಿದೆ. ಐದು ವರ್ಷಗಳಲ್ಲಿ ಅಗತ್ಯ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು 2022ರಲ್ಲಿಯೇ ಆದೇಶಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

### ಅನ್ಯ ಬಳಕೆಗೆ ನಿರ್ಬಂಧ

ಈ ನಿಧಿಯನ್ನು ನಿರ್ದಿಷ್ಟ ಉದ್ದೇಶಕ್ಕೆ ಮಾತ್ರವೇ ಬಳಸಬೇಕು. ರಾಜ್ಯದ ಖಜಾನೆ ವೆಚ್ಚ, ರಾಜ್ಯ ವಲಯದ ನಿಧಿ ಅಥವಾ ಬೇರೆ ಯಾವುದೇ ನಿಧಿ, ಯೋಜನೆಗಳ ಜತೆಗೆ ಸಂಯೋಜಿಸುವಂತಿಲ್ಲವೆಂದು ಸ್ಪಷ್ಟವಾಗಿ ಸೂಚಿಸಲಾಗಿದೆ ಎಂದು ಸಚಿವ ಪ್ರಲ್ಹಾದ ಜೋಶಿ ವಿವರಿಸಿದ್ದಾರೆ.

ರಾಜ್ಯದಲ್ಲಿ ಮುಖ್ಯವಾಗಿ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳ ವ್ಯಾಪ್ತಿಯ ಹಳ್ಳಿಗಳು ಗಣಿಗಾರಿಕೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ನಿಧಿಯಡಿ ಸಕಾಲದಲ್ಲಿ ಕಾಮಗಾರಿ ಕೈಗೊಳ್ಳುತ್ತಿಲ್ಲ ಎಂದು ಗಣಿಬಾಧಿತ ಪ್ರದೇಶದ ಹಳ್ಳಿಗಳ ಜನರು ದೂರುತ್ತಾರೆ.

## ಭಾರ್ತಿ ಏರ್‌ಟೆಲ್ ಸಿಇಒ ಗೋಪಾಲ್ ವಿಠ್ಠಲ್ ಅಭಿಮತ

# 'ದೂರಸಂಪರ್ಕ ಮಸೂದೆ ಅಭಿವೃದ್ಧಿಯ ದ್ಯೋತಕ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿರುವ 'ದೂರಸಂಪರ್ಕ ಮಸೂದೆ-2023' ರಾಷ್ಟ್ರದ ಪ್ರಗತಿದಾಯಕ ಮುನ್ನೋಟ ಹೊಂದಿದೆ ಎಂದು ಭಾರ್ತಿ ಏರ್‌ಟೆಲ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಗೋಪಾಲ್ ವಿಠ್ಠಲ್ ಹೇಳಿದ್ದಾರೆ.

ದೂರಸಂಪರ್ಕ ಕಂಪನಿಗಳಿಗೆ ಸರ್ಕಾರದ ಪರವಾನಗಿ, ನೋಂದಣಿ ಹಾಗೂ ಅನುಮತಿ ನೀಡುವ ವ್ಯವಸ್ಥೆಯು ಜಟಿಲವಾಗಿತ್ತು. ಮಸೂದೆಯಲ್ಲಿ ಇದನ್ನು ಸರಳೀಕರಿಸಲಾಗಿದೆ. ಇದು ಉದ್ಯಮದ ಅಭ್ಯುದಯಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

ಉಪಗ್ರಹ ಆಧಾರಿತ ಸೇವೆ ಒದಗಿಸುವ ಖಾಸಗಿ ಕಂಪನಿಗಳಿಗೆ ಸರ್ಕಾರವೇ ನೇರವಾಗಿ ತರಂಗಾಂತರಗಳನ್ನು ನಿಯೋಜಿಸಲು ಮಸೂದೆಯಡಿ ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಹರಾಜಿನ ಮೂಲಕ ತರಂಗಾಂತರಗಳನ್ನು ಹಂಚಿಕೆ ಮಾಡಬೇಕಿದ್ದ ನಿಯಮವನ್ನು ಈ ಮಸೂದೆ ತೊಡೆದು ಹಾಕಿದೆ. ಇದು ಡಿಜಿಟಲ್ ವಲಯದ ಮೂಲಸೌಕರ್ಯವನ್ನು ಮತ್ತಷ್ಟು ಸದೃಢಗೊಳಿಸಲು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರದ ಈ ಸುಧಾರಣೆ ಕ್ರಮವು ದೇಶದಲ್ಲಿ 5ಜಿ ಸೇವೆ ಸೇರಿದಂತೆ ದೂರಸಂಪರ್ಕ ವಲಯದ ಮೂಲಸೌಕರ್ಯದ ವೇಗ ಹೆಚ್ಚಿಸಲು ಸಹಕಾರಿಯಾಗಲಿದೆ. ಸ್ಥಳೀಯ ಮಟ್ಟದಲ್ಲಿಯೂ ದೂರಸಂಪರ್ಕ ಇಲಾಖೆಯ ನಿಯಮಾವಳಿಗಳ ಜಾರಿಗೆ ಅನುಕೂಲವಾಗಲಿದೆ. ಅಲ್ಲದೇ, ಮಸೂದೆಯಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ನಿಬಂಧನೆಗಳು ಉದ್ಯಮದ ಪ್ರಗತಿಯ ವೇಗಕ್ಕೆ ಪುಷ್ಟಿ ನೀಡುತ್ತವೆ ಎಂದು ಹೇಳಿದ್ದಾರೆ.

ಮಸೂದೆಯಲ್ಲಿ ನಿಯಮಾವಳಿ ಉಲ್ಲಂಘಿಸುವ ಕಂಪನಿಗಳಿಗೆ ವಿಧಿಸುತ್ತಿದ್ದ ದಂಡಕ್ಕೆ ಸಂಬಂಧಿಸಿದ ಚೌಕಟ್ಟನ್ನೂ ಸರಳೀಕರಿಸಲಾಗಿದೆ. ನಿಯಮ ಉಲ್ಲಂಘನೆಗಳಿಗೆ ಅನುಗುಣವಾಗಿ ದಂಡ ವಿಧಿಸುವ ಶ್ರೇಣಿಕೃತ ವ್ಯವಸ್ಥೆ ರೂಪಿಸಲು ಒತ್ತು ನೀಡಲಾಗಿದೆ. ಸ್ವಯಂಪ್ರೇರಿತವಾಗಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಇದು ವಿವಾದಗಳ ಸಂಖ್ಯೆಯನ್ನು ತಗ್ಗಿಸಲು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

### 'ಸುಧಾರಣೆಯ ಪರ್ವಕಾಲ'

ಮಸೂದೆಯು ದೂರಸಂಪರ್ಕ ಕ್ಷೇತ್ರದ ಸುಧಾರಣೆಯ ಪರ್ವಕಾಲಕ್ಕೆ ಸಾಕ್ಷಿಯಾಗಿದೆ ಎಂದು ವೊಡಾಫೋನ್ ಐಡಿಯಾದ ಸಿಇಒ ಅಕ್ಷಯ್ ಮೂಂದ್ರ ಹೇಳಿದ್ದಾರೆ.

ದೂರಸಂಪರ್ಕ ಕ್ಷೇತ್ರಕ್ಕೆ ಭವಿಷ್ಯದ ಚೌಕಟ್ಟು ರೂಪಿಸಲು ಕೇಂದ್ರ ಮುಂದಾಗಿದೆ. ಇದು ನವ ಭಾರತದ ಅಭಿವೃದ್ಧಿಯ ಆಕಾಂಕ್ಷೆ ಈಡೇರಲು ವೇದಿಕೆಯಾಗಲಿದೆ ಎಂದು ಹೇಳಿದ್ದಾರೆ.

ದೇಶದ ಎಲ್ಲಾ ಜನರಿಗೆ ಡಿಜಿಟಲ್ ಸಂಪರ್ಕ ಕಲ್ಪಿಸಲು ನೆರವಾಗಲಿದೆ. ದಂಡ ವಿಧಿಸುವುದನ್ನು ತರ್ಕಬದ್ಧಗೊಳಿಸಬೇಕು ಹಾಗೂ ಸರಿಯಾದ ಮಾರ್ಗದಲ್ಲಿ ಕಾನೂನಿನ ನಿಬಂಧನೆಗಳನ್ನು ಜಾರಿಗೊಳಿಸಬೇಕು ಎಂಬುದು ಉದ್ಯಮದ ಹಲವು ದಿನಗಳ ಬೇಡಿಕೆಯಾಗಿತ್ತು. ಇದನ್ನು ಸರ್ಕಾರ ಪರಿಗಣಿಸಿದೆ ಎಂದಿದ್ದಾರೆ.

## ಜಿಎಸ್‌ಟಿ ತಿದ್ದುಪಡಿ ಮಸೂದೆ ಅಂಗೀಕಾರ

**ನವದೆಹಲಿ (ಪಿಟಿಐ):** ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷ ಹಾಗೂ ಸದಸ್ಯರ ವಯೋಮಿತಿಯನ್ನು ಹೆಚ್ಚಿಸಲು ಅವಕಾಶ ನೀಡುವ 'ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ (ಎರಡನೆಯ ತಿದ್ದುಪಡಿ) ಮಸೂದೆ 2023'ಕ್ಕೆ ಲೋಕಸಭೆಯು ಮಂಗಳವಾರ ಅಂಗೀಕಾರ ನೀಡಿದೆ.

ಜಿಎಸ್‌ಟಿ ನೋಟಿಸ್ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿರುವವರು, ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿಗಳು ಕಾರ್ಯ ಆರಂಭಿಸಿದ ನಂತರದಲ್ಲಿ, ತಮ್ಮ ಅರ್ಜಿಗಳನ್ನು ಸ್ವಇಚ್ಛೆಯಿಂದ ಮೇಲ್ಮನವಿ ನ್ಯಾಯಮಂಡಳಿಗಳ ಎದುರು ತರುವ ಅವಕಾಶ ಇರುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿವರಿಸಿದರು.

ಮಸೂದೆಯು ಅಧ್ಯಕ್ಷರ ವಯೋಮಿತಿಯನ್ನು ಈಗಿರುವ 67 ವರ್ಷದಿಂದ 70 ವರ್ಷಕ್ಕೆ, ಸದಸ್ಯರ ವಯೋಮಿತಿಯನ್ನು ಈಗಿನ 65 ವರ್ಷದಿಂದ 67 ವರ್ಷಕ್ಕೆ ಹೆಚ್ಚು ಮಾಡಲು ಅವಕಾಶ ನೀಡುತ್ತದೆ.

## ಚೀನಾದಲ್ಲಿ ಭೂಕಂಪ: 127 ಮಂದಿ ಸಾವು

**ಬೀಜಿಂಗ್/ಹೈಡಾಂಗ್ (ಪಿಟಿಐ/ಎಎಫ್‌ಪಿ):** ವಾಯವ್ಯ ಚೀನಾದ ಗನ್ಸು ಮತ್ತು ಕಿಂಗ್‌ಹೈ ಪ್ರಾಂತ್ಯದಲ್ಲಿ ಸೋಮವಾರ ಮಧ್ಯರಾತ್ರಿ ಪ್ರಬಲ ಭೂಕಂಪ ಸಂಭವಿಸಿದ್ದು 127 ಜನರು ಮೃತಪಟ್ಟಿದ್ದು, 700ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ರಿಕ್ಟರ್ ಮಾಪನದಲ್ಲಿ ಭೂಕಂಪದ ತೀವ್ರತೆ 6.2 ದಾಖಲಾಗಿದೆ.

ಸೋಮವಾರ ಮಧ್ಯರಾತ್ರಿ 11.59ರ ಸುಮಾರಿಗೆ ಭೂಕಂಪ ಸಂಭವಿಸಿದೆ. ಗನ್ಸು ಪ್ರಾಂತ್ಯದ ಲಿಯುಗೌ ಟೌನ್‌ಶಿಪ್ ಬಳಿ ಭೂಕಂಪದ ಕೇಂದ್ರ ಬಿಂದು ಇದೆ. ಇಲ್ಲಿಂದ ಸುಮಾರು 570 ಕಿ.ಮೀ ದೂರದಲ್ಲಿರುವ ಪ್ರಮುಖ ನಗರವಾದ ಕ್ಸಿಯಾನ್‌ವರೆಗೂ ಭೂಮಿ ಅಲುಗಾಡಿದೆ ಎಂದು ಚೀನಾದ ಸರ್ಕಾರಿ ಸುದ್ದಿ ಸಂಸ್ಥೆ ಕ್ಸಿನ್ಹುವಾ ತಿಳಿಸಿದೆ.

ಭೂಕಂಪನದಿಂದ ಭಯ ಭೀತರಾದ ಜನರು ರಾತ್ರಿ ಮನೆಯಿಂದ ಹೊರಕ್ಕೆ ಓಡಿ ಬಂದು, ರಸ್ತೆಗಳಲ್ಲಿ ರಾತ್ರಿ ಕಳೆದಿದ್ದಾರೆ. ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡು ನೀರಿನ ಸಮಸ್ಯೆಯೂ ಉಂಟಾಗಿದೆ.

ಗನ್ಸು ಪ್ರಾಂತ್ಯದಲ್ಲಿ 105 ಜನರು ಹಾಗೂ ಕಿಂಗ್‌ಹೈ ಪ್ರಾಂತ್ಯದಲ್ಲಿ 13 ಜನರು ಮೃತಪಟ್ಟಿದ್ದಾರೆ. 579 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಇಸ್ರೇಲ್ ದಾಳಿ: 41 ಪ್ಯಾಲೆಸ್ಟೀನಿಯನ್ನರ ಸಾವು

**ರಫಾ (ಗಾಜಾ ಪಟ್ಟಿ)/ಕೈರೊ (ಎಪಿ, ರಾಯಿಟರ್ಸ್, ಪಿಟಿಐ):** ಹಮಾಸ್ ಬಂಡುಕೋರರ ನಿಯಂತ್ರಣದಲ್ಲಿರುವ ಗಾಜಾದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಇಸ್ರೇಲ್ ತೀವ್ರ ದಾಳಿ ನಡೆಸಿದ್ದು, 41 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ.

ಉತ್ತರ ಗಾಜಾದ ಜಬಾಲಿಯಾ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ 13 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದು, 75 ಮಂದಿ ಗಾಯಗೊಂಡಿದ್ದಾರೆ ಎಂದು ಹಮಾಸ್ ನಿಯಂತ್ರಿತ ಪ್ರದೇಶದಲ್ಲಿನ ಆರೋಗ್ಯ ಸಚಿವಾಲಯದ ವಕ್ತಾರರು ಮಂಗಳವಾರ ತಿಳಿಸಿದ್ದಾರೆ.

ದಕ್ಷಿಣ ಗಾಜಾದಲ್ಲಿ ಮಂಗಳವಾರ ನಡೆಸಿದ ದಾಳಿಯಲ್ಲಿ 28 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ.

**ಮೋದಿ, ನೆತನ್ಯಾಹು ಮಾತುಕತೆ (ನವದೆಹಲಿ ವರದಿ):** ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಸಂಘರ್ಷದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಜೊತೆ ಮಂಗಳವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಸಂಘರ್ಷಪೀಡಿತ ಪ್ರದೇಶದಲ್ಲಿನ ಸಮುದ್ರ ಸಂಚಾರ ಸುರಕ್ಷತೆಯ ಬಗ್ಗೆಯೂ ಮೋದಿ ಅವರು ಮಾತುಕತೆಯ ವೇಳೆ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಪ್ರಶ್ನೋತ್ತರ



**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಗಣೇಶ ಮೂರ್ತಿ,** ಬೆಂಗಳೂರು

● **ಪ್ರಶ್ನೆ:** ನಾನು ಈಗಾಗಲೇ ಅಟಲ್ ಪೆನ್ಷನ್ ಯೋಜನೆಯ ಫಲಾನುಭವಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಯಲ್ಲಿ ಇದನ್ನು 2015ರಲ್ಲಿ ತೆರೆದಿದ್ದೇನೆ. ನನ್ನಲ್ಲಿ ಪಿ.ಆರ್.ಎ.ಎನ್ ಸಂಖ್ಯೆ ಇದೆ. ಪ್ರಸ್ತುತ ನಾನು ಎನ್‌ಪಿಎಸ್ ಖಾತೆ ತೆರೆಯಲು ಉದ್ದೇಶಿಸಿದ್ದೇನೆ. ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಲು ಹೊಸ ಪಿ.ಆರ್.ಎ.ಎನ್ ಸಂಖ್ಯೆ ಪಡೆದುಕೊಳ್ಳಬಹುದೇ ಹಾಗೂ ಎರಡು ಪಿ.ಆರ್.ಎ.ಎನ್ ಸಂಖ್ಯೆಗಳನ್ನು ಹೊಂದಿಕೊಳ್ಳಬಹುದೇ. ಈ ಬಗ್ಗೆ ತಿಳಿಸಿ.

**ಉತ್ತರ:** ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ಅಟಲ್ ಪಿಂಚಣಿ ಯೋಜನೆ ಮತ್ತು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಇವೆರಡರಲ್ಲೂ ಹೂಡಿಕೆ ಮಾಡಬಹುದು. ಇವೆರಡೂ ಹೂಡಿಕೆಗಳು ಪಿಂಚಣಿ ಯೋಜನೆಗಳಾಗಿದ್ದರೂ, ಪ್ರತ್ಯೇಕ ವಯೋಮಾನ ಹಾಗೂ ಹೂಡಿಕೆಯ ವೈವಿಧ್ಯತೆಯನ್ನು ಹೊಂದಿವೆ. ಇವುಗಳ ನಿಯಮಾವಳಿ, ಲಾಭಗಳು ವ್ಯತ್ಯಾಸ ವಾಗಿವೆ. ಆದರೆ, ಎರಡು ಪಿ.ಆರ್.ಎ.ಎನ್ ಪಡೆಯುವ ಮೂಲಕ ಒಂದಕ್ಕಿಂತ ಅಧಿಕ ಎನ್‌ಪಿಎಸ್ ಖಾತೆಗಳಲ್ಲಿ ಹೂಡಿಕೆ ಮಾಡುವುದಕ್ಕೆ ನಿರ್ಬಂಧಗಳಿವೆ.

ಆದರೆ, ನಿಮ್ಮ ಪ್ರಶ್ನೆಯಂತೆ, ಯಾವುದೇ ಹೂಡಿಕೆದಾರ ಎರಡು ಪ್ರತ್ಯೇಕ ಯೋಜನೆಗಳಲ್ಲಿ ಹೂಡಿಕೆ ಮಾಡುವ ಕಾರಣ ಹೊಸ ಸಂಖ್ಯೆ ಹೊಂದುವುದರಲ್ಲಿ ತೊಂದರೆ ಇಲ್ಲ. ಇದನ್ನು ಎನ್‌ಪಿಎಸ್‌ಗೆ ಸಂಬಂಧಿಸಿದ ಸೆಂಟ್ರಲ್ ರೆಕಾರ್ಡ್ ಕೀಪಿಂಗ್ ಏಜೆನ್ಸಿ ಇವರ ಪ್ರಶ್ನೋತ್ತರ ಮಾಲಿಕೆಯಲ್ಲೂ ವಿವರಿಸಲಾಗಿದೆ.

**ಗಂಗಾಧರ ಶಿರ್ಕೆ,** ಬೆಂಗಳೂರು

● **ಪ್ರಶ್ನೆ:** ನಾನು ಹಾಗೂ ನನ್ನ ಪತ್ನಿ ಉದ್ಯೋಗಿಗಳಾಗಿದ್ದೇವೆ. ನಮ್ಮ ವಯಸ್ಸು ಕ್ರಮವಾಗಿ 45 ಹಾಗೂ 40. ಇಬ್ಬರ ಒಟ್ಟು ವಾರ್ಷಿಕ ಆದಾಯ ಸುಮಾರು ₹25 ಲಕ್ಷ (ತೆರಿಗೆ, ಪಿಎಫ್ ಪಾವತಿ ಕಳೆದು). ಪ್ರಸ್ತುತ ಒಂದು ವರ್ಷದ ಹಿಂದೆ ನಾವು ₹50 ಲಕ್ಷ ಸಾಲ ಪಡೆದು ಮನೆ ಕಟ್ಟಿಸಿದ್ದೇವೆ. ಸಾಲ ಇನ್ನು 14 ವರ್ಷ ಪಾವತಿಗೆ ಬಾಕಿ ಇದೆ. ವರ್ಷದ ಜಂಟಿ ಇಎಂಐ ಸುಮಾರು ₹49 ಸಾವಿರ ಬರುತ್ತಿದೆ. ಇದನ್ನು ಇಬ್ಬರೂ ಸಮಾನವಾಗಿ ಕಟ್ಟಿ ತೀರಿಸುತ್ತಿದ್ದೇವೆ. ತಿಂಗಳ ಮನೆ ಖರ್ಚು ₹40 ಸಾವಿರ. ನಮಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಅವರ ವಯಸ್ಸು ಎಂಟು ಹಾಗೂ ಹತ್ತು. ಶಾಲಾ ಶುಲ್ಕ ₹2.50 ಲಕ್ಷ. ನಾವು ಸೆಕ್ಷನ್ 80ಸಿ ಇದರಡಿ ಇರುವ ಎಲ್ಲಾ ಹೂಡಿಕೆ ಮಾಡಿರುತ್ತೇವೆ. ಅಗತ್ಯವಿರುವ ಇನ್ಶೂರೆನ್ಸ್ ಪಡೆದಿದ್ದೇವೆ.

ನನ್ನ ಪ್ರಶ್ನೆ ಏನೆಂದರೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹಣ ಹೇಗೆ ಉಳಿತಾಯ ಮಾಡಬಹುದು. ಸುಕನ್ಯಾ ಸಮೃದ್ಧಿ ಯೋಜನೆಯಲ್ಲೂ ಖಾತೆ ತೆರೆದು ಒಬ್ಬೊಬ್ಬರ ಹೆಸರಲ್ಲಿ ತಿಂಗಳಿಗೆ ತಲಾ ₹10 ಸಾವಿರ ಹೂಡಿಕೆ ಮಾಡುತ್ತಿದ್ದೇವೆ. ಇದಕ್ಕೆ ನಿಖರ ಬಡ್ಡಿ ಬರುವ ಕಾರಣ ಮುಂದೆ ಈ ಮೊತ್ತ ನಮಗೆ ಸಾಕಾಗಬಹುದೇ? ಮನೆಯಲ್ಲಿ ತಂದೆ, ತಾಯಿ ಇದ್ದು ಅವರ ಹೆಸರಲ್ಲಿ ವರ್ಷಕ್ಕೆ ₹40 ಸಾವಿರದ ಇನ್ಶೂರೆನ್ಸ್ ಪಾವತಿಸುತ್ತಿದ್ದೇನೆ. ನಮ್ಮ ನಿವೃತ್ತಿ ಬಗ್ಗೆಯೂ ಹಣ ಹೂಡಿಕೆ ಮಾಡುವುದಿದ್ದರೆ ಹೇಗೆ ಮಾಡಬೇಕು ಹಾಗೂ ಎಲ್ಲಿ ತೊಡಗಿಸಿಕೊಳ್ಳಬೇಕು.

**ಉತ್ತರ:** ಬದುಕಿನ ವಿವಿಧ ಹಂತದ ಆರ್ಥಿಕ ಅಗತ್ಯಗಳನ್ನು ಸಮೀಕರಿಸಿ, ನಮ್ಮ ಅತ್ಯಗತ್ಯ ಖರ್ಚು, ಹೂಡಿಕೆ ಇವೆಲ್ಲವನ್ನು ನಿಭಾಯಿಸಿಕೊಂಡು ಹೋಗುವುದು ಕೆಲವೊಮ್ಮೆ ಸಾಹಸವೇ. ನೀವು ಕೊಟ್ಟ ಮಾಹಿತಿಯಂತೆ ನೀವು ವಾರ್ಷಿಕವಾಗಿ ₹5.88 ಲಕ್ಷದ ಸಾಲ ಮರುಪಾವತಿ ಹಾಗೂ ಇಬ್ಬರು ಮಕ್ಕಳ ಹೆಸರಲ್ಲಿ ನೀವು ಮಾಡುವ ಸುಕನ್ಯಾ ಸಮೃದ್ಧಿ ಹೂಡಿಕೆ, ಇನ್ಶೂರೆನ್ಸ್ ಹೂಡಿಕೆ ಇತ್ಯಾದಿ ಒಟ್ಟಾರೆ ಹೂಡಿಕೆ ₹3 ಲಕ್ಷ ಎಂದು ತಿಳಿಸಲಾಗಿದೆ. ಇದು ಸೆಕ್ಷನ್ 80ಸಿ ಅಡಿ ಸಿಗುವ ತೆರಿಗೆ ವಿನಾಯಿತಿ ಮೊತ್ತವಾಗಿದೆ. ಇನ್ನು ಮನೆಯ ಖರ್ಚು ₹4.80 ಲಕ್ಷ, ಶಾಲಾ ಶುಲ್ಕ ಸುಮಾರು ₹2.50 ಲಕ್ಷ. ಇದರೊಡನೆ ನಿಮ್ಮ ತಂದೆ, ತಾಯಿ ಹೆಸರಲ್ಲಿ ಪಾವತಿಸುವ ಇನ್ಶೂರೆನ್ಸ್ ಮೊತ್ತ ₹40 ಸಾವಿರ. ಇವೆಲ್ಲಾ ಪಾವತಿಸಿ ಉಳಿಯುವ ಮೊತ್ತ ₹8 ರಿಂದ ₹9 ಲಕ್ಷ ಎಂದು ಊಹಿಸಲಾಗಿದೆ.

ಈ ಉಳಿಕೆ ಮೊತ್ತವನ್ನು ದೀರ್ಘಾವಧಿ ಹಾಗೂ ಮಧ್ಯಮ ಅವಧಿಯ ಹೂಡಿಕೆಗಳಾಗಿ ವಿಭಜಿಸಿ ಹೂಡಿಕೆ ಮಾಡಿ. ಯಾವತ್ತೂ ಅನಿಶ್ಚಿತ ಅಗತ್ಯಗಳ ಹೊಂದಾಣಿಕೆಗೆ ಐದರಿಂದ ಹತ್ತು ಲಕ್ಷದ ನಿಧಿಯನ್ನು ಮುಂದಿನ ಒಂದೆರಡು ವರ್ಷಗಳಲ್ಲಿ ಹಂತ ಹಂತವಾಗಿ ಹೊಂದಿಸಿ. ಇದು ಯಾವುದೇ ಸಮಯ ಹಿಂಪಡೆಯುವ ರೀತಿಯಲ್ಲಿ ಇರಲಿ. ಉಳಿದ ಮೊತ್ತವನ್ನು ನಿಮ್ಮ ಇಬ್ಬರ ಹೆಸರಲ್ಲಿ ಪ್ರತ್ಯೇಕವಾಗಿ ಎನ್‌ಪಿಎಸ್ ತೆರೆಯುವ ಮೂಲಕ ಹೂಡಿಕೆ ಮಾಡಿ. ಇದರಲ್ಲಿ ಹೂಡಿಕೆ ಮಾಡುವ ಮೊತ್ತವನ್ನು ಆಟೊ ಮೋಡ್ ಆಯ್ಕೆ ಮಾಡಿ ಹೂಡಿಕೆ ಮಾಡಿ. ಇದರಿಂದ ಮಾರುಕಟ್ಟೆ ವ್ಯತ್ಯಾಸಕ್ಕೆ ಅನುಗುಣವಾಗಿ ಎನ್‌ಪಿಎಸ್ ನಿರ್ವಾಹಕರು ಹೂಡಿಕೆದಾರರಿಗೆ ಲಾಭದಾಯಕವಾಗುವ ರೀತಿ ಖಾತೆಯ ಹಣ ನಿರ್ವಹಿಸುತ್ತಾರೆ. ಇದರಲ್ಲಿ ವರ್ಷಕ್ಕೆ ₹50 ಸಾವಿರ ತೊಡಗಿಸಿ. ಈ ಮೊತ್ತಕ್ಕೆ ಸೆಕ್ಷನ್ 80ಸಿಸಿಡಿ (1ಬಿ) ಇದರಡಿ ಹೆಚ್ಚುವರಿ ತೆರಿಗೆ ರಿಯಾಯಿತಿಯೂ ಸಿಗುತ್ತದೆ.

ನಿವೃತ್ತಿ ಸಮಯಕ್ಕೆ ನಿಮಗಿಬ್ಬರಿಗೂ ಇನ್ನು 15 ರಿಂದ 20 ವರ್ಷಗಳಿವೆ ಹಾಗೂ ಮಕ್ಕಳ ಉನ್ನತ ಶಿಕ್ಷಣ - ವಿವಾಹ ಇತ್ಯಾದಿಯನ್ನು ಗಮನಿಸಿ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಹೂಡಿಕೆ ಮಾಡಿರುವುದು ಸೂಕ್ತವೇ. ಇದಲ್ಲದೆ, ನೀವು ಶಿಕ್ಷಣಕ್ಕಾಗಿ ಅಗತ್ಯವಿರುವ ಹಣ ಕೂಡಿಡಲು ನಾಲ್ಕೈದು ಬಗೆಯ ಮ್ಯೂಚುವಲ್ ಫಂಡ್‌ಗಳಲ್ಲಿ ತಿಂಗಳಿಗೆ ₹25 ಸಾವಿರದಿಂದ ₹50 ಸಾವಿರ ಮೊತ್ತ ನಿಕ್ಷೇಪಿಸಿ. ಅರ್ಧದಷ್ಟು ಹಣ ಎಸ್‌ಐಪಿ ಮೂಲಕವೂ, ಉಳಿದ ಮೊತ್ತವನ್ನು ಮಾರುಕಟ್ಟೆ ಸೂಚ್ಯಂಕ 5 ರಿಂದ 10 ಶೇಕಡಾ ಕೆಳಕ್ಕೆ ಕುಸಿದಾಗ ಹಂತ ಹಂತವಾಗಿ ಹೂಡಿಕೆ ಮಾಡಿ. ನಿರ್ದಿಷ್ಟ ಫಂಡ್‌ಗಳ ಆಯ್ಕೆಗೆ ಅಗತ್ಯ ಮಾಹಿತಿ ಮಾರ್ಗದರ್ಶನವನ್ನು ಪಡೆದುಕೊಳ್ಳಿ. ಬ್ಯಾಲನ್ಸ್ಡ್ ಫಂಡ್, ಅಗ್ರೆಸ್ಸಿವ್ ಹೈಬ್ರಿಡ್ ಫಂಡ್, ಮಲ್ಟಿ ಅಸೆಟ್ ಫಂಡ್ ಇತ್ಯಾದಿಗಳ ಆಯ್ಕೆ ಉತ್ತಮ. ಇವು ದೀರ್ಘಕಾಲದ ನಿರಂತರ ಹೂಡಿಕೆಯಿಂದ ವರ್ಷಕ್ಕೆ ಸರಾಸರಿ ಶೇ 20ಕ್ಕೂ ಹೆಚ್ಚು ಲಾಭ ನೀಡಿರುವ ನಿದರ್ಶನಗಳಿವೆ.

ಯಾವತ್ತೂ ಮುಂದಿನ ವರ್ಷಗಳ ವೆಚ್ಚ ಗಮನಿಸಿ ಅದನ್ನು ಸರಿದೂಗಿಸುವ ಹೂಡಿಕೆಗಳನ್ನು ಮಾಡಿದರಷ್ಟೇ ದಿನನಿತ್ಯದ ಹಣದುಬ್ಬರ ಪ್ರಮಾಣವನ್ನು ನಿಭಾಯಿಸಬಹುದು. ನಿಮಗೆ ಷೇರು ಮಾರುಕಟ್ಟೆಯ ಅನುಭವವಿದ್ದರೆ ವರ್ಷದಲ್ಲಿ ಒಂದೆರಡು ಲಕ್ಷ ಮೊತ್ತವನ್ನು ನಿರಂತರವಾಗಿ ಹೂಡಿಕೆ ಮಾಡುವ ರೂಢಿ ಮಾಡಿಕೊಳ್ಳಿ. ಆಯ್ಕೆಯ ಕಂಪನಿಗಳು ಉತ್ತಮ ದರ್ಜೆಯದ್ದಾಗಿರಲಿ. ಇವು ಡಿವಿಡೆಂಡ್ ಕೊಡುವಂಥದಾಗಿರಲಿ, ಜೊತೆಗೆ ನಿಮ್ಮ ಬಂಡವಾಳವನ್ನು ವೃದ್ಧಿಸಿ ಲಾಭ ಗಳಿಸುವಲ್ಲಿ ನೆರವಾಗುವ ಗುಣಮಟ್ಟ ಹೊಂದಿರುವ ವಿಶ್ವಾಸಾರ್ಹ ಸಂಸ್ಥೆಗಳಾಗಿರಲಿ.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

## ಉದ್ಯಮ ದಿಗ್ಗಜರ ಜತೆ ಚರ್ಚೆ



ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಜಿಂದಾಲ್ ಸಮೂಹದ ಅಧ್ಯಕ್ಷ ಸಜ್ಜನ್ ಜಿಂದಾಲ್ ಅವರಿಗೆ ಸ್ಮರಣಿಕೆ ನೀಡಿದರು. ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಮತ್ತು ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಅವರು ಸರ್ಕಾರದ ನಿಯೋಗದ ಭಾಗವಾಗಿದ್ದರು

**ಬೆಂಗಳೂರು:** ಕರ್ನಾಟಕಕ್ಕೆ ಬಂಡವಾಳ ಆಕರ್ಷಿಸುವ ಉದ್ದೇಶದಿಂದ ಉದ್ಯಮಿಗಳ ಜೊತೆ ಮಾತುಕತೆಗೆ ಮುಂಬೈಗೆ ತೆರಳಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಮಹೀಂದ್ರ, ಜಿಂದಾಲ್ ಸ್ಟೀಲ್ ವರ್ಕ್ಸ್ (ಜೆಎಸ್‌ಡಬ್ಲ್ಯು), ಟಾಟಾ, ಬ್ಲ್ಯಾಕ್ ಸ್ಟೋನ್ ಮತ್ತು ಆರ್‌ಪಿಜಿ ಗ್ರೂಪ್‌ನ ಪ್ರಮುಖರನ್ನು ಮಂಗಳವಾರ ಭೇಟಿ ಮಾಡಿ ರಾಜ್ಯದಲ್ಲಿರುವ ಹೂಡಿಕೆಗೆ ಪೂರಕವಾದ ನೀತಿ, ಉತ್ತೇಜನ, ಪ್ರೋತ್ಸಾಹಕ ಕ್ರಮಗಳು, ವಿಶೇಷ ರಿಯಾಯಿತಿ, ಇತರ ಸೌಲಭ್ಯಗಳನ್ನು ವಿವರಿಸಿದರು.

ಸಚಿವರು ಮಹೀಂದ್ರ ಸಮೂಹದ ಪರವಾಗಿ ಅದರ ಅಂಗ ಸಂಸ್ಥೆಗಳಾದ ಆಟೊ ಆ್ಯಂಡ್ ಫಾರಂ ವಿಭಾಗದ ಅಧ್ಯಕ್ಷ ವಿನೋದ್ ಸಹಾಯ್, ಜಿಂದಾಲ್ ಸಮೂಹದ ಅಧ್ಯಕ್ಷ ಸಜ್ಜನ್ ಜಿಂದಾಲ್ ಮತ್ತು ಪಾರ್ಥ ಜಿಂದಾಲ್, ಟಾಟಾ ಸಮೂಹದ ಮುಖ್ಯಸ್ಥ ಎನ್. ಚಂದ್ರಶೇಖರನ್, ಆರ್‌ಪಿಜಿ ಸಮೂಹದ ಉಪಾಧ್ಯಕ್ಷ ಅನಂತ್ ಗೊಯೆಂಕ ಜೊತೆ ಮಾತುಕತೆ ನಡೆಸಿದರು.

'ಕರ್ನಾಟಕವು ಅತ್ಯುತ್ತಮವಾದ ಕೈಗಾರಿಕಾ ನೀತಿ ಹೊಂದಿದ್ದು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿದ್ಯುನ್ಮಾನ, ಸೆಮಿ ಕಂಡಕ್ಟರ್ ಉತ್ಪಾದನೆ, ಆರೋಗ್ಯ ಸೇವೆಗಳು, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ, ಮಾನವ ಸಂಪನ್ಮೂಲ ಅಭಿವೃದ್ಧಿ, ನೈಸರ್ಗಿಕ ಸಂಪನ್ಮೂಲ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಇತ್ಯಾದಿ ಕ್ಷೇತ್ರ ಗಳಲ್ಲಿ ಮುಂಚೂಣಿಯಲ್ಲಿದೆ. ಈಗಾಗಲೇ ಹೂಡಿಕೆ ಮಾಡಿರುವ ಕಂಪನಿಗಳು ಮತ್ತಷ್ಟು ಕ್ಷೇತ್ರಗಳಲ್ಲಿ ಬಂಡವಾಳ ತೊಡಗಿಸಬೇಕು' ಎಂದು ಸಚಿವರು ಮನವಿ ಮಾಡಿದರು.

'ಬೆಂಗಳೂರಿನ ಸಮೀಪದಲ್ಲಿ ಅತ್ಯಾಧುನಿಕ ಮತ್ತು ವಿಶ್ವ ದರ್ಜೆಯ ಜ್ಞಾನ, ಆರೋಗ್ಯ, ಸಂಶೋಧನೆ ಮತ್ತು ನಾವೀನ್ಯ ಸಿಟಿ (ಕೆಎಚ್‌ಐ-ಆರ್‌ಸಿಟಿ)ಯನ್ನು 2,000 ಎಕರೆ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗುತ್ತದೆ' ಎಂದೂ ಉದ್ಯಮಿಗಳಿಗೆ ವಿವರಿಸಿದರು.

**ಮುಂಬೈ ಧಾರಣೆ**

**ಶೇಂಗಾ**

19-12-2023

| | |
|---|---|
| ಜಾವಾ 70/80(ಹೊಸ) | 11100-11200 |
| ಜಾವಾ 80/90(ಹೊಸ) | 10500-10600 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 10500-10600 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1630 (1630) |
| ಒಂದು ವಾರದ ಡೆಲಿವರಿ | 1625 (1625) |
| ಸೋಯಾ ಕಚ್ಚಾ | 860 (860) |
| ಪಾಮ್ ವಾರದ ಡೆಲಿವರಿ | 826 (822) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 850 (855) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 61,800 (61,650) |
| ಬೆಳ್ಳಿ ಕೆ.ಜಿ | 73,650 (73,550) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ₹42,270 ಕೋಟಿಗೆ ವಾರಸುದಾರರೇ ಇಲ್ಲ!

ಒಂದನೇ ಪುಟದಿಂದ

ಪ್ರಧಾನ ಮಂತ್ರಿ ಉದ್ಯೋಗ ಸೃಜನ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿರುವ (ಪಿಎಂಇಜಿಪಿ) ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳಲ್ಲಿ ವಸೂಲಾಗದ ಸಾಲದ (ಎನ್‌ಪಿಎ) ಮೊತ್ತ ₹5.71 ಲಕ್ಷ ಕೋಟಿ (2023ರ ಮಾರ್ಚ್ 31ರ ವೇಳೆಗೆ) ಇದೆ. ಎನ್‌ಪಿಎ ಅನುಪಾತ ಶೇ 3.87ರಷ್ಟು ಆಗಿದೆ.

ಇದು ಹಿಂದಿನ ವರ್ಷಗಳಿಗೆ ಹೋಲಿಸಿದರೆ ನಿರಂತರವಾಗಿ ಇಳಿಕೆಯಾಗಿದೆ ಎಂದು ಆರ್‌ಬಿಐ ಅಂಕಿ-ಅಂಶ ಉಲ್ಲೇಖಿಸಿ ಸಚಿವರು ಮಾಹಿತಿ ನೀಡಿದ್ದಾರೆ.




ದುಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಂತರರಾಷ್ಟ್ರೀಯ ಕಾರ್ಯಾಚರಣೆಗಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶಾಮ್‌ಲಾಲ್ ಅಹ್ಮದ್ ಅವರು, ರ್‍ಯಾಂಡ್ ರಿಫೈನರಿಯ ಸಿಇಒ ಪ್ರವೀಣ್ ಬೈಜನಾಥ್ ಅವರಿಂದ 'ರ್‍ಯಾಂಡ್‌ಪ್ಯೂರ್' ಚಿನ್ನದ ಮೊದಲ ಶಿಪ್‌ಮೆಂಟ್ ಅನ್ನು ಸ್ವೀಕರಿಸಿದರು. ರ್‍ಯಾಂಡ್ ರಿಫೈನರಿ ಸಿಎಫ್‌ಒ ಡೀನ್ ಸುಬ್ರಮಣ್ಯನ್, ಮಲಬಾರ್ ಕಂಪನಿಯ ಹಿರಿಯ ಅಧಿಕಾರಿಗಳು ಹಾಜರಿದ್ದರು

## 10 ಕೋಟಿ ಜನಧನ ಖಾತೆ ನಿಷ್ಕ್ರಿಯ

**ನವದೆಹಲಿ (ಪಿಟಿಐ):** ದೇಶದಲ್ಲಿ ಪ್ರಧಾನ ಮಂತ್ರಿ ಜನಧನ ಯೋಜನೆಯಡಿ (ಪಿಎಂಜೆಡಿವೈ) ತೆರೆದಿರುವ ಶೇ 20ರಷ್ಟು ಖಾತೆಗಳು ನಿಷ್ಕ್ರಿಯವಾಗಿವೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಭಾಗವತ್ ಕರಾಡ್ ರಾಜ್ಯಸಭೆಗೆ ತಿಳಿಸಿದ್ದಾರೆ.

ದೇಶದಲ್ಲಿ ಅಂದಾಜು 51.11 ಕೋಟಿ ಜನಧನ ಖಾತೆಗಳಿದ್ದು, ಈ ಪೈಕಿ ಡಿಸೆಂಬರ್ 6ರವರೆಗೆ 10.34 ಕೋಟಿ ಖಾತೆಗಳು ನಿಷ್ಕ್ರಿಯವಾಗಿವೆ. ಇದರಲ್ಲಿ ಮಹಿಳೆಯರು ತೆರೆದಿರುವ 4.93 ಕೋಟಿ ಖಾತೆಗಳಿವೆ. ನಿಷ್ಕ್ರಿಯ ಖಾತೆಗಳಲ್ಲಿ ಸುಮಾರು ₹12,779 ಕೋಟಿ ಠೇವಣಿ ಇದೆ ಎಂದು ಸಚಿವರು ಹೇಳಿದ್ದಾರೆ.

## ಜಿಂಬಾಬ್ವೆ: 100ಕ್ಕೂ ಹೆಚ್ಚು ಆನೆಗಳ ಸಾವು

**ಹರಾರೆ(ಜಿಂಬಾಬ್ವೆ)(ಎಪಿ):** ಜಿಂಬಾಬ್ವೆಯ ಅತಿದೊಡ್ಡ ಹ್ವಾಂಗ್ ರಾಷ್ಟ್ರೀಯ ಉದ್ಯಾನದಲ್ಲಿ ಕೆಲ ದಿನಗಳಲ್ಲಿ 100ಕ್ಕೂ ಅಧಿಕ ಆನೆಗಳು ಮೃತಪಟ್ಟಿದ್ದು, ಈ ವಿದ್ಯಮಾನವು ದೇಶದಲ್ಲಿ ಭೀಕರ ಬರ ಆವರಿಸಿರುವುದನ್ನು ಸೂಚಿಸುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಹವಾಮಾನ ಬದಲಾವಣೆ ಹಾಗೂ ಎಲ್ ನಿನೊ ಕಾರಣಗಳಿಂದಾಗಿ ಜಿಂಬಾಬ್ವೆ ಸೇರಿದಂತೆ ಆಫ್ರಿಕಾದ ಹಲವು ರಾಷ್ಟ್ರಗಳಲ್ಲಿ ಬರುವ ದಿನಗಳಲ್ಲಿ ಮತ್ತಷ್ಟು ಮಳೆ ಕೊರತೆ ಕಂಡುಬರಲಿದೆ. ಅದರಲ್ಲೂ, ಹ್ವಾಂಗ್ ರಾಷ್ಟ್ರೀಯ ಉದ್ಯಾನ ಸೇರಿದಂತೆ ಇತರ ಪ್ರದೇಶಗಳಲ್ಲಿ ತಾಪಮಾನ ಹೆಚ್ಚಿ, ಮತ್ತಷ್ಟು ಆನೆಗಳು ಸಾವನ್ನಪ್ಪುವ ಸಾಧ್ಯತೆ ಇದೆ ಎಂದು ವನ್ಯಜೀವಿ ತಜ್ಞರು, ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಈ ವಿದ್ಯಮಾನವು ಆನೆಗಳು ಹಾಗೂ ಇತರ ಪ್ರಾಣಿಗಳ ಪಾಲಿಗೆ ಸಂಕಷ್ಟಕ್ಕೆ ಕಾರಣವಾಗಲಿದೆ ಎಂದು ಇಂಟರ್ ನ್ಯಾಷನಲ್ ಫಂಡ್ ಫಾರ್ ಅನಿಮಲ್ ವೆಲ್‌ಫೇರ್ ಹೇಳಿದೆ.

'ಎಲ್ ನಿನೊ ವಿದ್ಯಮಾನವು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ' ಎಂದು ಜಿಂಬಾಬ್ವೆ ರಾಷ್ಟ್ರೀಯ ಉದ್ಯಾನಗಳ ವಕ್ತಾರ ತಿನಾಶ್ ಫರಾವೊ ಹೇಳಿದ್ದಾರೆ. 2019ರಲ್ಲಿ ಈ ರಾಷ್ಟ್ರೀಯ ಉದ್ಯಾನದಲ್ಲಿ 200ಕ್ಕೂ ಹೆಚ್ಚು ಆನೆಗಳು ಮೃತಪಟ್ಟಿದ್ದವು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 1000-1100 |
| ನಡುಗೋಲು | 1250-1300 |
| ರಾಶಿ | 1350-1400 |
| ರಾಶಿ ಉತ್ತಮ | 1450-1500 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1800-1850 |
| ಹಸಿರು ಅತಿ ಉತ್ತಮ | 2200-2300 |
| ಕಾಳು ಮೆಣಸು | 580 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 15000-27500 |
| ಹೊಸತು | 27500-36000 |
| ಹಳತು | 42500-45500 |
| **ಹೊನ್ನಾವರ** | |
| ಹಳೆಚಾಲಿ | 36000-39000 |
| **ಕಾರ್ಕಳ** | |
| ಹೊಸತು | 25000-36500 |
| ಹಳತು | 30000-46000 |
| **ಸಾಗರ** | |
| ಬಿಳಿಗೋಟು | 24051-33466 |
| ಚಾಲಿ | 36699-37549 |
| ಕೋಕ | 35499-35499 |
| ಕೆಂಪುಗೋಟು | 34899-34899 |
| ರಾಶಿ | 41899-47219 |
| ಸಿಪ್ಪೆಗೋಟು | 6851-20799 |
| **ಶಿವಮೊಗ್ಗ** | |
| ರಾಶಿ | 36499-48299 |
| ಗೊರಬಲು | 18100-40388 |
| **ಸಿದ್ದಾಪುರ** | |
| ಬಿಳಿಗೋಟು | 30219-33699 |
| ಚಾಲಿ | 36219-38899 |
| ಕೋಕ | 30499-34499 |
| ಕೆಂಪುಗೋಟು | 30689-32469 |
| ರಾಶಿ | 43869-47582 |
| ತಟ್ಟಿಬೆಟ್ಟೆ | 41609-45899 |
| **ಶಿರಸಿ** | |
| ಬೆಟ್ಟೆ | 39289-46000 |
| ಬಿಳಿಗೋಟು | 28199-35699 |
| ಚಾಲಿ | 37009-39508 |
| ಕೆಂಪುಗೋಟು | 33721-34021 |
| ರಾಶಿ | 45099-47609 |
| **ಯಲ್ಲಾಪುರ** | |
| ಅಪಿ | 55309-58902 |
| ಬಿಳಿಗೋಟು | 24899-35619 |
| ಚಾಲಿ | 36300-39090 |
| ಕೋಕ | 17109-31699 |
| ಕೆಂಪುಗೋಟು | 24899-34290 |
| ರಾಶಿ | 45101-53969 |
| ತಟ್ಟಿಬೆಟ್ಟೆ | 36899-44101 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13600 | 13700 | - | 191.10 |
| ಎಸಿ | 7690 | 7100 | - | |
| ಆರ್‌ಪಿ | 10200 | 10800 | - | ಲಂಡನ್ |
| ಆರ್‌ಸಿ | 6360 | 6500 | - | 2824 ಡಾಲರ್ |

ಸಿವಿಲ್ ಅರ್ಜಿ ವಿಚಾರಣೆಯನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲು ಅಲಹಾಬಾದ್ ಹೈಕೋರ್ಟ್ ಆದೇಶ

# ಜ್ಞಾನವಾಪಿ: ಮಸೀದಿ ಸಮಿತಿ ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಮಸೀದಿ ಮಾಲೀಕತ್ವದ ಅರ್ಜಿಗಳ ವಿಚಾರಣೆ ಆರಂಭಕ್ಕೆ ಅನುವು
- ಅಧೀನ ನ್ಯಾಯಾಲಯ ವಿಚಾರಣೆಯನ್ನು ಅನಗತ್ಯವಾಗಿ ಮುಂದೂಡಬಾರದು

**ಲಖನೌ:** ಜ್ಞಾನವಾಪಿ ಮಸೀದಿ ಇರುವ ಜಾಗದಲ್ಲಿ ದೇವಸ್ಥಾನದ ಪುನರ್ ನಿರ್ಮಾಣ ಆಗಬೇಕು ಎಂಬ ಮನವಿ ಹೊಂದಿರುವ, ವಾರಾಣಸಿಯ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುವ ಅರ್ಜಿಗಳನ್ನು ಪ್ರಶ್ನಿಸಿ ಜ್ಞಾನವಾಪಿ ಮಸೀದಿ ಸಮಿತಿ ಮತ್ತು ಉತ್ತರ ಪ್ರದೇಶ ಕೇಂದ್ರ ಸುನ್ನಿ ವಕ್ಫ್ ಮಂಡಳಿ ಸಲ್ಲಿಸಿದ್ದ ಐದು ಅರ್ಜಿಗಳನ್ನು ಅಲಹಾಬಾದ್ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಇದು ಜ್ಞಾನವಾಪಿ ಮಸೀದಿ ಮಾಲೀಕತ್ವಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ಆರಂಭಿಸಲು ಅನುವು ಮಾಡಿಕೊಟ್ಟಿದೆ. ವಿವಾದಿತ ಪ್ರದೇಶದ ಮಾಲೀಕತ್ವವನ್ನು ಕೋರಿ, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ಕೋರಿ 1991ರಲ್ಲಿ ಸಲ್ಲಿಕೆಯಾಗಿರುವ ಸಿವಿಲ್ ಅರ್ಜಿಯೊಂದರ ವಿಚಾರಣೆಯನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯವು ಆರು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರು ಆದೇಶಿಸಿದ್ದಾರೆ.

ವಿವಾದಿತ ಪ್ರದೇಶದ ಮಾಲೀಕತ್ವವನ್ನು ಹಾಗೂ ಅಲ್ಲಿ ಪೂಜೆಗೆ ಅವಕಾಶವನ್ನು ನೀಡುವಂತೆ ಮನವಿ ಮಾಡಿರುವ ಸಿವಿಲ್ ಅರ್ಜಿಗೆ 'ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991' ಅಡ್ಡಿ ಉಂಟುಮಾಡುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಈ ವಿವಾದವು ಎರಡು ದೊಡ್ಡ ಸಮುದಾಯಗಳಿಗೆ ಸಂಬಂಧಿಸಿದೆ, ಇದು ರಾಷ್ಟ್ರೀಯ ಮಹತ್ವದ್ದು ಎಂದು ಹೈಕೋರ್ಟ್ ಹೇಳಿದೆ. ಅರ್ಜಿಗಳು ವಿಚಾರಣಾ ನ್ಯಾಯಾಲಯದಲ್ಲಿ 32 ವರ್ಷಗಳಿಂದ ಬಾಕಿ ಇವೆ ಎಂದು ಹೇಳಿದೆ.

ಸಿವಿಲ್ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕಿದೆ. ಸಂಬಂಧಪಟ್ಟ ಎಲ್ಲರೂ ಇದಕ್ಕೆ ಸಹಕಾರ ನೀಡಬೇಕು. ಅಧೀನ ನ್ಯಾಯಾಲಯವು ವಿಚಾರಣೆಯನ್ನು ಅನಗತ್ಯವಾಗಿ ಮುಂದೂಡಬಾರದು ಎಂದು ಸೂಚನೆ ನೀಡಿದೆ. ವಿಚಾರಣಾ ನ್ಯಾಯಾಲಯವು ಅಗತ್ಯ ಕಂಡುಬಂದರೆ, ಮಸೀದಿ ಆವರಣದ ಸಮೀಕ್ಷೆಯನ್ನು ಮತ್ತೊಮ್ಮೆ ನಡೆಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಸೂಚಿಸಬಹುದು ಎಂದು ಹೇಳಿದೆ.


ಪೂಜಾ ಸ್ಥಳಗಳ (ವಿಶೇಷ ಅವಕಾಶಗಳ) ಕಾಯ್ದೆಯು 'ಧಾರ್ಮಿಕ ಸ್ವರೂಪ'ವೆಂದರೆ ಏನು ಎಂಬುದನ್ನು ವ್ಯಾಖ್ಯಾನಿಸಿಲ್ಲ. ಬದಲಿಗೆ ಅದು, 'ಧಾರ್ಮಿಕ ಸ್ಥಳ' ಹಾಗೂ ಧಾರ್ಮಿಕ ಸ್ಥಳದ 'ಸ್ಥಿತಿಯ ಪರಿವರ್ತನೆ'ಯನ್ನು ಮಾತ್ರ ವ್ಯಾಖ್ಯಾನಿಸಿದೆ. ಸ್ಥಳವೊಂದರ ಧಾರ್ಮಿಕ ಸ್ವರೂಪವನ್ನು ನ್ಯಾಯಾಲಯವು ದಾಖಲೆಗಳ ಆಧಾರದಲ್ಲಿ ತೀರ್ಮಾನಿಸಬಹುದು ಎಂದು ಹೈಕೋರ್ಟ್ ಹೇಳಿದೆ.

ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದ ಮೊದಲ ಅರ್ಜಿಯನ್ನು 1991ರಲ್ಲಿ ಸಲ್ಲಿಸಲಾಗಿದೆ. ಜ್ಞಾನವಾಪಿ ಆವರಣದಲ್ಲಿ ಪೂಜೆ ಸಲ್ಲಿಸಲು ಅರ್ಜಿದಾರರು ಅವಕಾಶ ಕೋರಿದ್ದಾರೆ. ಎಎಸ್‌ಐ ತನ್ನ ಸಮೀಕ್ಷಾ ವರದಿಯನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಿದ ಮಾರನೆಯ ದಿನ ಹೈಕೋರ್ಟ್ ಈ ಆದೇಶ ನೀಡಿದೆ.

ಜ್ಞಾನವಾಪಿ ಮಸೀದಿ ಆವರಣದ ವಿಚಾರವಾಗಿ ಎರಡು ಸಮುದಾಯಗಳ ನಡುವೆ ದಶಕಗಳಿಂದಲೂ ವಿವಾದ ಇದೆ. ಆದರೆ, ಅಯೋಧ್ಯೆಯ ರಾಮ ಮಂದಿರ ವಿಚಾರವಾಗಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ನಂತರದಲ್ಲಿ, ಕಾಶಿ ವಿಶ್ವನಾಥ ದೇವಸ್ಥಾನದ ಆವರಣವನ್ನು 'ಹಿಂದಕ್ಕೆ ಪಡೆಯಲು' ನಡೆದಿರುವ ಪ್ರಯತ್ನಗಳಿಗೆ ಹೊಸ ಹುರುಪು ಬಂದಿದೆ.

ಮೊಘಲ್ ದೊರೆ ಔರಂಗಜೇಬ್ 17ನೆಯ ಶತಮಾನದಲ್ಲಿ ದೇವಸ್ಥಾನದ ಒಂದು ಭಾಗವನ್ನು ಧ್ವಂಸಗೊಳಿಸಿದ್ದ ಎಂಬುದು ಹಿಂದೂ ಅರ್ಜಿದಾರರ ವಾದ. ಔರಂಗಜೇಬ್‌ನ ಆಡಳಿತ ಅವಧಿಗಿಂತ ಮೊದಲೂ ಮಸೀದಿ ಅಲ್ಲಿ ಇತ್ತು, ಅದರ ಬಗ್ಗೆ ಜಮೀನು ದಾಖಲೆಗಳಲ್ಲಿಯೂ ಉಲ್ಲೇಖ ಇದೆ ಎಂಬುದು ಮುಸ್ಲಿಂ ಪ್ರತಿವಾದಿಗಳ ವಾದವಾಗಿದೆ.

## 'ಕಡೇ ಉಸಿರಿರುವವರೆಗೂ ಹೋರಾಟ'



ಜ್ಞಾನವಾಪಿ ಮಸೀದಿಯಲ್ಲಿ ಹಿಂದೂ ದೇವಾಲಯವನ್ನು ಪುನರ್ ಸ್ಥಾಪಿಸಬೇಕು ಎಂದು ಕೋರಿ 1991ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣಾಯೋಗ್ಯತೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಅಲಹಾಬಾದ್ ಹೈಕೋರ್ಟ್ ತಿರಸ್ಕರಿಸಿರುವುದರ ವಿರುದ್ಧ ಜ್ಞಾನವಾಪಿ ಮಸೀದಿ ನಿರ್ವಹಣಾ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿದೆ.

ಅಲಹಾಬಾದ್ ಹೈಕೋರ್ಟ್‌ನ ನಿರ್ಧಾರವನ್ನು ಪ್ರಶ್ನಿಸುವುದಾಗಿ ಹೇಳಿರುವ ಸಮಿತಿಯು, ಕಡೇ ಉಸಿರಿರುವವರೆಗೂ ನ್ಯಾಯಕ್ಕಾಗಿ ಹೋರಾಡುವುದಾಗಿ ಹೇಳಿದೆ.

'ನಮಗೆ ಆದೇಶದ ಪ್ರತಿ ದೊರೆತಿದೆ. ಇದನ್ನು ಅಧ್ಯಯನಕ್ಕೊಳಪಡಿಸುತ್ತೇವೆ. ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂಬ ಕುರಿತು ಸಮಿತಿಯ ಸಭೆಯಲ್ಲಿ ತೀರ್ಮಾನಿಸುತ್ತೇವೆ. ಬುಧವಾರ ಸಂಜೆಯೊಳಗೆ ಒಂದು ತೀರ್ಮಾನಕ್ಕೆ ಬರುತ್ತೇವೆ' ಎಂದು ಅಂಜುಮನ್ ಇಂತೆಝಾಮಿಯಾ ಮಿಸೀದಿಯ ಜಂಟಿ ಕಾರ್ಯದರ್ಶಿ ಸಯ್ಯದ್ ಮೊಹಮ್ಮದ್ ಯಾಸಿನ್ ಅವರು ಹೇಳಿದ್ದಾರೆ.

## ಭದ್ರತಾ ವೈಫಲ್ಯದ ಹಿಂದಿರುವವರಿಗೆ ವಿಪಕ್ಷಗಳ ಬೆಂಬಲ: ಪ್ರಧಾನಿ

ಒಂದನೇ ಪುಟದಿಂದ

ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಪ್ರತಿಭಟನೆ ನಡೆಸುತ್ತಿರುವುದನ್ನು ವಿರೋಧಿಸಿ ತೀವ್ರ ವಾಗ್ದಾಳಿ ನಡೆಸಿದ ಅವರು, 'ಭದ್ರತಾ ವೈಫಲ್ಯ ಘಟನೆಗೆ ರಾಜಕೀಯ ಬಣ್ಣ ನೀಡುವ ಮೂಲಕ ಈಚಿನ ವಿಧಾನಸಭೆ ಚುನಾವಣಾ ಸೋಲಿನ ಹತಾಶೆಯನ್ನು ವಿಪಕ್ಷಗಳು ಹೊರಹಾಕುತ್ತಿವೆ. ವಿರೋಧ ಪಕ್ಷಗಳ ಗುರಿಯು ನಮ್ಮ ಸರ್ಕಾರವನ್ನು ಕೆಳಗಿಳಿಸುವುದಾಗಿದೆ. ಆದರೆ ನಮ್ಮ ಸರ್ಕಾರದ ಗುರಿಯು ದೇಶಕ್ಕೆ ಉಜ್ವಲ ಭವಿಷ್ಯ ಖಾತ್ರಿಪಡಿಸುವುದಾಗಿದೆ' ಎಂದು ಹೇಳಿದರು.

'ಸಂಸತ್ತಿನ ಭದ್ರತಾ ವೈಫಲ್ಯವನ್ನು ಸಮರ್ಥಿಸಿಕೊಳ್ಳುವ ಕೆಲಸ ನಡೆಯುತ್ತಿದೆ. ಇದು ಭದ್ರತಾ ವೈಫಲ್ಯದಷ್ಟೇ ಗಂಭೀರ ಸಮಸ್ಯೆ' ಎಂದು ಮೋದಿ ಹೇಳಿರುವುದಾಗಿ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ತಿಳಿಸಿದರು.

ನಿರುದ್ಯೋಗ, ಬೆಲೆ ಏರಿಕೆಯು ಸಂಸತ್ತಿನ ಭದ್ರತಾ ವೈಫಲ್ಯಕ್ಕೆ ಕಾರಣ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಚೆಗೆ ಆರೋಪಿಸಿದ್ದರು. ಈ ಹೇಳಿಕೆ ಹಿನ್ನೆಲೆಯಲ್ಲಿ ಮೋದಿ ಅವರು ಹೀಗೆ ಹೇಳಿದ್ದಾರೆ. ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರಿಸಿರುವ ಎಲ್ಲರೂ ಭದ್ರತಾ ವೈಫಲ್ಯ ಕೃತ್ಯವನ್ನು ಖಂಡಿಸಬೇಕು ಎಂದಿದ್ದಾರೆ.

**ಹತ್ತು ವರ್ಷಗಳಲ್ಲಿ ನಾನು ದೆಹಲಿಯಲ್ಲಿರುವ ವೇಳೆ ಬಿಜೆಪಿ ಸಂಸದೀಯ ಸಭೆಯನ್ನು ತಪ್ಪಿಸಿಕೊಂಡಿಲ್ಲ. ನನ್ನಲ್ಲಿ ಬಿಜೆಪಿ ಕಾರ್ಯಕರ್ತ ಜೀವಂತವಾಗಿದ್ದಾನೆ**

**ನರೇಂದ್ರ ಮೋದಿ**, ಪ್ರಧಾನ ಮಂತ್ರಿ

ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರಿಸಿರುವ ಪಕ್ಷವೊಂದು ಬಹಿರಂಗವಾಗಿ ಅಥವಾ ಒಳಗೊಳಗೇ ಇಂಥ ಕೃತ್ಯಗಳನ್ನು ಬೆಂಬಲಿಸಲು ಹೇಗೆ ಸಾಧ್ಯ ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಪ್ರಶ್ನಿಸಿದರು.

'ನಮ್ಮ ಧ್ವನಿಯನ್ನು ಹತ್ತಿಕ್ಕಲಾಗುತ್ತಿದೆ ಮತ್ತು ಪ್ರಜಾಪ್ರಭುತ್ವದ ಮಿತಿಯಲ್ಲೇ ನಾವು ವಿಪಕ್ಷಗಳ ಸಂಖ್ಯೆಯನ್ನು ಬಯಲಿಗೆಳೆಯುತ್ತೇವೆ. ಯಾರು ಸಂಸತ್ ಅಧಿವೇಶನದಲ್ಲಿ ಭಾಗಿಯಾಗಿದ್ದಿದ್ದರೋ ಅವರು ಸಂಸತ್ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿಲ್ಲ' ಎಂದು ಉಭಯ ಸದನಗಳಲ್ಲಿ ಮಂಡನೆಯಾಗಬೇಕಿರುವ ಪ್ರಮುಖ ಮಸೂದೆಗಳನ್ನು ಉಲ್ಲೇಖಿಸಿ ಹೇಳಿದರು.

ಬಿಜೆಪಿ ತೀವ್ರ ಖಂಡನೆ; ಕ್ಷಮೆಯಾಚಿಸುವಂತೆ ಪ್ರಲ್ಹಾದ ಜೋಶಿ ಒತ್ತಾಯ

# ಧನಕರ್ ಅಣಕಿಸಿದ ಟಿಎಂಸಿ ಸಂಸದ

**ನವದೆಹಲಿ (ಪಿಟಿಐ):** ಸಂಸದರ ಅಮಾನತು ವಿರುದ್ಧ ಸಂಸತ್ತಿನ ಮೆಟ್ಟಿಲುಗಳ ಮೇಲೆ ಪ್ರತಿಪಕ್ಷಗಳು ಮಂಗಳವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರನ್ನು ಅಣಕಿಸಿದ್ದು ವಿವಾದಕ್ಕೆ ಕಾರಣವಾಯಿತು.

ಬ್ಯಾನರ್ಜಿ ಅವರು ಧನಕರ್ ಅವರನ್ನು ಅಣಕಿಸುತ್ತಿದ್ದಾಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿಡಿಯೊ ಮಾಡುತ್ತಿದ್ದುದು ಕಂಡು ಬಂತು. ರಾಜ್ಯಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಸಭಾಪತಿ, 'ವೈಯಕ್ತಿಕವಾಗಿ ನನಗೆ ನೋವಾಗಿದೆ. ಸಭಾಪತಿ ಅವರನ್ನು ಅಣಕಿಸುತ್ತಿದ್ದ ಸಂಸತ್ ಸದಸ್ಯರನ್ನು ನಿಮ್ಮ ಹಿರಿಯ ನಾಯಕರು ವಿಡಿಯೊ ಮಾಡುತ್ತಿದ್ದಾಗ ನನಗೆ ಹೇಗಾಗಿರಬಹುದು ಎಂಬುದನ್ನು ಕಲ್ಪಿಸಿಕೊಳ್ಳಿ' ಎಂದು ಹೇಳಿದರು.

'ನಿಮ್ಮ ಪಕ್ಷವು ವಿಡಿಯೊವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿ ನಂತರದಲ್ಲಿ ಅದನ್ನು ಹಿಂದಕ್ಕೆ ಪಡೆಯುತ್ತದೆ. ನನ್ನನ್ನು ಅವಮಾನಿಸಲು, ಕೀಳಾಗಿ ಕಾಣಲು, ರೈತನಾಗಿರುವ ನನ್ನ ಹಿನ್ನೆಲೆಯನ್ನು ಅಣಕಿಸಲು, ಜಾಟ್ ಸಮುದಾಯದ ನನ್ನ ಸ್ಥಾನಮಾನವನ್ನು ಮತ್ತು ಸಭಾಪತಿಯಾಗಿ ನನ್ನ ಸ್ಥಾನವನ್ನು ಅವಮಾನಿಸಲು ನೀವು ವಕ್ತಾರರ ಟ್ವಿಟರ್ ಅಧಿಕೃತ ಖಾತೆಯನ್ನು ಬಳಸುತ್ತೀರಿ' ಎಂದು ಧನಕರ್ ಅವರು ಕಾಂಗ್ರೆಸ್ ಸದಸ್ಯ ಚಿದಂಬರಂ ಅವರನ್ನು ಉದ್ದೇಶಿಸಿ ನುಡಿದರು.

ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಈ ಘಟನೆಯು ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ಅಣಕಿಸಿದಂತೆ ಎಂದರು. ಅಲ್ಲದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ಕ್ಷಮೆ ಕೋರಬೇಕು ಎಂದು ಒತ್ತಾಯಿಸಿದರು. ಬಿಜೆಪಿಯ ಇತರ ನಾಯಕರೂ ಬ್ಯಾನರ್ಜಿ ಅವರ ನಡವಳಿಕೆಯನ್ನು ತೀವ್ರವಾಗಿ ಖಂಡಿಸಿದರು.



ದೆಹಲಿಯಲ್ಲಿ ಮಂಗಳವಾರ ಸಂಸತ್ತಿನ ಹೊರಗೆ ಸಂಸದರ ಅಮಾನತು ವಿರುದ್ಧ ಪ್ರತಿಭಟಿಸುತ್ತಿದ್ದ ವೇಳೆ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ರಾಜ್ಯಸಭೆಯ ಸಭಾಪತಿ ಧನಕರ್ ಅವರನ್ನು ಅಣಕಿಸಿದರು –ಪಿಟಿಐ ಚಿತ್ರ

### ವಿಪಕ್ಷ ಕಿಡಿ

**ನವದೆಹಲಿ (ಪಿಟಿಐ):** ಲೋಕಸಭೆಯಿಂದ ಅಮಾನತುಗೊಂಡಿರುವ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. 'ನಮ್ಮ ಸಂಸತ್ತು ಶೀಘ್ರದಲ್ಲೇ ಉತ್ತರ ಕೊರಿಯಾ ಸಂಸತ್ತಿನ ಹಾಗೆ ಆಗಲಿದೆ' ಎಂದು ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ವ್ಯಂಗ್ಯವಾಡಿದ್ದಾರೆ.

'ಉತ್ತರ ಕೊರಿಯಾ ಸಂಸತ್ತನ್ನೇ ಹೋಲುವ ದಿನಗಳು ದೂರವಿಲ್ಲ. ಆದರೆ ಅಲ್ಲಿಗೂ, ಇಲ್ಲಿಗೂ ಇರುವ ಒಂದು ವ್ಯತ್ಯಾಸವೆಂದರೆ ಪ್ರಧಾನಿ ಬರುವಾಗ ಚಪ್ಪಾಳೆ ಹೊಡೆಯುವ ಸಂಪ್ರದಾಯ ಮಾತ್ರ ನಮ್ಮಲ್ಲಿ ಇಲ್ಲ' ಎಂದಿದ್ದಾರೆ.

ಶಿರೋಮಣಿ ಅಕಾಲಿದಳದ ಸಂಸದೆ ಹರ್‌ಸಿಮ್ರತ್ ಕೌರ್ ಬಾದಲ್, 'ಸಂವಿಧಾನದ ಸ್ಮಶಾನ ನಮಗೆ ಇಲ್ಲಿ ಗೋಚರಿಸುತ್ತಿದೆ' ಎಂದು ಕಿಡಿಕಾರಿದರು.

# ಭಗತ್ ಸಿಂಗ್ ಗ್ರೂಪ್‌ನಲ್ಲಿದ್ದ ಆರೋಪಿಗಳು

**ನವದೆಹಲಿ (ಪಿಟಿಐ):** ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಆರು ಮಂದಿ ಆರೋಪಿಗಳು ಭಗತ್ ಸಿಂಗ್ ಮತ್ತು ಚಂದ್ರಶೇಖರ ಆಜಾದ್ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಸೃಷ್ಟಿಸಿದ್ದ ಅರ್ಧ ಡಜನ್ನಿಗೂ ಹೆಚ್ಚಿನ ಗ್ರೂಪ್‌ಗಳ ಸದಸ್ಯರಾಗಿದ್ದರು ಎಂದು ಪೊಲೀಸ್ ಮೂಲಗಳು ಮಂಗಳವಾರ ತಿಳಿಸಿವೆ.

ಆರೋಪಿಗಳು ಹಾಗೂ ಆ ಗ್ರೂಪ್‌ಗಳ ಇತರ ಸದಸ್ಯರು, ಸ್ವಾತಂತ್ರ್ಯ ಹೋರಾಟಗಾರರ ಆಲೋಚನೆಗಳ ಬಗ್ಗೆ ಮತ್ತು ಅವರ ಚಿಂತನೆಗಳ ಬಗ್ಗೆ ನಿರಂತರವಾಗಿ ಚರ್ಚಿಸುತ್ತಿದ್ದರು. ಅವುಗಳಿಗೆ ಸಂಬಂಧಿಸಿದ ವಿಡಿಯೊ ತುಣುಕುಗಳನ್ನು ಹಂಚಿಕೊಳ್ಳುತ್ತಿದ್ದರು ಎಂದು ಮೂಲಗಳು ವಿವರಿಸಿವೆ.

ಆರೋಪಿಗಳು ಕ್ರಾಂತಿಕಾರಿಗಳಿಂದ ಬಹುವಾಗಿ ಪ್ರಭಾವಿತರಾಗಿದ್ದರು ಎಂಬುದನ್ನು ಅವರ ಸಾಮಾಜಿಕ ಜಾಲತಾಣ ಖಾತೆಗಳು ಹೇಳುತ್ತಿವೆ. ಹೀಗೆ ಪ್ರಭಾವಿತರಾಗಿದ್ದ ಕಾರಣ ಅವರು ಭಗತ್ ಸಿಂಗ್‌ನ ಕೃತ್ಯವನ್ನು ಸಂಸತ್ತಿನಲ್ಲಿ ಅನುಕರಿಸಲು ತೀರ್ಮಾನಿಸಿದ್ದರು.

ಆರೋಪಿಗಳು ಸಂಸತ್ತಿನ ಭದ್ರತೆ ಉಲ್ಲಂಘಿಸುವ ಯೋಜನೆಯನ್ನು ಸಿಗ್ನಲ್ಸ್ ಆ್ಯಪ್ ಮೂಲಕ ಹಂಚಿಕೊಂಡಿದ್ದರು, ಮೈಸೂರಿನಲ್ಲಿ ಕಳೆದ ವರ್ಷ ಭೇಟಿ ಮಾಡಿದ್ದರು. ಆರೋಪಿ ಮನೋರಂಜನ್ ಅವರು ಇತರರ ಪ್ರಯಾಣದ ವೆಚ್ಚಗಳನ್ನು ಭರಿಸಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಲ್ಕು ಮಂದಿ ಆರೋಪಿಗಳ ಮೊಬೈಲ್ ಫೋನ್‌ನ ಡುಪ್ಲಿಕೇಟ್ ಸಿಮ್ ಕಾರ್ಡ್ ಪಡೆದುಕೊಳ್ಳಲು ಪೊಲೀಸರು ಯತ್ನಿಸುತ್ತಿದ್ದಾರೆ. ಈ ಫೋನ್‌ಗಳನ್ನು ಆರೋಪಿಗಳು ಸುಟ್ಟುಹಾಕಿದ್ದಾರೆ. ಫೋನ್‌ನ ಕೆಲವು ತುಣುಕುಗಳನ್ನು ಮಾತ್ರ ಪೊಲೀಸರು ಸುಪರ್ದಿಗೆ ತೆಗೆದುಕೊಂಡಿದ್ದಾರೆ.

## ಹೇಳಿಕೆಗಳ ವಿಡಿಯೊ ಚಿತ್ರೀಕರಣ

**ಮೈಸೂರು:** ಲೋಕಸಭೆಯಲ್ಲಿ ಕಲಾಪ ನಡೆಯುತ್ತಿದ್ದಾಗ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದ ಆರೋಪಿ ಡಿ.ಮನೋರಂಜನ್ ಹಾಗೂ ಆತನ ಪೋಷಕರ ಹೇಳಿಕೆಗಳ ನಡುವೆ ಸಾಮ್ಯತೆ ಕಂಡು ಬಾರದ ಹಿನ್ನೆಲೆಯಲ್ಲಿ, ದೆಹಲಿ ಪೊಲೀಸರು ಮಂಗಳವಾರದ ವಿಚಾರಣೆಯ ಸಂಪೂರ್ಣ ವಿಡಿಯೊ ಚಿತ್ರೀಕರಣ ಮಾಡಿಕೊಂಡರು. ಆರೋಪಿಯ ತಂದೆ ದೇವರಾಜೇಗೌಡ ಅವರ ಮೊಬೈಲ್ ಫೋನ್ ವಶಕ್ಕೆ ಪಡೆದುಕೊಂಡರು ಎಂದು ತಿಳಿದುಬಂದಿದೆ.

ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಮಹಿಳಾ ಅಧಿಕಾರಿ ಸೇರಿ ನಾಲ್ವರು ಅಧಿಕಾರಿಗಳು ವಿಜಯನಗರ ಎರಡನೇ ಹಂತದಲ್ಲಿರುವ ಆರೋಪಿಯ ಮನೆಗೆ ಬಂದು, ಆತನ ತಂದೆ, ತಾಯಿಯನ್ನು ಪ್ರತ್ಯೇಕವಾಗಿ 2 ಗಂಟೆಗಳ ಕಾಲ ವಿಚಾರಣೆ ನಡೆಸಿದರು. ಅವರು ಮಗನಿಗೆ ನೀಡುತ್ತಿದ್ದ ಹಣದ ಜೊತೆಗೆ, ಆತನ ಇನ್ನಿತರ ಹಣದ ಮೂಲಗಳ ಬಗ್ಗೆಯೂ ಕೇಳಿದರು ಎಂದು ಮೂಲಗಳು ತಿಳಿಸಿವೆ.

**ಪಾಲಕರ ಅಸಹಾಯಕತೆ:** 'ಊರಿನಿಂದ ಹೊರಗೆ ಹೋಗಬಾರದೆಂದು ಪೊಲೀಸರು ಸೂಚಿಸಿದ್ದಾರೆ. ಮಾಧ್ಯಮದವರೂ ನಿತ್ಯ ಮನೆ ಮುಂದೆಯೇ ನಿಂತಿರುತ್ತಾರೆ. ಹೊರಗೆ ಹೋಗಲಾಗದೆ ಮಾನಸಿಕವಾಗಿ ಹಿಂಸೆಯಾಗುತ್ತಿದೆ' ಎಂದು ದೇವರಾಜೇಗೌಡ ದೆಹಲಿ ಅಧಿಕಾರಿಗಳೊಂದಿಗೆ ಅಸಹಾಯಕತೆ ತೋಡಿಕೊಂಡರು.

'ಮಗ ದೆಹಲಿಯಲ್ಲಿ ಕೆಲಸದಲ್ಲಿದ್ದಾನೆ. ಅಲ್ಲಿಂದ ಆಗಾಗ ಕರೆ ಬರುತ್ತಿತ್ತು. ಮೈಸೂರಿನಲ್ಲಿರಲು ಆತನಿಗೆ ಸಮಯವೇ ಸಿಗದಂತಾಗಿದೆ ಎಂದು ಆರೋಪಿಯ ತಾಯಿ ಶೈಲಜಾ ನೆರೆಹೊರೆಯವರೊಂದಿಗೆ ಹೇಳಿಕೊಂಡಿದ್ದರು' ಎಂದು ತಿಳಿದುಬಂದಿದೆ.



ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಡಿ.ಮನೋರಂಜನ್ ಮನೆಯಲ್ಲಿ ಮಂಗಳವಾರ ಪೊಲೀಸ್ ಅಧಿಕಾರಿಗಳು ವಿಚಾರಣೆ ನಡೆಸಿ ತೆರಳಿದರು.

## ಖರ್ಗೆ ಪ್ರಧಾನಿ ಅಭ್ಯರ್ಥಿ?

ಒಂದನೇ ಪುಟದಿಂದ

ಸೀಟು ಹಂಚಿಕೆ ಪ್ರಕ್ರಿಯೆಯನ್ನುಆದಷ್ಟು ಬೇಗ ಆರಂಭಿಸಬೇಕು ಎಂಬ ವಿಚಾರವಾಗಿ ಎಲ್ಲ ನಾಯಕರಲ್ಲಿ ಒಮ್ಮತ ಮೂಡಿದೆ ಎಂದು ಗೊತ್ತಾಗಿದೆ. ಪ್ರತಿ ತಿಂಗಳೂ ಎಂಟರಿಂದ ಹತ್ತು ಸಾರ್ವಜನಿಕ ರ‍್ಯಾಲಿಗಳನ್ನು ಆಯೋಜಿಸಬೇಕು, ಸಂಸದರನ್ನು ಅಮಾನತು ಮಾಡಿರುವ ಕ್ರಮ ಖಂಡಿಸಿ ಶುಕ್ರವಾರ ದೇಶದಾದ್ಯಂತ ಪ್ರತಿಭಟನೆ ನಡೆಸಬೇಕು ಎಂದು ಎಲ್ಲ ನಾಯಕರೂ ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿಯನ್ನು ಸೋಲಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂಬ ವಿಚಾರವಾಗಿ ಎಲ್ಲ ಪ್ರಮುಖರಲ್ಲಿ ಒಮ್ಮತ ಮೂಡಿದೆ ಎಂದು ಖರ್ಗೆ ಅವರು ತಿಳಿಸಿದರು. ಸೀಟು ಹಂಚಿಕೆ ಪ್ರಕ್ರಿಯೆಯನ್ನು ರಾಜ್ಯಗಳ ಮಟ್ಟದಲ್ಲಿ ಶೀಘ್ರವೇ ಆರಂಭಿಸಲಾಗುವುದು. ಅಲ್ಲಿ ಭಿನ್ನಾಭಿಪ್ರಾಯ ಮೂಡಿದಲ್ಲಿ, ಕೇಂದ್ರ ನಾಯಕರ ಹಂತದಲ್ಲಿ ಬಗೆಹರಿಸಿಕೊಳ್ಳಲಾಗುವುದು ಎಂದರು.

'ರಾಜ್ಯಗಳ ಮಟ್ಟದಲ್ಲಿ ಕೆಲವು ಸಮಸ್ಯೆಗಳು ಇರಬಹುದು. ಉತ್ತರ ಪ್ರದೇಶ, ದೆಹಲಿ ಮತ್ತು ಪಂಜಾಬ್‌ನಲ್ಲಿ ಈ ವಿಚಾರವನ್ನು ಬಗೆಹರಿಸಿಕೊಳ್ಳಬೇಕು' ಎಂದು ಖರ್ಗೆ ಅವರು ಎಸ್‌ಪಿ ಮತ್ತು ಎಎಪಿ ಬಗ್ಗೆ ಉಲ್ಲೇಖಿಸಿ ಹೇಳಿದರು. ಟಿಎಂಸಿ ನಾಯಕ ಡೆರೆಕ್ ಒಬ್ರಯಾನ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಶಿವಸೇನಾ (ಉದ್ಧವ್ ಠಾಕ್ರೆ ಬಣ) ನಾಯಕ ಉದ್ಧವ್ ಠಾಕ್ರೆ ಮತ್ತು ಎಎಪಿಯ ಕೇಜ್ರಿವಾಲ್ ಅವರು ಸೀಟು ಹಂಚಿಕೆ ಮಾತುಕತೆ ತಕ್ಷಣ ನಡೆಯಬೇಕು ಎಂಬ ಆಗ್ರಹ ಮಂಡಿಸಿದರು.

## ಸಿಟ್ಟಿಗೆದ್ದ ನಿತೀಶ್ ಕುಮಾರ್

**ನವದೆಹಲಿ:** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮಾತುಗಳನ್ನು ಅನುವಾದಿಸಿ ಹೇಳಬೇಕು ಎಂಬ ಬೇಡಿಕೆಯನ್ನು 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಡಿಎಂಕೆ ನಾಯಕರು ಇರಿಸಿದಾಗ, ನಿತೀಶ್ ಕುಮಾರ್ ತಾಳ್ಮೆ ಕಳೆದುಕೊಂಡು ರೇಗಿದರು ಎನ್ನಲಾಗಿದೆ.

ಡಿಎಂಕೆ ನಾಯಕರಾದ ಎಂ.ಕೆ. ಸ್ಟಾಲಿನ್ ಮತ್ತು ಟಿ.ಆರ್. ಬಾಲು ಅವರು ಸಭೆಯಲ್ಲಿ ಇದ್ದರು. ಡಿಎಂಕೆ ಪ್ರತಿನಿಧಿಗಳು ಈ ಬೇಡಿಕೆ ಇರಿಸಿದ ನಂತರದಲ್ಲಿ, ಆರ್‌ಜೆಡಿಯ ಮನೋಜ್ ಕೆ. ಝಾ ಅವರು ಅನುವಾದಿಸಲು ಆರಂಭಿಸಿದರು. ಆದರೆ, ಅನುವಾದ ಮಾಡುವ ಕೆಲಸ ಬೇಡ ಎಂದು ನಿತೀಶ್ ಅವರು ಝಾ ಅವರಿಗೆ ಸೂಚಿಸಿದರು ಎನ್ನಲಾಗಿದೆ.

'ರಾಷ್ಟ್ರಭಾಷೆಯಾಗಿರುವ ಹಿಂದಿಯನ್ನು ಡಿಎಂಕೆ ನಾಯಕರು ಕಲಿಯಬೇಕು' ಎಂದು ನಿತೀಶ್ ಅವರು ಹೇಳಿದರು. ದೇಶವು ಬ್ರಿಟಿಷರನ್ನು ಬಹಳ ಹಿಂದೆಯೇ ಹೊರಹಾಕಿದೆ, ವಸಾಹತುಶಾಹಿಯ ಪಳೆಯುಳಿಕೆಗಳನ್ನು ಕೂಡ ಹೊರಗೆಸೆಯಬೇಕು ಎಂದು ನಿತೀಶ್ ಹೇಳಿದರು ಎಂದು ಮೂಲಗಳು ತಿಳಿಸಿವೆ. 'ನಾನು ಇಲ್ಲಿ ಯಾವುದೇ ಹುದ್ದೆಗಾಗಿ ಬಂದಿಲ್ಲ. ಆದರೂ ಕೆಲವರು ಸುಳ್ಳುಸುದ್ದಿ ಹರಡುತ್ತಿದ್ದಾರೆ' ಎಂದ ನಿತೀಶ್, ತಮ್ಮ ಮಾತುಗಳ ಅನುವಾದಕ್ಕೆ ಅವಕಾಶ ಕೊಡಲಿಲ್ಲ ಎಂದು ಗೊತ್ತಾಗಿದೆ.

# 49 ಸಂಸದರ ಅಮಾನತು

ಒಂದನೇ ಪುಟದಿಂದ

ಸಂಸದರನ್ನು ಅಮಾನತುಗೊಳಿಸಬೇಕೆಂಬ ಗೊತ್ತುವಳಿಯನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮಂಡಿಸಿದರು. ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎದುರಾದ ಸೋಲಿನಿಂದ ವಿರೋಧ ಪಕ್ಷಗಳ ಸದಸ್ಯರು 'ಹತಾಶೆಗೊಂಡಿದ್ದಾರೆ' ಎಂದು ಅವರು ಆರೋಪಿಸಿದರು.

'ಡಿ.13 ರಂದು ನಡೆದ ಸಂಸತ್‌ನ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂಡಿಯಾ ಮೈತ್ರಿಕೂಟದ ಸಂಸದರು ಅಮಿತ್ ಶಾ ಅವರ ಹೇಳಿಕೆಗೆ ಒತ್ತಾಯಿಸುತ್ತಿದ್ದಾರೆ. ಸದನದೊಳಗೆ ಭಿತ್ತಿಪತ್ರಗಳನ್ನು ತರುವುದಿಲ್ಲ ಎಂದು ಅವರು ಒಪ್ಪಿಕೊಂಡಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಎದುರಾದ ಸೋಲಿನ ಹತಾಶೆಯಿಂದ ಇದೀಗ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಭಿತ್ತಿಪತ್ರಗಳನ್ನು ತಂದು ಸ್ಪೀಕರ್ ಹುದ್ದೆ ಹಾಗೂ ದೇಶದ ಜನರಿಗೆ ಅವಮಾನ ಮಾಡುತ್ತಿದ್ದಾರೆ' ಎಂದು ದೂರಿದರು.

ಲೋಕಸಭೆಯಲ್ಲಿ ಬೆಳಿಗ್ಗೆ 11ಕ್ಕೆ ಕಲಾಪ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಉಂಟುಮಾಡಿದರು. ಕಲಾಪವನ್ನು ಮಧ್ಯಾಹ್ನ 12ಕ್ಕೆ, 12.30ಕ್ಕೆ ಹಾಗೂ ಆ ಬಳಿಕ 2 ಗಂಟೆಗೆ ಮುಂದೂಡಲಾಯಿತು.

ಭಿತ್ತಿಪತ್ರಗಳ ಜತೆ ಕೆಲವು ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರ ತಿರುಚಿದ ಚಿತ್ರವನ್ನೂ ಪ್ರದರ್ಶಿಸಿದರು. ಪ್ರಧಾನಿ ಅವರ ತಿರುಚಿದ ಚಿತ್ರ ಪ್ರದರ್ಶಿಸಿದ್ದನ್ನು ಇಡೀ ಸದನ ಖಂಡಿಸುತ್ತದೆ ಎಂದು ಹೇಳಿದ ಪ್ರಲ್ಹಾದ ಜೋಶಿ, ಶಿಸ್ತುಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. 'ಭಿತ್ತಪತ್ರ ಪ್ರದರ್ಶಿಸುವುದು ಸದನದ ನಿಯಮಗಳು ಮತ್ತು ನಡತೆಗೆ ವಿರುದ್ಧವಾದುದು' ಎಂದು ಬಿರ್ಲಾ ಹೇಳಿದರು.

ಮೂರನೇ ಎರಡರಷ್ಟು ಸಂಸದರ ಅಮಾನತು: ಅಮಾನತು ಸರಣಿ ಮುಂದುವರಿದ ಕಾರಣ, ಚಳಿಗಾಲದ ಅಧಿವೇಶನದ ಇನ್ನುಳಿದ ಅವಧಿಗೆ 'ಇಂಡಿಯಾ' ಮೈತ್ರಿಕೂಟ ತನ್ನ ಮೂರನೇ ಎರಡರಷ್ಟು ಸದಸ್ಯರನ್ನು ಕಳೆದುಕೊಂಡ ಹಾಗಾಗಿದೆ.

ಸೋನಿಯಾ ಗಾಂಧಿ ಮತ್ತು ರಾಹುಲ್ ಒಳಗೊಂಡಂತೆ ಲೋಕಸಭೆಯಲ್ಲಿ ಉಳಿದಿರುವ ಕಾಂಗ್ರೆಸ್ ಪಕ್ಷದ ಸಂಸದರು ಒಂಬತ್ತು ಮಂದಿ ಮಾತ್ರ.

**'ಮೋದಿಪ್ರಭುತ್ವ'ದ (ನಮೋಕ್ರಸಿ) ನಿರಂಕುಶ ರೂಪ ಬೆಳಕಿಗೆ ಬರುತ್ತಿದೆ. ವಿರೋಧ ಪಕ್ಷ ಮುಕ್ತವಾಗಿಸಿ ಕರಾಳ ಮಸೂದೆಗಳಿಗೆ ಅಂಗೀಕಾರ ಪಡೆಯುವ ಹುನ್ನಾರವಿದು**

**ಜೈರಾಮ್ ರಮೇಶ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

**ಅಂಕಿ–ಅಂಶ**

**237** 'ಇಂಡಿಯಾ' ಮೈತ್ರಿಕೂಟದ ಒಟ್ಟು ಸದಸ್ಯರು (ಲೋಕಸಭೆ 139/ ರಾಜ್ಯಸಭೆ 98)

**141** ಅಮಾನತುಗೊಂಡ ಸದಸ್ಯರು

### ಅಮಾನತುಗೊಂಡ ಪ್ರಮುಖರು

ಶಶಿ ತರೂರ್, ಮನೀಷ್ ತಿವಾರಿ, ಕಾರ್ತಿ ಚಿದಂಬರಂ (ಕಾಂಗ್ರೆಸ್), ಫಾರೂಕ್ ಅಬ್ದುಲ್ಲಾ (ನ್ಯಾಷನಲ್ ಕಾನ್ಫರೆನ್ಸ್), ಡಿಂಪಲ್ ಯಾದವ್ (ಎಸ್‌ಪಿ), ಸುಪ್ರಿಯಾ ಸುಳೆ (ಎನ್‌ಸಿಪಿ), ಡಿ.ಎನ್.ವಿ. ಸೆಂಥಿಲ್ ಕುಮಾರ್ (ಡಿಎಂಕೆ), ಬಿಎಸ್‌ಪಿಯಿಂದ ಅಮಾನತುಗೊಂಡಿರುವ ಡ್ಯಾನಿಶ್ ಅಲಿ, ಸುಶೀಲ್ ಕುಮಾರ್ ರಿಂಕು (ಎಎಪಿ)

# ಕಾಂಗ್ರೆಸ್‌ನಿಂದ ಐವರ ಸಮಿತಿ ರಚನೆ

**ನವದೆಹಲಿ:** ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯ ಮಟ್ಟದಲ್ಲಿ ವಿವಿಧ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಕುರಿತು ಮಾತುಕತೆ ನಡೆಸುವುದಕ್ಕಾಗಿ ಕಾಂಗ್ರೆಸ್ ಪಕ್ಷವು ಮಂಗಳವಾರ 'ರಾಷ್ಟ್ರೀಯ ಮೈತ್ರಿ ಸಮಿತಿ'ಯನ್ನು ರಚಿಸಿದೆ.

ಈ ಸಮಿತಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಹಿರಿಯ ನಾಯಕರಾದ ಮುಕುಲ್ ವಾಸ್ನಿಕ್, ಸಲ್ಮಾನ್ ಖುರ್ಷೀದ್ ಹಾಗೂ ಮೋಹನ್ ಪ್ರಕಾಶ್ ಇದ್ದಾರೆ. ವಾಸ್ನಿಕ್ ಅವರು ಈ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುವರು.

'ಮುಂಬರುವ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ತಾನು ಮುಕ್ತವಾಗಿದ್ದು, ಮೈತ್ರಿಯ ಮುಂದಾಳತ್ವ ವಹಿಸುವ ಯಾವುದೇ ಇರಾದೆ ಇಲ್ಲ' ಎಂಬ ಸಂದೇಶವನ್ನು 'ಇಂಡಿಯಾ' ಒಕ್ಕೂಟದ ಅಂಗಪಕ್ಷಗಳಿಗೆ ರವಾನಿಸುವುದು ಈ ಸಮಿತಿ ರಚನೆಯ ಉದ್ದೇಶವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮೂರನೇ ಸಲ ವರ್ಷದ ಗೋಲ್‌ಕೀಪರ್ ಆದ ಪೂನಿಯಾ

# ಹಾರ್ದಿಕ್, ಸವಿತಾಗೆ ಎಫ್‌ಐಎಚ್ ಪ್ರಶಸ್ತಿ

**ಲುಸಾನ್ (ಸ್ವಿಜರ್ಲೆಂಡ್), (ಪಿಟಿಐ):** ಭಾರತ ಹಾಕಿ ತಂಡದ ಮಿಡ್ ಫೀಲ್ಡರ್ ಹಾರ್ದಿಕ್ ಸಿಂಗ್ ಮತ್ತು ಮಹಿಳಾ ತಂಡದ ನಾಯಕಿ ಸವಿತಾ ಪೂನಿಯಾ ಅವರು ಮಂಗಳವಾರ ಕ್ರಮವಾಗಿ ಎಫ್‌ಐಎಚ್ ವರ್ಷದ ಆಟಗಾರ ಮತ್ತು ವರ್ಷದ ಗೋಲ್ ಕೀಪರ್ (ಮಹಿಳಾ) ಪ್ರಶಸ್ತಿಗೆ ಭಾಜನರಾದರು.

ತಜ್ಞರ ಸಮಿತಿ, ರಾಷ್ಟ್ರೀಯ ಫೆಡರೇಷನ್‌ಗಳ ಮತಗಳ ನಂತರ ಪ್ರಶಸ್ತಿ ಪ್ರಕಟಿಸಲಾಯಿತು. ರಾಷ್ಟ್ರೀಯ ಫೆಡರೇಷನ್‌ಗಳನ್ನು ಆಯಾ ರಾಷ್ಟ್ರೀಯ ತಂಡಗಳ ನಾಯಕರು, ತರಬೇತುದಾರರು ಮತ್ತು ಮಾಧ್ಯಮದವರು ಪ್ರತಿನಿಧಿಸಿದ್ದರು.

ರಾಷ್ಟ್ರೀಯ ತಂಡದ ಪರ 114 ಪಂದ್ಯಗಳನ್ನು ಆಡಿರುವ ಹಾರ್ದಿಕ್, 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡ ಕಂಚಿನ ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ನಂತರದ ದಿನಗಳಲ್ಲಿ ಅವರ ಸುಧಾರಿತ ಪ್ರದರ್ಶನ ನೀಡುತ್ತಾ ಬಂದಿದ್ದಾರೆ.

ಇದು ಹಾರ್ದಿಕ್ ಅವರಿಗೆ ಎರಡನೇ ಪ್ರಶಸ್ತಿ. ಇದಕ್ಕೆ ಮೊದಲು ಅವರು ಹಾಕಿ ಇಂಡಿಯಾದ 2022ರ ವರ್ಷದ ಆಟಗಾರ ಎನಿಸಿ ಬಲಬೀರ್ ಸಿಂಗ್ ಸೀನಿಯರ್ ಪ್ರಶಸ್ತಿ ಗೆದ್ದಿದ್ದರು.

'ಒಂದು ಉತ್ತಮ ತಂಡ ಹೊಂದಿದ್ದಾಗ, ಅದು ನಮ್ಮನ್ನು ಉತ್ತಮ ಆಟಗಾರನಾಗಿ ರೂಪಿಸುತ್ತದೆ. ನಮ್ಮ ಕೆಲಸ ಸುಲಭವಾಗುತ್ತದೆ. ಈ ಹಂತಕ್ಕೆ ತಲುಪಲು ನೆರವಾದ ತಂಡ ಮತ್ತು ಹಾಕಿ ಇಂಡಿಯಾಗೂ ಅಭಾರಿ' ಎಂದು ಭಾರತ ತಂಡದ ಉಪನಾಯಕ ತಿಳಿಸಿದರು.

ಸವಿತಾ ಅವರಿಗೆ ಇದು ಸತತ ಮೂರನೇ 'ವರ್ಷದ ಮಹಿಳಾ ಗೋಲ್ ಕೀಪರ್' ಪ್ರಶಸ್ತಿ ಎನಿಸಿತು. ಅವರು 2021, 2022ರಲ್ಲೂ ಈ ಪ್ರಶಸ್ತಿಗೆ ಪಾತ್ರರಾಗಿದ್ದರು. ಈ ವರ್ಷ ಆಸ್ಟ್ರೇಲಿಯಾ ಎದುರಿನ ಟೆಸ್ಟ್, ಏಷ್ಯನ್ ಗೇಮ್ಸ್‌ನಲ್ಲಿ ಅವರು ಉತ್ತಮ ಪ್ರದರ್ಶನ ನೀಡಿದ್ದರು. ಅಕ್ಟೋಬರ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ಗೆಲ್ಲುವಲ್ಲೂ 33 ವರ್ಷದ ಸವಿತಾ ಕೊಡುಗೆ ಗಮನಾರ್ಹ.

'ತಂಡದ ಸಹ ಆಟಗಾರ್ತಿಯರಿಗೆ, ನೆರವು ಸಿಬ್ಬಂದಿಗೆ ಕೃತಜ್ಞ. ಈ ಪ್ರಶಸ್ತಿ ಹೆಚ್ಚು ಶ್ರಮ ಹಾಕಲು ಪ್ರೇರಣೆ ನೀಡಲಿದೆ' ಎಂದರು.

ನೆದರ್ಲೆಂಡ್ಸ್‌ನ ಕ್ಸಾನ್ ಡಿ ವಾರ್ಡ್ ಅವರು 2023ರ ಎಫ್‌ಐಎಚ್ ವರ್ಷದ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಡಚ್ ಗೋಲ್‌ಕೀಪರ್ ಪಿರ್ಮಿನ್ ಬ್ಲಾಕ್ ಅವರು ಎಚ್‌ಐಎಚ್ ವರ್ಷದ ಗೋಲ್‌ಕೀಪರ್(ಪುರುಷರ ವಿಭಾಗ) ಪ್ರಶಸ್ತಿ ತಮ್ಮದಾಗಿಸಿಕೊಂಡರು.



ಸವಿತಾ ಪೂನಿಯಾ



ಹಾರ್ದಿಕ್ ಸಿಂಗ್


# ಅಡ್ವಾಣಿ, ಜೋಶಿಗೆ ವಿಎಚ್‌ಪಿ ಆಹ್ವಾನ

ಪ್ರಜಾವಾಣಿ ವಾರ್ತೆ


**ಲಖನೌ:** ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಅಡ್ವಾಣಿ ಮತ್ತು ಮುರಳಿಮನೋಹರ್ ಜೋಶಿ ಅವರನ್ನು ವಿಶ್ವ ಹಿಂದೂ ಪರಿಷತ್ ಮಂಗಳವಾರ ಆಹ್ವಾನಿಸಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಲು ನಡೆದಿದ್ದ ಆಂದೋಲನದಲ್ಲಿ ಈ ಇಬ್ಬರೂ ನಾಯಕರು ಮುಂಚೂಣಿಯಲ್ಲಿದ್ದರು. ಆದರೆ, ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಂತೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರತಿನಿಧಿಗಳು ಕೋರಿದ್ದು, ವಿವಾದಕ್ಕೆ ಕಾರಣವಾಗಿತ್ತು. ಇದನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ವಿಎಚ್‌ಪಿ ಮುಂದಾಗಿದ್ದು, ಈ ಇಬ್ಬರು ನಾಯಕರಿಗೂ ಆಹ್ವಾನ ನೀಡಿದೆ. 'ಇಬ್ಬರು ನಾಯಕರನ್ನೂ ಮಂಗಳವಾರ ಭೇಟಿ ಮಾಡಿ, ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಲು ಪ್ರಯತ್ನಿಸುವುದಾಗಿ ಅವರಿಬ್ಬರೂ ಹೇಳಿದ್ದಾರೆ' ಎಂದು ವಿಎಚ್‌ಪಿ ಅಧ್ಯಕ್ಷ ಅಲೋಕ್ ಕುಮಾರ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ್ದ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರು, 'ವಯಸ್ಸನ್ನು ಗಮನದಲ್ಲಿ ಇರಿಸಿ ಕಾರ್ಯಕ್ರಮಕ್ಕೆ ಆಗಮಿಸದಂತೆ ಅಡ್ವಾಣಿ ಮತ್ತು ಜೋಶಿ ಅವರಿಗೆ ತಿಳಿಸಲಾಗಿದೆ' ಎಂದಿದ್ದರು.



ಎಲ್‌.ಕೆ.ಅಡ್ವಾಣಿ



ಮುರಳಿಮನೋಹರ್ ಜೋಶಿ

ಎಂಬಿಬಿಎಸ್ ಪೂರೈಸಿದ ವಿಭಾ, ಕೇರಳದಲ್ಲಿ ಮೊದಲ ಪ್ರಕರಣ

# ವೈದ್ಯಕೀಯ ಸೇವೆಗೆ ಲಿಂಗತ್ವ ಅಲ್ಪಸಂಖ್ಯಾತೆ

ಪ್ರಜಾವಾಣಿ ವಾರ್ತೆ

**ತಿರುವನಂತಪುರ:** ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರೊಬ್ಬರು ಕೇರಳದಲ್ಲಿ ಇದೇ ಮೊದಲ ಬಾರಿಗೆ ಎಂಬಿಬಿಎಸ್ ಶಿಕ್ಷಣ ಪೂರೈಸಿ ವೈದ್ಯ ಸೇವೆಗೆ ತೊಡಗಿದ್ದಾರೆ. ಈ ಮೂಲಕ ಕೇರಳದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಈ ಸಮುದಾಯದವರ ಉಪಸ್ಥಿತಿ ಇದ್ದಂತಾಗಿದೆ.



ಡಾ. ವಿಭಾ

ಪಾಲಕ್ಕಾಡ್‌ನ ನಿವಾಸಿ, 26 ವರ್ಷ ವಯಸ್ಸಿನ ವಿಭಾ ಉಷಾ ರಾಧಾಕೃಷ್ಣನ್ ವೈದ್ಯೆಯಾಗಿರುವ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು. ಕೋಯಿಕ್ಕೋಡ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪದವಿ ಪೂರೈಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರಾಗಿ ಗುರುತಿಸಿಕೊಳ್ಳುವ ಜೊತೆಗೆ, ವೈದ್ಯ ಶಿಕ್ಷಣ ಪೂರೈಸಲು ಡಾ.ವಿಭಾ ಅವರಿಗೆ ಕುಟುಂಬದವರಿಂದ ಪೂರ್ಣ ಬೆಂಬಲ ವ್ಯಕ್ತವಾಗಿದೆ. 20ನೇ ವಯಸ್ಸಿನವರೆಗೂ ಇವರು ವಿಪಿನ್ ಆಗಿದ್ದರು.

'ಎಂಬಿಬಿಎಸ್ ಪದವಿ ಕಲಿಕೆ ಹಂತದಲ್ಲಿದ್ದಾಗಲೇ ನನ್ನೊಳಗಿನ ಸ್ತ್ರೀ ಭಾವನೆಗಳನ್ನು ಗೆಳೆಯರ ಜೊತೆ ಹಂಚಿಕೊಂಡೆ. ನಂತರ ನನ್ನ ತಾಯಿ, ಶಿಕ್ಷಕಿಯೂ ಆದ ಉಷಾಗೆ ತಿಳಿಸಿದೆ. ಆರಂಭದಲ್ಲಿ ಬೇಸರಿಸಿಕೊಂಡರೂ, ನಂತರದಲ್ಲಿ ನನ್ನನ್ನು ಅರ್ಥಮಾಡಿಕೊಂಡರು. ಆದರೆ, ಪರಿಸ್ಥಿತಿಗೆ ಹೊಂದಿಕೊಳ್ಳಲು ತಂದೆ, ಸೇನೆಯ ನಿವೃತ್ತ ಸಿಬ್ಬಂದಿ ರಾಧಾಕೃಷ್ಣನ್ ಅವರಿಗೆ ಸಾಕಷ್ಟು ಸಮಯ ಹಿಡಿಯಿತು. ನನ್ನ ಸಹೋದರ, ಬ್ಯಾಂಕ್ ನೌಕರಿಯಲ್ಲಿರುವ ವಿಷ್ಣು ಸಂಪೂರ್ಣ ಸಹಕಾರ ನೀಡಿದ' ಎಂದು ವಿಭಾ ಹೇಳಿದರು.

ಕುಟುಂಬದ ಸದಸ್ಯರ ಬೆಂಬಲದಿಂದಲೇ ಲಿಂಗ ಬದಲಾವಣೆ ಚಿಕಿತ್ಸೆಗೂ ಒಳಗಾಗಿದ್ದರು. ನಂತರ ಅಧಿಕೃತವಾಗಿ ದಾಖಲೆಗಳಲ್ಲಿಯೂ ಹೆಸರು ಮತ್ತು ಲಿಂಗವನ್ನು ಬದಲಿಸಿಕೊಂಡರು.

ಸದ್ಯ, ಖಾಸಗಿಯಾಗಿ ವೈದ್ಯ ವೃತ್ತಿ ಕೈಗೊಂಡಿರುವ ಡಾ.ವಿಭಾ, ಮನೋವಿಜ್ಞಾನ ಕ್ಷೇತ್ರದಲ್ಲಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮುಂದುವರಿಸುವ ಆಶಯವನ್ನುಹೊಂದಿದ್ದಾರೆ. ಕೇರಳದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಆಯುರ್ವೇದ ವೈದ್ಯರು, ವಕೀಲರು ಮತ್ತು ಪೈಲಟ್‌ಗಳಾಗಿದ್ದಾರೆ.

## ಅಂತರರಾಜ್ಯ ಬ್ಯಾಡ್ಮಿಂಟನ್: ಕರ್ನಾಟಕ ರನ್ನರ್‌ಅಪ್

**ಗುವಾಹಟಿ:** ಭಾರತ ವಿಮಾನನಿಲ್ದಾಣ ಪ್ರಾಧಿಕಾರ (ಎಎಐ) ತಂಡ ಯೋನೆಕ್ಸ್ ಸನ್‌ರೈಸ್ 75ನೇ ಅಂತರ ರಾಜ್ಯ ವಲಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು. ಎಎಐ ಫೈನಲ್‌ನಲ್ಲಿ ಕರ್ನಾಟಕವನ್ನು 3–0 ಯಿಂದ ಸೋಲಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ಎಎಐನ ತರುಣ್ ಮನ್ನೆಪಲ್ಲಿ 21–18, 21–18 ರಿಂದ ಭಾರ್ಗವ್ ಸೋಮಸುಂದರ ಅವರನ್ನು ಸೋಲಿಸಿದರು. ಮೈಸ್ನಮ್ ಮೀರಬಾ 22–20, 16–21, 21–11ರಿಂದ ರಘು ಮರಿಸ್ವಾಮಿ ಅವರನ್ನು ಸೋಲಿಸಿ ಮುನ್ನಡೆ ಹೆಚ್ಚಿಸಿದರು. ಡಬಲ್ಸ್‌ನಲ್ಲಿ ಆಲಾಪ ಮಿಶ್ರಾ- ರವಿಕೃಷ್ಣ 21–11, 16–21, 21–19 ರಿಂದ ಕರ್ನಾಟಕದ ಪ್ರಕಾಶ್ ರಾಜ್ –ಅಶಿತ್ ಸೂರ್ಯ ಅವರನ್ನು ಮಣಿಸಿದರು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮಹಾರಾಷ್ಟ್ರ ತಂಡ 3-0 ಯಿಂದ ಎಎಐ ತಂಡವನ್ನು ಸೋಲಿಸಿ ಚಾಂಪಿಯನ್ ಪಟ್ಟಕ್ಕೇರಿತು.

## ಚೆಸ್: ಅಗ್ರಸ್ಥಾನಕ್ಕೇರಿದ ಗುಕೇಶ್

**ಚೆನ್ನೈ (ಪಿಟಿಐ):** ಹಂಗೆರಿಯ ಸನನ್ ಸುಗಿರೋವ್ ಅವರನ್ನು ಸೋಲಿಸಿ ಸತತ ಎರಡನೇ ಗೆಲುವನ್ನು ದಾಖಲಿಸಿದ ಭಾರತದ ಡಿ.ಗುಕೇಶ್, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಚಾಂಪಿಯನ್‌ಷಿಪ್‌ನ ಐದನೇ ಸುತ್ತಿನ ನಂತರ ಒಂಟಿಯಾಗಿ ಮಂಗಳವಾರ ಅಗ್ರಸ್ಥಾನಕ್ಕೇರಿದರು.


17 ವರ್ಷದ ಗುಕೇಶ್ ಕಪ್ಪುಕಾಯಿಗಳಲ್ಲಿ ಆಡಿ 40 ನಡೆಗಳಲ್ಲಿ ಜಯಗಳಿಸಿದರು. ಎಂಟು ಮಂದಿಯ ಕಣದಲ್ಲಿ ಅವರು 3.5 ಪಾಯಿಂಟ್ಸ್ ಸಂಗ್ರಹಿಸಿದ್ದು ಸ್ಪಷ್ಟ ಮುನ್ನಡೆ ಗಳಿಸಿದ್ದಾರೆ. ಸೋಮವಾರ ಮುನ್ನಡೆ ಹಂಚಿಕೊಂಡಿದ್ದ ಪಿ.ಹರಿಕೃಷ್ಣ ಐದನೇ ಸುತ್ತಿನಲ್ಲಿ ಇರಾನ್‌ನ ಪರ್ಹಾಮ್ ಮಘಸೂದ್ ಅವರ ಜೊತೆ ಡ್ರಾ ಮಾಡಿ ಮೂರು ಪಾಯಿಂಟ್ ಗಳೊಂದಿಗೆ ಎರಡನೇ ಸ್ಥಾನಕ್ಕೆ ಸರಿದರು.

ಉಕ್ರೇನ್‌ನ ಜಿಎಂ ಪಾವೆಲ್ ಎಲ್ಯನೋವ್ (3) ಅವರು ಸರ್ಬಿಯಾದ ಅಲೆಕ್ಸಾಂಡರ್ ಪ್ರೆಡ್ಕೆ ಅವರನ್ನು ಮಣಿಸಿ ಜಂಟಿ ಎರಡನೇ ಸ್ಥಾನಕ್ಕೆ ಏರಿದರು. ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ (2.5) ಅವರು ಅಮೆರಿಕದ ಜಿಎಂ ಲೆವೊನ್ ಅರೋನಿಯನ್ ಜೊತೆ 'ಡ್ರಾ' ಮಾಡಿಕೊಂಡರು.


ನ್ಯೂಜಿಲೆಂಡ್‌ನ ಡೆರಿಲ್ ಮಿಚೆಲ್


ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್


ಭಾರತದ ಶಾರುಖ್ ಖಾನ್


ವೆಸ್ಟ್ ಇಂಡೀಸ್‌ನ ಅಲ್ಜಾರಿ ಜೋಸೆಫ್


ನ್ಯೂಜಿಲೆಂಡ್‌ನ ರಚಿನ್ ರವೀಂದ್ರ



### ಭಾರತದ ಬೌಲರ್ ಪಟೇಲ್‌ಗೆ 'ಹರ್ಷ' • ಅನ್‌ಕ್ಯಾಪ್ಡ್ ಆಟಗಾರರಿಗೆ ಒಲಿದ ಅದೃಷ್ಟ • ಖ್ಯಾತನಾಮರಿಗೆ ನಿರಾಸೆ

# ಆಸ್ಟ್ರೇಲಿಯಾ ಕಲಿಗಳಿಗೆ ಸಿಂಹಪಾಲು

**ದುಬೈ:** ಈ ವರ್ಷ ಆಸ್ಟ್ರೇಲಿಯಾ ಆಟಗಾರರು ಮುಟ್ಟಿದ್ದೆಲ್ಲವೂ ಚಿನ್ನವಾಗಿದೆ. ಬರೋಬ್ಬರಿ ಒಂದು ತಿಂಗಳ ಹಿಂದೆ ಏಕದಿನ ವಿಶ್ವಕಪ್ ಕಿರೀಟ ಧರಿಸಿದ್ದ ಆಸ್ಟ್ರೇಲಿಯಾದ ಆಟಗಾರರು ಮಂಗಳವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮಿನಿ ಹರಾಜಿನಲ್ಲಿ ಹಣ ಸೂರೆ ಮಾಡಿದರು.

ಆಸ್ಟ್ರೇಲಿಯಾದ ನಾಲ್ವರು ಆಟಗಾರರು ಸೇರಿ ಒಟ್ಟು ₹ 62 ಕೋಟಿಗೂ ಹೆಚ್ಚು ಹಣವನ್ನು ತಮ್ಮ ಜೇಬಿಗೆ ಇಳಿಸಿಕೊಂಡರು. ಅದರಲ್ಲಿ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ₹ 24.75 ಕೋಟಿ ಮೌಲ್ಯ ಪಡೆದು ಐಪಿಎಲ್ ಟೂರ್ನಿಯ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೊತ್ತ ಗಳಿಸಿದ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ಸೆಳೆದುಕೊಂಡಿತು. ಅವರ 'ಗೆಳೆಯ' ಮತ್ತು ತಂಡದ ನಾಯಕ ಪ್ಯಾಟ್ ಕಮಿನ್ಸ್ ಕೂಡ ₹ 20.50 ಕೋಟಿ ಮೌಲ್ಯದೊಂದಿಗೆ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಸೇರಿಕೊಂಡರು.

ವಿಶ್ವಕಪ್ ಫೈನಲ್‌ನಲ್ಲಿ ತಂಡದ ಗೆಲುವಿನ ರೂವಾರಿಯಾಗಿದ್ದ ಟ್ರಾವಿಸ್ ಹೆಡ್ ತಮ್ಮ ನಾಯಕ ಕಮಿನ್ಸ್ ಅವರೊಂದಿಗೆ ಸನ್‌ರೈಸರ್ಸ್ ಸೇರಿಕೊಂಡರು. ಅವರಿಗೆ ₹ 6.80 ಕೋಟಿ ಲಭಿಸಿತು. ಹೆಚ್ಚು ಅನುಭವಿ ಅಲ್ಲದ ಸ್ಪೆನ್ಸರ್ ಜಾನ್ಸನ್ ಗುಜರಾತ್ ಟೈಟನ್ಸ್ ತಂಡದಿಂದ ₹ 10 ಕೋಟಿ ಗಳಿಸಿ ಅಚ್ಚರಿ ಮೂಡಿಸಿದರು.

ಆದರೆ ಇದೇ ತಂಡದ ಅನುಭವಿ ವೇಗಿ ಜೋಷ್ ಹ್ಯಾಜಲ್‌ವುಡ್, ಬ್ಯಾಟರ್ ಸ್ಟೀವ್ ಸ್ಮಿತ್ ಹಾಗೂ ವಿಕೆಟ್‌ಕೀಪರ್ ಜೋಶ್ ಇಂಗ್ಲಿಸ್ ಅವರು ಬಿಕರಿಯಾಗಲಿಲ್ಲ.

**ಹರ್ಷಲ್‌ಗೆ ಒಲಿದ ಅದೃಷ್ಟ:** ಆರ್‌ಸಿಬಿಯಿಂದ ಬಿಡುಗಡೆಗೊಂಡಿದ್ದ ಹರ್ಷಲ್ ಪಟೇಲ್ ಅವರಿಗೆ ಅದೃಷ್ಟ ಒಲಿಯಿತು.

**ಮುಖ್ಯಾಂಶಗಳು**

- ಇದೇ ಮೊದಲ ಸಲ ವಿದೇಶದಲ್ಲಿ ನಡೆದ ಐಪಿಎಲ್ ಬಿಡ್
- ಒಟ್ಟು 72 ಆಟಗಾರರನ್ನು ಖರೀದಿಸಿದ ಫ್ರ್ಯಾಂಚೈಸಿಗಳು
- ಒಟ್ಟು ₹ 230.40 ಕೋಟಿ ಹಣ ಹೂಡಿದ ಫ್ರ್ಯಾಂಚೈಸಿಗಳು


ಐಪಿಎಲ್ ಬಿಡ್ಡಿಂಗ್ ಪ್ರಕ್ರಿಯೆ ನಡೆಸಿಕೊಟ್ಟ ಮಲ್ಲಿಕಾ ಸಾಗರ್

ಹರಿಯಾಣದ ಆಲ್‌ರೌಂಡರ್ ಹರ್ಷಲ್ ಅವರನ್ನು ₹11.75 ಕೋಟಿಗೆ ಪಂಜಾಬ್ ಕಿಂಗ್ಸ್ ತಂಡವು ಸೆಳೆದುಕೊಂಡಿತು. ಇದರೊಂದಿಗೆ ಈ ಬಿಡ್‌ನಲ್ಲಿ ಅತಿ ಹೆಚ್ಚು ಮೌಲ್ಯಕ್ಕೆ ಮಾರಾಟವಾದ ಭಾರತದ ಆಟಗಾರನಾದರು.

33 ವರ್ಷದ ಹರ್ಷಲ್ ಆರ್‌ಸಿಬಿ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳನ್ನು ಐಪಿಎಲ್‌ನಲ್ಲಿ ಪ್ರತಿನಿಧಿಸಿದ್ದಾರೆ. ಟೂರ್ನಿಯಲ್ಲಿ ಒಟ್ಟು 92 ಪಂದ್ಯಗಳನ್ನು ಆಡಿರುವ ಅವರು 111 ವಿಕೆಟ್ ಗಳಿಸಿದ್ದಾರೆ. ಈಚೆಗೆ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿಯೂ ತಮ್ಮ ತವರಿನ ತಂಡದ ಜಯದ ರೂವಾರಿಯಾಗಿದ್ದರು.

**ಅನ್‌ಕ್ಯಾಪ್ಡ್ ಆಟಗಾರರತ್ತ ಒಲವು:** ಈ ಬಾರಿ ಫ್ರ್ಯಾಂಚೈಸಿಗಳು ಭಾರತದ ಅನ್‌ಕ್ಯಾಪ್ಡ್ (ರಾಷ್ಟ್ರೀಯ ತಂಡದಲ್ಲಿ ಇನ್ನೂ ಪದಾರ್ಪಣೆ ಮಾಡದವರು) ಆಟಗಾರರ ಖರೀದಿಗೆ ಹೆಚ್ಚು ಒಲವು ತೋರಿದವು.

ಇದರಿಂದಾಗಿ ಉತ್ತರಪ್ರದೇಶದ ಸಮೀರ್ ರಿಜ್ವಿ ₹8.40 ಕೋಟಿ ಬಂಪರ್ ಮೌಲ್ಯದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ಪಾಲಾದರು. ಆಲ್ ರೌಂಡರ್ ಶಾರೂಕ್ ಖಾನ್ ಈ ಸಲ ಗುಜರಾತ್ ಟೈಟನ್ಸ್‌ಗೆ ಸೇರ್ಪಡೆಯಾದರು. ಅವರಿಗೆ ₹ 7.40 ಕೋಟಿ ಒಲಿಯಿತು. ವಿದರ್ಭ ತಂಡದ ಶುಭಂ ದುಬೆ (₹ 5.80 ಕೋಟಿ) ಅವರು ರಾಜಸ್ಥಾನ ರಾಯಲ್ಸ್ ತಂಡಕ್ಕೆ ಸೇರಿಕೊಂಡರು.

ಯುವ ಬೌಲರ್ ಶಿವಂ ಮಾವಿ ಅವರನ್ನು ಲಖನೌ ಸೂಪರ್ ಜೈಂಟ್ಸ್ (₹ 6.40 ಕೋಟಿ) ತನ್ನ ತೆಕ್ಕೆಗೆ ಎಳೆದುಕೊಂಡಿತು.

(ಮಾಹಿತಿ: ಐಪಿಎಲ್ ವೆಬ್‌ಸೈಟ್, ಪಿಟಿಐ, ಎಎಫ್‌ಪಿ)


ಪ್ಯಾಟ್ ಕಮಿನ್ಸ್


ಭಾರತದ ಬೌಲರ್ ಹರ್ಷಲ್ ಪಟೇಲ್

## ಅಚ್ಚರಿ ಮೂಡಿಸಿದ ಆರ್‌ಸಿಬಿ

ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಅವರನ್ನು ಖರೀದಿಸಲು ದಕ್ಷಿಣ ಭಾರತದ ಎರಡು ತಂಡಗಳಾದ ಸನ್‌ರೈಸರ್ಸ್ ಹೈದರಾಬಾದ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವೆ ತುರುಸಿನ ಪೈಪೋಟಿ ನಡೆಯಿತು.


ಯಶ್ ದಯಾಳ್

ತನ್ನ ಪರ್ಸ್ ಮಿತಿ ₹ 23.25 ಕೋಟಿ ಇದ್ದರೂ ಬೆಂಗಳೂರು ತಂಡವು ₹ 20 ಕೋಟಿಯವರೆಗೂ ಬಿಡ್ ಮಾಡಿ ಅಚ್ಚರಿ ಮೂಡಿಸಿತು. ಆದರೆ ಪಟ್ಟುಬಿಡದ ಸನ್‌ರೈಸರ್ಸ್ ₹20.50 ಕೋಟಿಗೆ ಕಮಿನ್ಸ್ ಅವರನ್ನು ತನ್ನದಾಗಿಸಿಕೊಂಡಿತು. ಆರ್‌ಸಿಬಿಗೆ ವೇಗದ ಬೌಲರ್ ಅವಶ್ಯಕತೆ ಇರುವುದರಿಂದ ಕಮಿನ್ಸ್ ಅವರನ್ನು ತೆಕ್ಕೆಗೆ ಎಳೆದುಕೊಳ್ಳಲು ಶತಪ್ರಯತ್ನ ನಡೆಸಿತು. ಆದರೆ ಉದ್ದೇಶ ಈಡೇರಲಿಲ್ಲ. ಈ ಪೈಪೋಟಿಯಲ್ಲಿ ಕಮಿನ್ಸ್ ಅವರಿಗೆ ನಿರೀಕ್ಷೆಗೂ ಮೀರಿದ ಮೌಲ್ಯ ದೊರೆಯಿತು.

'ಅವರಿಗೆ ಉತ್ತಮ ಮೌಲ್ಯ ದೊರೆಯುವ ನಿರೀಕ್ಷೆ ಇತ್ತು. ಆದರೆ ₹ 20 ಕೋಟಿಗಿಂತಲೂ ಹೆಚ್ಚಿನ ಮೊತ್ತ ಲಭಿಸಿದ್ದು ಅನಿರೀಕ್ಷಿತ' ಎಂದು ಜಿಯೊ ಸಿನಿಮಾ ಆ್ಯಪ್ ವಿಶ್ಲೇಷಣೆಯಲ್ಲಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಅಭಿಪ್ರಾಯಪಟ್ಟಿದ್ದಾರೆ.

ಆರ್‌ಸಿಬಿಯು ವೆಸ್ಟ್ ಇಂಡೀಸ್ ತಂಡದ ವೇಗಿ ಅಲ್ಜಾರಿ ಜೋಸೆಫ್ ಅವರಿಗೆ ₹ 11.50 ಕೋಟಿ ನೀಡಿ ಖರೀದಿಸಿತು. 27 ವರ್ಷದ ಬಲಗೈ ವೇಗಿ ಜೋಸೆಫ್, ಐಪಿಎಲ್‌ನಲ್ಲಿ ಈ ಹಿಂದೆ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳಲ್ಲಿ ಆಡಿದ್ದಾರೆ. ಒಟ್ಟು 19 ಪಂದ್ಯಗಳಿಂದ 20 ವಿಕೆಟ್ ಗಳಿಸಿದ್ದಾರೆ.

ದೇಶಿ ಕ್ರಿಕೆಟ್‌ನಲ್ಲಿ ಆಡುವ ಉತ್ತರಪ್ರದೇಶದ ಮಧ್ಯಮವೇಗಿ ಯಶ್ ದಯಾಳ್ ಅವರನ್ನು ಆರ್‌ಸಿಬಿಯು ಐದು ಕೋಟಿ ರೂಪಾಯಿ ಮೌಲ್ಯಕ್ಕೆ ಸೇರ್ಪಡೆ ಮಾಡಿಕೊಂಡಿತು.

### ಹಿಂದಿನ ಆವೃತ್ತಿಗಳ ಬಿಡ್‌ಗಳಲ್ಲಿ ಗರಿಷ್ಠ ಮೊತ್ತ ಪಡೆದವರು (₹ ಕೋಟಿಗಳಲ್ಲಿ)

| ಆವೃತ್ತಿ | ಆಟಗಾರ | ಮೊತ್ತ | ತಂಡ |
|---|---|---|---|
| 2023 | ಸ್ಯಾಮ್ ಕರನ್ | 18.50 | ಪಂಜಾಬ್ ಕಿಂಗ್ಸ್ |
| 2022 | ಇಶಾನ್ ಕಿಶನ್ | 15.25 | ಮುಂಬೈ ಇಂಡಿಯನ್ಸ್ |
| 2021 | ಕ್ರಿಸ್ ಮೊರಿಸ್ | 16.25 | ರಾಜಸ್ಥಾನ ರಾಯಲ್ಸ್ |
| 2020 | ಪ್ಯಾಟ್ ಕಮಿನ್ಸ್ | 15.50 | ಕೋಲ್ಕತ್ತ ನೈಟ್ ರೈಡರ್ಸ್ |
| 2019 | ಜಯದೇವ್ ಉನದ್ಕತ್ | 8.40 | ರಾಜಸ್ಥಾನ ರಾಯಲ್ಸ್ |
| | ವರುಣ್ ಚಕ್ರವರ್ತಿ | 8.40 | ಪಂಜಾಬ್ ಕಿಂಗ್ಸ್ |
| 2018 | ಬೆಂಜಮಿನ್ ಸ್ಟೋಕ್ಸ್ | 12.50 | ರಾಜಸ್ಥಾನ ರಾಯಲ್ಸ್ |
| 2017 | ಬೆಂಜಮಿನ್ ಸ್ಟೋಕ್ಸ್ | 14.50 | ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ |
| 2016 | ಶೇನ್ ವ್ಯಾಟ್ಸನ್ | 9.50 | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| 2015 | ಯುವರಾಜ್ ಸಿಂಗ್ | 16.00 | ಡೆಲ್ಲಿ ಡೇರ್‌ಡೆವಿಲ್ಸ್ |
| 2014 | ಯುವರಾಜ್ ಸಿಂಗ್ | 14.00 | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| 2013 | ಗ್ಲೆನ್ ಮ್ಯಾಕ್ಸ್‌ವೆಲ್ | 6.30 | ಮುಂಬೈ ಇಂಡಿಯನ್ಸ್ |
| 2012 | ರವೀಂದ್ರ ಜಡೇಜ | 12.80 | ಚೆನ್ನೈ ಸೂಪರ್ ಕಿಂಗ್ಸ್ |
| 2011 | ಗೌತಮ್ ಗಂಭೀರ್ | 14.90 | ಕೋಲ್ಕತ್ತ ನೈಟ್ ರೈಡರ್ಸ್ |
| 2010 | ಶೇನ್ ಬಾಂಡ್ | 4.80 | ಕೋಲ್ಕತ್ತ ನೈಟ್ ರೈಡರ್ಸ್ |
| | ಕೀರನ್ ಪೊಲಾರ್ಡ್ | 4.80 | ಮುಂಬೈ ಇಂಡಿಯನ್ಸ್ |
| 2009 | ಕೆವಿನ್ ಪೀಟರ್ಸನ್ | 9.80 | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| | ಆ್ಯಂಡ್ರ್ಯೂ ಫ್ಲಿಂಟಾಫ್ | 9.80 | ಚೆನ್ನೈ ಸೂಪರ್ ಕಿಂಗ್ಸ್ |
| 2008 | ಮಹೇಂದ್ರಸಿಂಗ್ ಧೋನಿ | 9.50 | ಚೆನ್ನೈ ಸೂಪರ್ ಕಿಂಗ್ಸ್ |

## 'ಅಚ್ಚರಿಯಾಗಿದೆ, ಒತ್ತಡವೂ ಹೆಚ್ಚಿದೆ'



**ನವದೆಹಲಿ (ಪಿಟಿಐ):** ಐಪಿಎಲ್ ಹರಾಜಿನಲ್ಲಿ ತಾವು ₹24.75 ಕೋಟಿಗೆ ಖರೀದಿಯಾಗಬಹುದೆಂದು ಕನಸು ಮನಸಿನಲ್ಲೂ ಎಣಿಸಿ ರಲಿಲ್ಲ ಎಂದು ಹೇಳಿರುವ ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು 'ಇಷ್ಟೊಂದು ದೊಡ್ಡ ಮೊತ್ತ ತಮ್ಮ ಮೇಲೆ ಕೆಲಮಟ್ಟಿಗೆ ಒತ್ತಡ ಉಂಟುಮಾಡಲಿದೆ' ಎಂಬುದನ್ನೂ ಒಪ್ಪಿಕೊಂಡಿದ್ದಾರೆ.

'ನಿಜ, ಇದು ನನಗೆ ಅಚ್ಚರಿ (ಶಾಕ್). ಕನಸಿನಲ್ಲೂ ಊಹಿಸಿರಲಿಲ್ಲ. ಆದರೆ ನನ್ನ ಮೇಲೆ ಇದು ಒತ್ತಡ ತರುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹಿಂದಿನ ಐಪಿಎಲ್ ಅನುಭವ ನೆರವಿಗೆ ಬರಲಿದೆ' ಎಂದು ಸ್ಟಾರ್ಕ್ 'ಜಿಯೊ ಸಿನಿಮಾ'ಕ್ಕೆ ತಿಳಿಸಿದರು.

### ಆಟಗಾರರು ಬಿಡ್‌ನಲ್ಲಿ ಪಡೆದ ಮೊತ್ತ

ಆಟಗಾರ — ಮೌಲ್ಯ(₹ ಕೋಟಿ)

**ಚೆನ್ನೈ ಸೂಪರ್ ಕಿಂಗ್ಸ್**
- ಡೆರಿಲ್ ಮಿಚೆಲ್ 14.00
- ಸಮೀರ್ ರಿಜ್ವಿ 8.40
- ಶಾರ್ದೂಲ್ ಠಾಕೂರ್ 4.00
- ಮುಸ್ತಫಿಜುರ್ ರೆಹಮಾನ್ 2.00
- ರಚಿನ್ ರವೀಂದ್ರ 1.80
- ಅವನೀಶ್ ರಾವ್ 0.20

**ಡೆಲ್ಲಿ ಕ್ಯಾಪಿಟಲ್ಸ್**
- ಕುಮಾರ್ ಕುಶಾಗ್ರ 7.20
- ಜೇ ರಿಚರ್ಡ್ಸನ್ 5.00
- ಹ್ಯಾರಿ ಬ್ರೂಕ್ 4.00
- ಸುಮಿತ್ ಕುಮಾರ್ 1.00
- ಶಾಯ್ ಹೋಪ್ 0.75
- ಟ್ರಿಸ್ಟನ್ ಸ್ಟಬ್ಸ್ 0.50
- ರಿಕಿ ಭುಯಿ 0.20
- ಸ್ವಸ್ತಿಕ್ ಚಿಕಾರ 0.20
- ರಸಿಕ್ ದರ್ 0.20

**ಗುಜರಾತ್ ಟೈಟನ್ಸ್**
- ಸ್ಪೆನ್ಸರ್ ಜಾನ್ಸನ್ 10.00
- ಶಾರುಖ್ ಖಾನ್ 7.40
- ಉಮೇಶ್ ಯಾದವ್ 5.80
- ರಾಬಿನ್ ಮಿಂಜ್ 3.60
- ಸುಶಾಂತ್ ಮಿಶ್ರಾ 2.20
- ಕಾರ್ತಿಕ್ ತ್ಯಾಗಿ 0.60
- ಅಜ್ಮತ್‌ವುಲ್ಲಾ ಒಮರ್‌ಝೈ 0.50
- ಮಾನವ್ ಸುತಾರ್ 0.20

**ಕೋಲ್ಕತ್ತ ನೈಟ್ ರೈಡರ್ಸ್**
- ಮಿಚೆಲ್ ಸ್ಟಾರ್ಕ್ 24.75
- ಮುಜೀಬ್ ರೆಹಮಾನ್ 2.00
- ಶೆರ್ಫೇನ್ ರುದರ್‌ಫರ್ಡ್ 1.50
- ಗಸ್ ಅಟ್ಕಿನ್ಸನ್ 1.00
- ಚೇತನ್ ಸಕಾರಿಯಾ 0.50
- ಕೆ.ಎಸ್.ಭರತ್ 0.50
- ಮನೀಷ್ ಪಾಂಡೆ 0.50
- ರಮಣದೀಪ್ ಸಿಂಗ್ 0.20
- ಅಂಗ್ಕ್ರಿಶ್ ರಘುವಂಶಿ 0.20
- ಶಕೀಬ್ ಹುಸೇನ್ 0.20

**ಲಖನೌ ಸೂಪರ್ ಜೈಂಟ್ಸ್**
- ಶಿವಂ ಮಾವಿ 6.40
- ಎಂ.ಸಿದ್ಧಾರ್ಥ್ 2.40
- ಡೇವಿಡ್ ವಿಲ್ಲಿ 2.00
- ಆ್ಯಸ್ಟನ್ ಟರ್ನರ್ 1.00
- ಅರ್ಶಿನ್ ಕುಲಕರ್ಣಿ 0.20
- ಮೊಹಮ್ಮದ್ ಅರ್ಷದ್ ಖಾನ್ 0.20

**ಮುಂಬೈ ಇಂಡಿಯನ್ಸ್**
- ಜೆರಾಲ್ಡ್ ಕೋಜಿ 5.00
- ನುವಾನ್ ತುಷಾರ 4.80
- ದಿಲ್ಶಾನ್ ಮಧುಶಂಕ 4.60
- ಮೊಹಮ್ಮದ್ ನಬಿ 1.50
- ನಮನ್ ಧೀರ್ 0.20
- ಶಿವಾಲಿಕ್ ಶರ್ಮಾ 0.20
- ಶ್ರೇಯಸ್ ಗೋಪಾಲ್ 0.20
- ಅಂಶುಲ್ ಕಾಂಬೋಜ್ 0.20


**ಪಂಜಾಬ್ ಕಿಂಗ್ಸ್**
- ಹರ್ಷಲ್ ಪಟೇಲ್ 11.75
- ರಿಲೀ ರುಸೋ 8.00
- ಕ್ರಿಸ್ ವೋಕ್ಸ್ 4.20
- ತನಯ್ ತ್ಯಾಗರಾಜನ್ 0.20
- ಪ್ರಿನ್ಸ್ ಚೌಧರಿ 0.20
- ವಿಶ್ವನಾಥ್ ಪ್ರತಾಪ್ ಸಿಂಗ್ 0.20
- ಶಶಾಂಕ್ ಸಿಂಗ್ 0.20
- ಅಶುತೋಷ್ ಶರ್ಮಾ 0.20

**ರಾಜಸ್ಥಾನ ರಾಯಲ್ಸ್**
- ರೋವ್ಮನ್ ಪೊವೆಲ್ 7.40
- ಶುಭಂ ದುಬೆ 5.80
- ನಾಂಡ್ರೆ ಬರ್ಗರ್ 0.50
- ಟಾಮ್ ಕೊಹ್ಲರ್ ಕ್ಯಾಡ್ಮೋರ್ 0.40
- ಅಬೀದ್ ಮುಷ್ತಾಕ್ 0.20

**ರಾಯಲ್ ಚಾಲೆಂಜರ್ಸ್ ಬೆಂಗಳೂರು**
- ಅಲ್ಜಾರಿ ಜೋಸೆಫ್ 11.50
- ಯಶ್ ದಯಾಳ್ 5.00
- ಲಾಕಿ ಫರ್ಗ್ಯುಸನ್ 2.00
- ಟಾಮ್ ಕರನ್ 1.50
- ಸೌರವ್ ಚೌಹಾನ್ 0.20
- ಸ್ವಪ್ನಿಲ್ ಸಿಂಗ್ 0.20

**ಸನ್‌ರೈಸರ್ಸ್ ಹೈದರಾಬಾದ್**
- ಪ್ಯಾಟ್ ಕಮಿನ್ಸ್ 20.50
- ಟ್ರಾವಿಸ್ ಹೆಡ್ 6.80
- ಜೈದೇವ್ ಉನದ್ಕತ್ 1.60
- ವಣಿಂದು ಹಸರಂಗ 1.50
- ಜಾಥವೇಧ ಸುಬ್ರಮಣ್ಯನ್ 0.20
- ಆಕಾಶ್ ಸಿಂಗ್ 0.20

## ಮನೀಷ್ ಪಾಂಡೆಗೆ ₹ 50 ಲಕ್ಷ


ಮನೀಷ್ ಪಾಂಡೆ

ಐಪಿಎಲ್ ಇತಿಹಾಸದಲ್ಲಿ ಶತಕ ಬಾರಿಸಿದ ಮೊಟ್ಟಮೊದಲ ಭಾರತೀಯ ಆಟಗಾರ ಮನೀಷ್ ಪಾಂಡೆ ಅವರಿಗೆ ಈ ಹರಾಜಿನಲ್ಲಿ ಮೂಲಬೆಲೆ ₹ 50 ಲಕ್ಷ ಮಾತ್ರ ಲಭಿಸಿತು.

ಹರಾಜು ಪ್ರಕ್ರಿಯೆಯ ಮೊದಲ ಸುತ್ತಿನಲ್ಲಿ ಅವರು ಖರೀದಿಯಾಗಿರಲಿಲ್ಲ. ಎರಡನೇ ಸುತ್ತಿನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಫ್ರ್ಯಾಂಚೈಸಿಯು ಬ್ಯಾಟರ್ ಪಾಂಡೆಗೆ ಮಣೆ ಹಾಕಿತು. ಕರ್ನಾಟಕದ ಸ್ಪಿನ್-ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರೂ ತಮ್ಮ ಮೂಲಬೆಲೆ ₹ 20 ಲಕ್ಷ ಪಡೆದು ಮುಂಬೈ ಇಂಡಿಯನ್ಸ್‌ಗೆ ಸೇರ್ಪಡೆಯಾದರು.

ಆದರೆ, ಕರುಣ್ ನಾಯರ್ ಅವರಿಗೆ ಯಾವ ತಂಡದಲ್ಲಿಯೂ ಸ್ಥಾನ ಲಭಿಸಲಿಲ್ಲ. ಅವರಿಗೆ ₹ 50 ಲಕ್ಷ ಮೂಲಬೆಲೆ ನಿಗದಿಪಡಿಸಲಾಗಿತ್ತು. ರಾಜ್ಯದ ಒಟ್ಟು 11 ಆಟಗಾರರು ಸ್ಪರ್ಧೆಯಲ್ಲಿದ್ದರು.

### ಖ್ಯಾತನಾಮರಿಗೆ ಸಿಗದ ಮೌಲ್ಯ

ದಕ್ಷಿಣ ಆಫ್ರಿಕಾದ ಬ್ಯಾಟರ್ ರಸಿ ವ್ಯಾನ್ ಡೆರ್ ಡಸೆ,, ನ್ಯೂಜಿಲೆಂಡ್ ಆಲ್‌ರೌಂಡರ್ ಜಿಮ್ಮಿ ನಿಶಾಮ್, ಬೌಲರ್ ಕೈಲ್ ಜೆಮಿಸನ್, ಇಂಗ್ಲೆಂಡ್‌ನ ವಿಕೆಟ್‌ಕೀಪರ್ ಬ್ಯಾಟರ್ ಫಿಲಿಪ್ ಸಾಲ್ಟ್ ಮತ್ತು ಭಾರತದ ಸರ್ಫರಾಜ್ ಖಾನ್ ಸೇರಿ ಹಲವು ಖ್ಯಾತ ಆಟಗಾರರು ಮಾರಾಟವಾಗದೇ ಉಳಿದರು.

### ಪ್ರಶಸ್ತಿ ಮೊತ್ತ ಮೀರಿದ ದಾಖಲೆ

ಹೋದ ವರ್ಷದ ಐಪಿಎಲ್‌ನಲ್ಲಿ ವಿಜೇತರ ತಂಡಕ್ಕೆ ₹ 20 ಕೋಟಿ ನೀಡಲಾಗಿತ್ತು. ಆದರೆ ಈ ಮೊತ್ತಕ್ಕಿಂತಲೂ ಹೆಚ್ಚಿನ ಮೌಲ್ಯವನ್ನು ಈ ಹರಾಜಿನಲ್ಲಿ ಇಬ್ಬರು ಪಡೆದಿದ್ದು ವಿಶೇಷ. ಪ್ಯಾಟ್ ಕಮಿನ್ಸ್ ಮತ್ತು ಸ್ಟಾರ್ಕ್ ಅವರು ತಲಾ ₹ 20 ಕೋಟಿಗಿಂತ ಹೆಚ್ಚಿನ ಮೌಲ್ಯವನ್ನು ಗಳಿಸಿ ಅಚ್ಚರಿ ಮೂಡಿಸಿದರು. ಈ ವಿಷಯವು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ. ಮುಂದಿನ ಬಾರಿ ಐಪಿಎಲ್ ಪ್ರಶಸ್ತಿ ಮೊತ್ತವನ್ನು ಹೆಚ್ಚಳ ಮಾಡಬಹುದೇ ಎಂಬ ಪ್ರಶ್ನೆಗಳನ್ನೂ ಕೆಲವು ಕೇಳಿದ್ದಾರೆ.

# ಝೋರ್ಜಿ ಶತಕ: ದಕ್ಷಿಣ ಆಫ್ರಿಕಾಕ್ಕೆ ಮಣಿದ ಭಾರತ

**ಗೆಬೆಹಾ, ದಕ್ಷಿಣ ಆಫ್ರಿಕಾ, (ಪಿಟಿಐ):** ನಾಂದ್ರೆ ಬರ್ಗರ್ ಅವರ ಅಮೋಘ ಬೌಲಿಂಗ್ ಮತ್ತು ಟೋನಿ ಡಿ ಝೋರ್ಜಿ ಅಜೇಯ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಮಂಗಳವಾರ ಇಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಭಾರತದ ಎದುರು ಜಯಿಸಿತು.

ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಾಯಿ ಸುದರ್ಶನ್ 83 ಎಸೆತಗಳಲ್ಲಿ 62 (4x7, 6x1) ಹಾಗೂ ನಾಯಕ ಕೆ.ಎಲ್. ರಾಹುಲ್ (56; 64ಎ, 4X7) ಅರ್ಧಶತಕದ ಬಲದಿಂದ ತಂಡವು 46.2 ಓವರ್‌ಗಳಲ್ಲಿ 211 ರನ್ ಗಳಿಸಿತು. ಇವರಿಬ್ಬರೂ ಮೂರನೇ ವಿಕೆಟ್‌ಗೆ 68 ರನ್ ಸೇರಿಸಿದ್ದು ಬಿಟ್ಟರೆ, ಉಳಿದಂತೆ ದೊಡ್ಡ ಜೊತೆಯಾಟ ಬರಲಿಲ್ಲ.


ಶತಕ ಗಳಿಸಿದ ಸಂಭ್ರಮದಲ್ಲಿ ಟೋನಿ ಡಿ ಝೋರ್ಜಿ –ಎಎಫ್‌ಪಿ ಚಿತ್ರ

ಉಳಿದ ಬ್ಯಾಟರ್‌ಗಳು ವೇಗದ ದಾಳಿಯ ಎದುರು ಹೋರಾಟ ತೋರಲು ವಿಫಲರಾಗಿ ತಂಡ 46.2 ಓವರುಗಳಲ್ಲಿ ಪತನ ಕಂಡಿತು. ಒಂದು ಹಂತದಲ್ಲಿ 2 ವಿಕೆಟ್‌ಗೆ 114 ರನ್ ಗಳಿಸಿದ್ದ ಭಾರತ ಕೊನೆಯ ಎಂಟು ವಿಕೆಟ್‌ಗಳನ್ನು 97 ರನ್‌ಗಳಿಗೆ ಕಳೆದುಕೊಂಡಿತು. ಬೌಲರ್ ನಾಂದ್ರೆ ಬರ್ಗರ್ ಮೂರು ವಿಕೆಟ್ ಗಳಿಸಿದರು.

ಸಾಧಾರಣ ಗುರಿ ಬೆನ್ನಟ್ಟಿದ ಆತಿಥೇಯ ತಂಡದ ಝೋರ್ಜಿ (ಔಟಾಗದೆ 119; 122ಎ, 4X9, 6X6) ಮತ್ತು ರೀಜಾ ಹೆನ್ರಿಕ್ಸ್ (52; 81ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿದರು. ಇದರಿಂದಾಗಿ ತಂಡದ ಜಯವು ಸುಲಭವಾಯಿತು. 3 ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

**ಬ್ಯಾಟಿಂಗ್ ವೈಫಲ್ಯ:** ಋತುರಾಜ್ ಗಾಯಕವಾಡ್ 2ನೇ ಎಸೆತದಲ್ಲೇ ಬರ್ಗರ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ತಿಲಕ್ ವರ್ಮಾ (10) ಕೂಡ ಅವರ ಬೌನ್ಸರ್‌ಗೆ ವಿಕೆಟ್ ತೆತ್ತ ನಂತರ ಸುದರ್ಶನ್‌– ರಾಹುಲ್ ಜೋಡಿ ಚೇತರಿಕೆಯ ಆಟವಾಡಿತು. ಪವರ್ ಪ್ಲೇ ನಂತರ ಭಾರತದ ಮೊತ್ತ 1 ವಿಕೆಟ್‌ಗೆ 46. ಸ್ಪಿನ್ನರ್‌ಗಳು ದಾಳಿಗಿಳಿಯುತ್ತಿದ್ದಂತೆ ಸುದರ್ಶನ್ ಹೊಡೆತಗಳಿಗೆ ಮುಂದಾದರು. 20ನೇ ಓವರ್‌ನಲ್ಲಿ ಸುದರ್ಶನ್ ಅರ್ಧ ಶತಕ ದಾಖಲಿಸಿದರು.

ಸಂಜು ಸ್ಯಾಮ್ಸನ್ ತಮಗೆ ದೊರೆತ ಉತ್ತಮ ಅವಕಾಶ ಸದುಪಯೋಗಪಡಿಸಿಕೊಳ್ಳಲಿಲ್ಲ. ಅವರು ಹೆಂಡ್ರಿಕ್ಸ್ ಬೌಲಿಂಗ್‌ನಲ್ಲಿ ಚೆಂಡನ್ನು ವಿಕೆಟ್‌ಗೆಳೆದುಕೊಂಡರು. ಶ್ರೇಯಸ್ ಅಯ್ಯರ್ ಸ್ಥಾನದಲ್ಲಿ ಪದಾರ್ಪಣೆ ಅವಕಾಶ ಪಡೆದ ರಿಂಕು ಸಿಂಗ್ 14 ಎಸೆತಗಳಲ್ಲಿ 16 ರನ್ ಹೊಡೆದು ಭರವಸೆ ಮೂಡಿಸಿದರು. ಇನಿಂಗ್ಸ್‌ನ 35ನೇ ಓವರ್ ಮಾಡಿದ ಕೇಶವ್ ಮಹಾರಾಜ್ ಬೌಲಿಂಗ್‌ನಲ್ಲಿ ಲಾಂಗ್‌ಆನ್‌ಗೆ ಸಿಕ್ಸರ್ ಸೇರಿದಂತೆ 16 ರನ್ ಗಳಿಸಿದರು. ಆದರೆ ಅದೇ ಬೌಲರ್ ಎಸೆತದಲ್ಲಿ ಸ್ಟಂಪ್ಡ್ ಆದರು. ನಂತರ ತಂಡ ಕುಸಿದರೂ, ಬಾಲಂಗೋಚಿಗಳಾದ ಆವೇಶ್ ಖಾನ್ (9) ಮತ್ತು ಅರ್ಷದೀಪ್ ಸಿಂಗ್ (18) 200ರ ಗಡಿದಾಟಲು ನೆರವಾದರು.

**ಸಂಕ್ಷಿಪ್ತ ಸ್ಕೋರು:** **ಭಾರತ:** 46.2 ಓವರುಗಳಲ್ಲಿ 211 (ಸಾಯಿ ಸುದರ್ಶನ್ 62, ಕೆ.ಎಲ್.ರಾಹುಲ್ 56, ರಿಂಕು ಸಿಂಗ್ 17, ಅರ್ಷದೀಪ್ ಸಿಂಗ್ 18; ನ್ಯಾಂಡ್ರೆ ಬರ್ಗರ್ 30ಕ್ಕೆ3, ಬ್ಯೂರನ್ ಹೆಂಡ್ರಿಕ್ಸ್ 34ಕ್ಕೆ2, ಕೇಶವ್ ಮಹಾರಾಜ್ 51ಕ್ಕೆ2). **ದಕ್ಷಿಣ ಆಫ್ರಿಕಾ:** 42.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 215 (ರೀಜಾ ಹೆಂಡ್ರಿಕ್ಸ್ 52, ಟೋನಿ ಡಿ ಝೋರ್ಜಿ ಔಟಾಗದೆ 119, ರೆಸಿ ವ್ಯಾನ್ ಡೆರ್ ಡಸೆ 36, ರಿಂಕು ಸಿಂಗ್ 2 ಕ್ಕೆ 1)
**ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ 8 ವಿಕೆಟ್‌ಗಳ ಜಯ.
**ಪಂದ್ಯಶ್ರೇಷ್ಠ:** ಟೋನಿ ಡಿ ಝೋರ್ಜಿ.

### ಪ್ರೊ ಕಬಡ್ಡಿ ಲೀಗ್: ವಿನಯ್, ಪ್ರಪಂಚನ್, ಮೋಹಿತ್ ನಂದಾಲ್ ಮಿಂಚು

# ಬಿಗಿ ಹಿಡಿತ: 3ನೇ ಸ್ಥಾನಕ್ಕೆ ಹರಿಯಾಣ ಜಿಗಿತ

• ವಿಕ್ರಂ ಕಾಂತಿಕೆರೆ

**ಪುಣೆ:** ಆಲ್‌ರೌಂಡ್ ಆಟದ ಮೂಲಕ ಕಬಡ್ಡಿ ಪ್ರಿಯರಿಗೆ ರೋಮಾಂಚನ ನೀಡಿದ ಹರಿಯಾಣ ಸ್ಟೀಲರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿಯಿತು. ಇಲ್ಲಿನ ಬಾಲೇವಾಡಿಯ ಶ್ರೀಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಹರಿಯಾಣ 31–29ರಲ್ಲಿ ಮಣಿಸಿತು.

ಹಿಂದಿನ ಪಂದ್ಯದಲ್ಲಿ ಆತಿಥೇಯ ಪುಣೇರಿ ಪಲ್ಟನ್ ವಿರುದ್ಧ ಗೆಲುವು ಸಾಧಿಸಿದ್ದ ಹರಿಯಾಣ ಸ್ಟೀಲರ್ಸ್ ಭರವಸೆಯಿಂದಲೇ ಕಣಕ್ಕೆ ಇಳಿದಿತ್ತು. ಆದರೆ, ಪ್ರೊ ಕಬಡ್ಡಿಯಲ್ಲಿ ಈವರೆಗಿನ ಸಾಧನೆಯ ಬಲವೂ ಗುಜರಾತ್ ತಂಡದ ಬೆನ್ನಿಗಿತ್ತು. ಈ ಹಿಂದೆ ಉಭಯ ತಂಡಗಳು ಒಟ್ಟು ಏಳು ಬಾರಿ ಮುಖಾಮುಖಿಯಾದಾಗ ಗುಜರಾತ್ ನಾಲ್ಕರಲ್ಲಿ ಜಯ ಸಾಧಿಸಿ ಒಂದನ್ನು ಟೈ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿತ್ತು. ವಿನಯ್ ಮತ್ತು ರಾಕೇಶ್ ಕ್ರಮವಾಗಿ ಹರಿಯಾಣ ಮತ್ತು ಗುಜರಾತ್ ತಂಡಗಳ ಮೊದಲ ರೈಡಿಂಗ್‌ನಲ್ಲಿ ತಲಾ ಒಂದೊಂದು ಪಾಯಿಂಟ್ ತಂದುಕೊಟ್ಟರು.


ಗುಜರಾತ್ ಜೈಂಟ್ಸ್ ಆಟಗಾರರಿಂದ ತಪ್ಪಿಸಿಕೊಂಡ ಹರಿಯಾಣ ಸ್ಟೀಲರ್ಸ್‌ನ ವಿನಯ್

ಹರಿಯಾಣ ತಂಡ ನಿಧಾನಕ್ಕೆ ಹಿಡಿತ ಸಾಧಿಸಿ ಮೊದಲಾರ್ಧದ ಮುಕ್ತಾಯಕ್ಕೆ 17–10ರ ಮುನ್ನಡೆ ಗಳಿಸಿತು.

ಗುಜರಾತ್ ದ್ವಿತೀಯಾರ್ಧದ ಆರಂಭದಲ್ಲಿ ಚೇತರಿಸಿಕೊಂಡಿತು. 26ನೇ ನಿಮಿಷ ಪ್ರಪಂಚನ್ ಅವರನ್ನು ಬಲೆಗೆ ಕೆಡವಿ ಎದುರಾಳಿ ಅಂಗಣವನ್ನು ಖಾಲಿ ಮಾಡಿತು. ಪಂದ್ಯದ ಮುಕ್ತಾಯಕ್ಕೆ 9 ನಿಮಿಷ ಬಾಕಿ ಇರುವಾಗ 22–22ರ ಸಮಬಲ ಸಾಧಿಸುವ ಮೂಲಕ ಪ್ರೇಕ್ಷಕರ ಕುತೂಹಲ ಹೆಚ್ಚಿಸಿತು.

ಪಟ್ಟು ಬಿಡದ ಹರಿಯಾಣ ಕೊನೆಯ 5 ನಿಮಿಷಗಳು ಇರುವಾಗ 26–24ರ ಮುನ್ನಡೆ ಗಳಿಸಿ ಮತ್ತೆ ಹಳಿಗೆ ಮರಳಿತು. ಸೋನು ಅವರ 'ಆ್ಯಂಕಲ್ ಹೋಲ್ಡ್' ಮಾಡಿದ ಹರ್ಷ ನಿರ್ಣಾಯಕ ಪಾಯಿಂಟ್ ತಂದುಕೊಟ್ಟು ಹರಿಯಾಣವನ್ನು 29–26ರಲ್ಲಿ ಮುನ್ನಡೆಸಿದರು. ಕೊನೆಯ ನಿಮಿಷದಲ್ಲಿ ಇಬ್ಬರನ್ನು ಔಟ್ ಮಾಡಿದ ವಿನಯ್ ಮುನ್ನಡೆಯನ್ನು ಇನ್ನಷ್ಟು ಹೆಚ್ಚಿಸಿ ಪಾಯಿಂಟ್ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದ್ದ ಗುಜರಾತ್ ತಂಡವನ್ನು 4ನೇ ಸ್ಥಾನಕ್ಕೆ ತಳ್ಳಿದರು.

**ಇಂದಿನ ಪಂದ್ಯಗಳು**
**ಜೈಪುರ್ ಪಿಂಕ್ ಪ್ಯಾಂಥರ್ಸ್–ಯು.ಪಿ.ಯೋಧಾ (ರಾತ್ರಿ 8.00)**
**ಬೆಂಗಳೂರು ಬುಲ್ಸ್–ಪುಣೇರಿ ಪಲ್ಟಾನ್ (ರಾತ್ರಿ 9.00)**

### ಪೂರ್ಣ ಚೇತರಿಕೆಯತ್ತ ರಿಷಭ್ ಪಂತ್



**ದುಬೈ:** ಪ್ರತಿಭಾನ್ವಿತ ಆಟಗಾರ ರಿಷಭ್ ಪಂತ್ ಅವರು ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹತ್ತಿರ ಬರುತ್ತಿದ್ದಂತೆಯೇ ಮುಂದಿನ ಕೆಲವು ತಿಂಗಳಲ್ಲಿ ಪೂರ್ಣವಾಗಿ ಚೇತರಿಸಿಕೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಉತ್ತರಾಖಂಡದ ರೂರ್ಕಿ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಅವರು ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು. ಆದರೆ ತೀವ್ರ ಗಾಯಗೊಂಡ ಅವರು ಈ ವರ್ಷವಿಡೀ ಕ್ರಿಕೆಟ್‌ನಿಂದ ದೂರವಿರಬೇಕಾಯಿತು.

'ಕೆಲವು ತಿಂಗಳ ಹಿಂದೆ ಇದ್ದುದಕ್ಕಿಂತ ಈಗ ನಾನು ಬಹಳಷ್ಟು ಸುಧಾರಿಸಿಕೊಂಡಿದ್ದೇನೆ. ಪೂರ್ಣ ಗುಣಮುಖನಾಗುವ ಹಾದಿಯಲ್ಲಿದ್ದೇನೆ. ಇನ್ನು ಕೆಲವೇ ತಿಂಗಳು ಬೇಕಾಗಬಹುದು' ಎಂದು ಡೆಲ್ಲಿ ಕ್ಯಾಪಿಟಲ್ಸ್ ಇನ್‌ಸ್ಟಾಗ್ರಾಮ್ ಪುಟದಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ 26 ವರ್ಷದ ಪಂತ್ ಹೇಳಿದ್ದಾರೆ.